BUDGET ESTIMATES FOR 1965-66—DEMANDS FOR GRANTS

Demand No. 14—Supplies and Disposals

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ, ನಿನ್ನೆಯ ದಿವಸ ನಾನು ಮಾತ ನಾಡುತ್ತಾ ಇಂಡಸ್ಟ್ರೀಸ್ ಮತ್ತು ವ್ಯವಸಾಯ ಒಂದಕ್ಕೊಂದು ಪರಸ್ಪರ ಸಂಬಂಧ ಇರಬೇಕು ಎಂದು ಹೇಳುತ್ತಿದ್ದೆನು. ದೇಶದಲ್ಲಿ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಆಗಬೇಕು ಎಂದು ಹೇಳಿದೆ. ವ್ಯವಸಾಯಕ್ಕೆ ಸಹಾಯಕವಾಗುವಂತೆ ಟ್ರ್ಯಾಕ್ಟರ್ ಇಂಡಸ್ಟ್ರೀಸ್ ಶೀಘ್ರವಾಗಿ ಸ್ಥಾಪನೆ ಮಾಡ ಬೇಕು. ಅದೇ ರೀತಿ ಕೆಮಿಕಲ್ಸ್ ಫರ್ಟಿಲೈಜರ್ಸ್ ಇಂಡಸ್ಟ್ರೀಸ್ ಸ್ಥಾಪನೆ ಮಾಡಬೇಕು. ಅದೇ ರೀತಿ ಯಾಗಿ ವ್ಯವಸಾಯಗಾರರಿಗೆ ಸಮೃದ್ಧಿಯಾಗಿ ಗೊಬ್ಬರ ದೊರೆಯುವಂತೆ ಇಂಡಸ್ಟ್ರೀಸ್ ಸ್ಟಾರ್ಟ್ ಮಾಡಬೇಕು ಎಂದು ಹೇಳುತ್ತೇನೆ.

ಸರಕಾರದ ಈಗಿನ ಇಂಡಸ್ಟ್ರಿಯಲ್ ಪಾಲಿಸಿ ಹೇಗಿದೆ ಎಂದರೆ ಬಂಡವಾಳಗಾರರಿಗೆ ಸಹಾಯಕ ವಾಗುವಂತೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದೀರಿ. ಭಾರತ ದೇಶದಲ್ಲಿ ಇವತ್ತಿನ ದಿವಸ 90 ಪರ್ಸೆಂಟ್ ಇಂಡಸ್ಟ್ರೀಸ್ ಪ್ರೈವೇಟ್ ಸೆಕ್ಟರ್‌ನಲ್ಲಿವೆ. ಪಬ್ಲಿಕ್ ಸೆಕ್ಟರ್‌ನಲ್ಲಿ 10 ಪರ್ಸೆಂಟ್ ಮಾತ್ರ ಇದೆ. ಪ್ರೈವೇಟ್ ಸೆಕ್ಟರ್‌ಕ್ಕೆ ಎನ್‌ಕರೇಜ್‌ಮೆಂಟ್ ಕೊಟ್ಟರೆ ದೇಶದಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಜಾಸ್ತಿಯಾಗುವುದಿಲ್ಲ ಶಾಂತಿ ಸಮಾಧಾನ ಜನರಿಗೆ ಬರುತ್ತದೆ. ಆದರೆ ದೇಶದಲ್ಲಿ ಕ್ಯಾಪಿಟಾಲಿಸ್ಟ್ ಮನೋಭಾವ ಬೆಳೆದು ಅವರಿಗೆ ಸುಖ ಶಾಂತಿ ದೊರೆಯುವುದಕ್ಕೆ ಅನುಕೂಲವಾಗುತ್ತದೆ. ಈ ಅಂಶದ ಕಡೆಗೆ ಸರಕಾರ ಗಮನ ಕೊಡಬೇಕಾದುದು ಅಗತ್ಯ.

ದೇಶದಲ್ಲಿ ಅನೇಕ ಇಂಡಸ್ಟ್ರೀಜ್ ಸ್ಥಾಪನೆ ಮಾಡಬೇಕು. ಹೊಸಪೇಟೆಯಲ್ಲಿ ಒಂದು ಸ್ಟೀಲ್ ಪ್ಲಾಂಟ್ ಸ್ಥಾಪನೆ ಮಾಡಲು ಸರಕಾರ ಪ್ರಯತ್ನ ಮಾಡುತ್ತಿದ್ದಾರೆ. ಇಂಡಸ್ಟ್ರೀಸ್ ಬೆಳೆದರೆ ದೇಶ ಮುಂದಕ್ಕೆ ಬರಲು ಅನುಕೂಲವಾಗುತ್ತದೆ. ಸ್ಟೀಲ್ ಪ್ಲ್ಯಾಂಟ್ ಸ್ಥಾಪನೆ ಮಾಡುವುದಲ್ಲದೆ ಅಲ್ಯೂ ಮಿನಿಯಂ ಹಾಗು ಇತರ ಫ್ಯಾಕ್ಟರೀಸ್ ಸಾಧ್ಯವಾದ ಮಟ್ಟಿಗೆ ಶೀಘ್ರವಾಗಿ ಸ್ಥಾಪನೆ ಮಾಡಬೇಕು.

ನಮ್ಮ ದೇಶದಲ್ಲಿ ಫರ್ಟಿಲೈಜರ್ಸ್ ಫ್ಯಾಕ್ಟರಿ ಕೆಮಿಕಲ್ ಇಂಡಸ್ಟ್ರೀಸ್ ಬಲಪಡಿಸಬೇಕಾಗಿದೆ. ಮೈಸೂರು ನಗರದ ಹತ್ತಿರ ಬೆಳಗೊಳದಲ್ಲಿ ಒಂದು ಫರ್ಟಿಲೈಜರ್ಸ್ ಫ್ಯಾಕ್ಟರಿ ಇದೆ. ಈ ಫ್ಯಾಕ್ಟರಿಯ ಕೆಪಾಸಿಟಿ ಜಾಸ್ತಿ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ಅದೇ ರೀತಿಯಾಗಿ ವ್ಯವಸಾಯಕ್ಕೆ ಅನುಕೂಲವಾಗುವ ಟ್ರ್ಯಾಕ್ಟರಕ್ಕೆ ಸಂಬಂಧಪಟ್ಟ ಇಂಡಸ್ಟ್ರೀಸ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಬಿಲ್ಡಿಂಗ್ ಇಂಡಸ್ಟ್ರೀಸ್. ನಮ್ಮ ದೇಶದಲ್ಲಿ ಬಿಲ್ಡಿಂಗ್ ಇಂಡಸ್ಟ್ರೀ ಪ್ರಾರಂಭ ಮಾಡಲು ಗಮನ ಕೊಟ್ಟಿಲ್ಲ. ಇದಕ್ಕೆ ದುಡ್ಡಿನ ಸಹಾಯ ಕೊಟ್ಟಿದ್ದಾರೆ. ಆದರೆ ಅದು ಸರಿಯಾಗಿ ಉಪ ಯೋಗವಾಗಿಲ್ಲ. ಫಾರೀನ್ ಕಂಟ್ರೀಸ್‌ಗಳಲ್ಲಿ ಲಕ್ಷಾಂತರ ಪ್ರಜೆಗಳು ಈ ಇಂಡಸ್ಟ್ರೀ ಇಂದ ಉಪ ಯೋಗ ಪಡೆಯುತ್ತಿದ್ದಾರೆ ಎಂದು ಗೊತ್ತಾಗಿದೆ. ಆದುದರಿಂದ ಸರಕಾರದವರು ಬಿಲ್ಡಿಂಗ್ ಇಂಡಸ್ಟ್ರೀ ಕಡೆ ಗಮನ ಕೊಟ್ಟು ಮನೆಗಳನ್ನು ಕಟ್ಟುವುದಕ್ಕೆ ಅನುಕೂಲ ಮಾಡಿಕೊಡಬೇಕು ಹಾಗು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಅತಿ ಶೀಘ್ರವಾಗಿ ಬಿಲ್ಡಿಂಗ್ ಇಂಡಸ್ಟ್ರೀ ಸ್ಥಾಪನೆ ಮಾಡ ಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನ್ನು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಒಂದು ಸ್ಟಡಿ ಟೀಂ ರಾಜ್ಯದಲ್ಲಿ ಟೂರ್ ಮಾಡಿ ಕೊಟ್ಟಿರುವ ರಿಪೋರ್ಟಿನಲ್ಲಿ ಈ ರೀತಿ ಹೇಳಿದ್ದಾರೆ:—

> "A positive approach for promoting industries based on Aluminium, Plastic, Ceramics, Glass and other industries .. Government should take a definite lead in promoting and motivating entrepreneurs to undertake industry into this field."

ಈ ವಿಚಾರದಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಶೀಘ್ರವಾಗಿ ಸ್ಥಾಪನೆ ಮಾಡ ಬೇಕು. ಜಪಾನ್ ದೇಶದಲ್ಲಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಜಕ್ಕೆ ಹೆಚ್ಚಾಗಿ ಗಮನ ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ ಕಾಟೇಜ್ ಇಂಡಸ್ಟ್ರೀಸ್ ಬೆಳೆದಿರುವುದಿಲ್ಲ. ದೇಶದಲ್ಲಿದ್ದ ಕಾಟೇಜ್ ಇಂಡಸ್ಟ್ರೀಸ್ ಹಾಳಾಗಿ ಹೋಗುತ್ತಿವೆ.

> "Japanese experience is that small-scale industries can get an important place in modern industrial economy and improve side by side other industries."

(ಶ್ರೀ ಎಚ್. ಆರ್. ಕೇಶವಮೂರ್ತಿ)

ಇದನ್ನು ತಿಳಿದುಕೊಂಡು ಈ ಗ್ರಾಮ ಕೈಗಾರಿಕೆಗಳಿಗೆ ಹೆಚ್ಚು ಗಮನ ಕೊಟ್ಟು ಪಟ್ಟಣದಂತೆ ಹಳ್ಳಿಗಳು ಕೂಡ ಬೆಳೆಯಬೇಕು. ನಮ್ಮ ನೀತಿಯಲ್ಲಿ ಬ್ಯಾಲೆನ್ಸ್ಡ್ ಎಕಾನಮಿ ಇರಬೇಕು. ಪಟ್ಟಣಗಳು ಮಾತ್ರ ಮುಂದೆ ಬಂದು ಹಳ್ಳಿಗಳು ಹಾಳಾಗಿ ಹೋಗುವುದು ಸರಿಯಲ್ಲ. ಹಳ್ಳಿಗಳಿಂದ ಜನ ಪಟ್ಟಣಕ್ಕೆ ಬಂದು ಪಟ್ಟಣಗಳಲ್ಲಿಯೇ ನಿಂತುಬಿಟ್ಟರೆ ಹಳ್ಳಿಗಳು ನಾಶವಾಗುತ್ತವೆ. ಹಳ್ಳಿಗಳ ಅಭಿವೃದ್ಧಿಗೆ ಗಮನ ಕೊಟ್ಟು ರೂರಲ್ ಇಂಡಸ್ಟ್ರೀಸ್, ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಸ್ಥಾಪನೆ ಮಾಡಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಎಲ್ಲ ಇಂಡಸ್ಟ್ರೀಸ್ ಒಂದು ಕಡೆ ಕಾನ್ಸನ್‌ಟ್ರೇಟ್ ಮಾಡುತ್ತೀರಿ. ಹೀಗೆ ರೀಜನಲ್ ಇಂಬ್ಯಾಲನ್ಸ್ ಇರುವುದು ಸರಿಯಲ್ಲ. ಒಂದು ಪ್ರದೇಶಕ್ಕೆ ಅನುಕೂಲವಾಗುತ್ತದೆ ಇನ್ನೊಂದಕ್ಕೆ ಅನಾನುಕೂಲವಾಗುತ್ತದೆ. ಈ ರೀತಿಯ ಸ್ಟೆಪ್‌ಮದರ್ಲಿ ಟ್ರೀಟ್‌ಮೆಂಟ್ ಅಂದರೆ ಮಲತಾಯಿ ಧೋರಣೆ ಇಟ್ಟುಕೊಳ್ಳುವುದು ಒಳ್ಳೆಯದಲ್ಲ. ಒಂದೇ ಕಡೆ ಕಾನ್‌ಸನ್‌ಟ್ರೇಟ್ ಮಾಡುವುದು ಒಳ್ಳೆಯದಲ್ಲ. ಇದರಿಂದ ಏನಾಗುತ್ತದೆ ಅಂದರೆ ದೇಶದ ಸರ್ವತೋಮುಖ ಅಭಿವೃದ್ಧಿಗೆ ಆತಂಕ ಬರುತ್ತದೆ. ನಮ್ಮ ರಾಜ್ಯದ ಎಲ್ಲ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಹರಡುವಂತೆ ಏರ್ಪಾಡು ಮಾಡಬೇಕು. ಶ್ರೀಮಾನ್ ಜತ್ತಿಯವರು ಚೀಫ್ ಮಿನಿಸ್ಟರ್ ಆಗಿದ್ದಾಗ್ಗೆ ಒಂದು ರಿಪೋರ್ಟು ಪ್ರಕಟವಾಗಿದೆ. ಲೊಕೇಶನ್ ಆಫ್ ಇಂಡಸ್ಟ್ರೀಸ್ ಇನ್ ಮೈಸೂರ್ ಸ್ಟೇಟ್— ರಿಪೋರ್ಟ್ ಆಫ್ 1962 ಬೈ ಕೆ. ಎಂ. ಮುನಶಿ ಎಂದು ಈ ರಿಪೋರ್ಟು ಇದೆ. ಈ ರಿಪೋರ್ಟು ಪ್ರಕಾರ ಹಾಸನ ಡಿಸ್ಟ್ರಿಕ್ಟು ಕಡೆಯ ಡಿಸ್ಟ್ರಿಕ್ಟ್ ಆಗಿದೆ. ಬೆಂಗಳೂರು ಡಿಸ್ಟ್ರಿಕ್ಟ್ ಮೊದಲನೇ ಸ್ಥಾನದಲ್ಲಿದೆ. ಬೆಂಗಳೂರಿನಲ್ಲಿ 61,000 ಇಂಡಸ್ಟ್ರಿಯಲ್ ಲೇಬರರ್ಸ್ ಇದ್ದಾರೆ. ಹಾಸನದಲ್ಲಿ 1,200 ಜನ ಇದ್ದಾರೆ. ಅದೇ ರೀತಿ ಹೊಸ ಮೈಸೂರು ಪ್ರದೇಶದಲ್ಲಿ ಬಿಜಾಪೂರ ಜಿಲ್ಲೆ ಹಾಗು ಬೀದರ್ ಜಿಲ್ಲೆಯಲ್ಲಿ ಬಹಳ ಕಡಿಮೆ ಕೈಗಾರಿಕಾ ಕೆಲಸಗಾರರು ಇದ್ದಾರೆ ಎಂದು ಈ ವರದಿಯಲ್ಲಿ ಹೇಳಿದೆ. ಅದೇ ರೀತಿ ಮಂಗಳೂರು ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಇಂಡಸ್ಟ್ರೀಸ್ ಇಲ್ಲ. ಇದು ಸರಿಯಲ್ಲ. ರೀಜನಲ್ ಎಂಬ್ಯಾಲನ್ಸ್ ಸರಿ ಮಾಡಬೇಕು. ಸಾಧ್ಯವಾದ ಮಟ್ಟಿಗೆ ಎಲ್ಲ ಕಡೆ ಇಂಡಸ್ಟ್ರೀಸ್ ಹೆಚ್ಚು ಮಾಡಿ ಅದಕ್ಕೆ ಪ್ರೋತ್ಸಾಹ ಕೊಟ್ಟು ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು. ಹಾಸನ ಡಿಸ್ಟ್ರಿಕ್ಟ್ ಬಗ್ಗೆ ರಿಪೋರ್ಟ್‌ನಲ್ಲಿ ಈ ರೀತಿ ಹೇಳಿದ್ದಾರೆ:—

> "An almost continuous rise in the number of perennial factories is witnessed in Chickmagalur so that it has now left Hassan definitely behind. Hassan is the last in the perennial sector. The cause is equally due to the steep decline in the seasonal conditions and would be worth enquiring."

ಹಾಸನ ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ಗಳು ಹಿಂದೆ ಉಳಿದಿವೆ. ಈ ರಿಪೋರ್ಟ್‌ನಲ್ಲಿ ಹೇಳಿರುವ ಹಾಗೆ ಹೆಚ್ಚು ನಿಗಾ ಕೊಟ್ಟು ಹೆಚ್ಚು ಇಂಡಸ್ಟ್ರೀಸ್ ಸ್ಥಾಪನೆ ಮಾಡಬೇಕು ಎಂದು ಹೇಳುತ್ತೇನೆ.

ನಾನು ಒಟ್ಟಿನಲ್ಲಿ ಹೇಳುತ್ತಿರುವುದು ಏನೆಂದರೆ—ನಮ್ಮಲ್ಲಿ ಕೈಗಾರಿಕೆಗಳು ಅಷ್ಟೇನೂ ಒಳ್ಳೆಯಸ್ಥಿತಿಯಲ್ಲಿಲ್ಲ. ಆದರೆ ಹೊರರಾಷ್ಟ್ರಗಳಲ್ಲಿ ಇದು ನಾಗಾಲೋಟದಲ್ಲಿ ಸಾಗುತ್ತಿದೆ. ಅಲ್ಲಿ ಆಟೊಮೆಷನ್ ಬರುತ್ತಿದೆ. ಅಲ್ಲಿ ಅವರು ಎಲೆಕ್ಟ್ರಾನಿಕ್ ಕಂಪ್ಯೂಟರ್ಸ್‌ನ್ನು ಇಟ್ಟುಕೊಂಡು ಅವರು ಸ್ಟ್ಯಾಟಿಸ್‌ಟೀಷಿಯನ್ನರ ಸಹಾಯವಿಲ್ಲದೇನೆ ಅವರ ಕೈಗಾರಿಕೆಗಳನ್ನು ಮುಂದುವರಿಸುತ್ತಿದ್ದಾರೆ. ಅವರ ಪ್ಲಾನು, ಅಂದಾಜ ಮತ್ತು ಯಾವ ಯಾವ ಕೈಗಾರಿಕೆಗಳನ್ನು ಹೇಗೆ ಮುಂದುವರಿಸಬೇಕು ಎಂಬುದನ್ನೆಲ್ಲಾ ಅವುಗಳ ಸಹಾಯದಿಂದ ಮುಂದುವರಿಸುತ್ತಿದ್ದಾರೆ. ಅಲ್ಲಿ ಎಲೆಕ್ಟ್ರಾನಿಕ್ ಜೊತೆಯಲ್ಲಿ ಕಂಪೀಟ್‌ಮಾಡಿ ಕೆಲಸಮಾಡುವಂಥ ಜನರಿದ್ದಾರೆ. ನಮ್ಮ ಮಂತ್ರಿಗಳು ಇಲ್ಲಿಯೂ ನಮ್ಮ ಕೈಗಾರಿಕೆಗಳನ್ನು ಆ ಮಟ್ಟಕ್ಕೆ ತಂದರೆ ನಾವು ನಮ್ಮ ಮಂತ್ರಿಗಳ ಬಗ್ಗೆ ಒಂದು ಹೆಮ್ಮೆ ಪಡಬಹುದು. ಅವಕ್ಕಾಗಿ ನಾನು ಸಲಹೆ ಮಾಡುವುದೇನೆಂದರೆ—ಸೈನ್ಸ್, ಟೆಕ್ನಾಲಜಿ, ಮತ್ತು ಫೈನಾನ್ಸ್ ಈ ಮೂರರಲ್ಲಿ ಚೆನ್ನಾಗಿ ನುರಿತಂಥ ತಜ್ಞರನ್ನು ಒಳಗೊಂಡ ಒಂದು ಹೈ ಪವರ್ ಸಮಿತಿಯನ್ನು ನೇಮಕ ಮಾಡಿ ಅವರ ಸಲಹೆಯ ಪ್ರಕಾರ ನಮ್ಮಲ್ಲಿರತಕ್ಕ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಿ ತನ್ಮೂಲಕ ಜನರ ಆರ್ಥಿಕ ಪರಿಸ್ಥಿತಿಯನ್ನೂ, ನಮ್ಮಲ್ಲಿ ತಯಾರಾಗತಕ್ಕ ಸಾಮಾನುಗಳ ಕ್ವಾಲಟಿ ಮತ್ತು ಕ್ವಾಂಟಟಿಗಳನ್ನು ಹೆಚ್ಚಿಸಿ, ಹಾಗೇ ಹೈಯರ್ ಪ್ರೊಡಕ್ಟವಿಟಿಯನ್ನೂ ತಂದು ಹೊರದೇಶಗಳೊಂದಿಗೆ ಸರಿಸಮಾನವಾದ ರೀತಿಯಲ್ಲಿ ನಮ್ಮ ಕೈಗಾರಿಕೆಗಳು ಕೆಲಸಮಾಡುವಂತೆ

ಮಾಡಬೇಕು. ಇದಕ್ಕಾಗಿ ಒಂದು ಸ್ಟಡೀ ಟೀಮನ್ನು ತಾವು ಪರರಾಷ್ಟ್ರಕ್ಕೆ ಕಳುಹಿಸುವುದೂ ಒಳ್ಳೆಯದೇ. ಆ ಸ್ಟಡೀ ಟೀಮಿನಲ್ಲಿ ನಮ್ಮಲ್ಲಿರತಕ್ಕ ಟೆಕ್ನೀಷಿಯನ್ನುಗಳನ್ನು ಹಾಕಿ ಅವರು ಪರರಾಷ್ಟ್ರದಲ್ಲಿರತಕ್ಕ ಮುಂದುವರಿದಿರತಕ್ಕ ಕೈಗಾರಿಕೆಗಳಲ್ಲಿ ಹೆಚ್ಚಿನ ಅನುಭವ ಪಡೆದು ಬರುವಂತೆ ಒಂದು ಏರ್ಪಾಡನ್ನು ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಕೈಗಾರಿಕಾ ಇಲಾಖೆಯ ಮಂತ್ರಿಗಳು ಈಗ ಸಭೆಯ ಮುಂದಿಟ್ಟಿರುವ ಡಿಮ್ಯಾಂಡ್‌ಗಳನ್ನು ಅಂದರೆ—14,16,24,28 ಮತ್ತು 44ನೇ ಮಾನವಿಗಳಿಗೆ ಸಂಬಂಧಪಟ್ಟ ಹಣದ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ, ನನಗೆ ಕೊಟ್ಟಿರತಕ್ಕ ಸ್ವಲ್ಪಕಾಲಾವಕಾಶದಲ್ಲಿ ನಾನು ರೇಷ್ಮೆಯ ಕೈಗಾರಿಕೆಗೆ ಸಂಬಂಧಪಟ್ಟ ಹಾಗೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸಲು ಇಷ್ಟಪಡುತ್ತೇನೆ.

ಇಂಡಿಯಾ ದೇಶದಲ್ಲಿ ತಯಾರಾಗತಕ್ಕ ಒಟ್ಟು ರೇಷ್ಮೆಯ ವಿಚಾರವನ್ನು ತೆಗೆದುಕೊಂಡರೆ—ಅದರಲ್ಲಿ ನಮ್ಮ ಮೈಸೂರು ದೇಶವೇ ಮೊಟ್ಟ ಮೊದಲನೆಯದು ಎಂಬುದಾಗಿ ತಿಳಿದುಬರುತ್ತದೆ. ಇಂಡಿಯಾ ದೇಶದಲ್ಲಿ ರೇಷ್ಮೆಯನ್ನು ತಯಾರಿಸತಕ್ಕ ರಾಜ್ಯಗಳಲ್ಲಿ ನಮ್ಮ ಮೈಸೂರು ನಾಲ್ಕನೆಯದು; ನಾಲ್ಕನೆಯ ಸ್ಥಾನವನ್ನು ಗಳಿಸಿದೆ. ಇಡೀ ಇಂಡಿಯಾ ದೇಶದಲ್ಲಿ ತಯಾರಾಗತಕ್ಕ ರೇಷ್ಮೆಯ ಪ್ರಮಾಣವನ್ನು ಲೆಕ್ಕಹಾಕಿದಾಗ ನಮ್ಮ ಮೈಸೂರು ರಾಜ್ಯದಲ್ಲಿ ತಯಾರಾತಕ್ಕ ರೇಷ್ಮೆ ಒಟ್ಟು ತಯಾರಾಗತಕ್ಕ ರೇಷ್ಮೆಯಲ್ಲಿ ನಮ್ಮದು ಶೇಕಡ 75 ರಷ್ಟಿದೆ. ಇಂಥ ಒಂದು ಕೈಗಾರಿಕೆಗೆ ಈ ದಿವಸ ಕೇಂದ್ರ ಸರ್ಕಾರ ಮತ್ತು ನಮ್ಮ ರಾಜ್ಯ ಸರ್ಕಾರಗಳು ಕೊಡುತ್ತಿರುವ ಉತ್ತೇಜನದಿಂದ ಈ ಕೈಗಾರಿಕೆ ಇಷ್ಟು ಅಭಿವೃದ್ಧಿಯನ್ನು ಹೊಂದುತ್ತಿದೆ ಎಂದು ಹೇಳಬಹುದು. ಆದರೆ ಈ ಸರ್ಕಾರಗಳು ಇನ್ನೂ ಸ್ವಲ್ಪ ಹೆಚ್ಚಿನ ಆಸಕ್ತಿಯನ್ನು ಇದರ ಬಗ್ಗೆ ವಹಿಸಿದ್ದರೆ ಚೆನ್ನಾಗಿರುತ್ತಿತ್ತೆಂದು ಯಾರಿಗಾದರೂ ಅನಿಸುತ್ತಿದೆ. ಈ ಕೈಗಾರಿಕೆಯ ಅಭಿವೃದ್ಧಿಗಾಗಿ ಕೇಂದ್ರ ಸರಕಾರದವರೊಂದು ಸೆಂಟ್ರಲ್ ಸಿಲ್ಕ್ ಬೋರ್ಡ್ ಎಂದು ಒಂದು ಬೋರ್ಡನ್ನು ಸ್ಥಾಪಿಸಿದ್ದಾರೆ. ಅದರ ಹೆಡ್‌ಕ್ವಾರ್ಟರ್ಸ್ ಈಗ ಬೊಂಬಾಯಿನಲ್ಲಿದೆ. ಹಾಗೇ ಕೇಂದ್ರದವರು ಸ್ಥಾಪಿಸಿರುವ ಟೆಕ್ಸ್‌ಟೈಲ್ ಕಮಿಷನರ ಕೇಂದ್ರ ಕಛೇರಿಯೂ ಬೊಂಬಾಯಿನಲ್ಲೇ ಇದೆ. ಅದರ ಅಧ್ಯಕ್ಷರು ಈ ರೇಷ್ಮೆ ಕೈಗಾರಿಕೆಯ ಕೇಂದ್ರ ಬೋರ್ಡಿಗೂ ಅಧ್ಯಕ್ಷರಾಗಿರುವುದರಿಂದ ಇದರ ಮುಖ್ಯ ಕಛೇರಿಯನ್ನೂ ಬೊಂಬಾಯಿನಲ್ಲೇ ಮಾಡಿಕೊಂಡಿದ್ದಾರೆ. ಹೀಗೆ ಆ ಬೊಂಬಾಯಿನಲ್ಲಿರತಕ್ಕ ಆ ಸಂಸ್ಥೆಯವರು ಈ ಕೈಗಾರಿಕೆಯ ವಿಚಾರದಲ್ಲಿ ಇಲ್ಲಿಗೆ ಎಷ್ಟರಮಟ್ಟಿನ ಗಮನಕೊಟ್ಟಾರು ಎಂಬುದನ್ನು ನಾವೀಗ ಆಲೋಚನೆ ಮಾಡಬೇಕಾಗಿದೆ. ಸ್ವಲ್ಪಕಾಲದ ಹಿಂದೆ ಈ ಕೇಂದ್ರ ಕಛೇರಿಯನ್ನು ಇಲ್ಲೇ ಬೆಂಗಳೂರಿನಲ್ಲಿ ಮಾಡಿದ್ದರು. ಆದರೆ ಅದನ್ನು ಸ್ವಲ್ಪಕಾಲದಲ್ಲೇ ಬೊಂಬಾಯಿಗೆ ವರ್ಗಾಯಿಸಿದ್ದಾರೆ. ಆದರೆ ಹಾಗೆ ಅದು ಕೈಗಾರಿಕಾದೃಷ್ಟಿಯಿಂದ ಬೊಂಬಾಯಿನಲ್ಲಿರಕ್ಕದ್ದು ಸರಿಯೆಂದು ಹೇಳಿದಾಗ್ಯೂ, ರೇಷ್ಮೆ ಬೆಳೆಯುತಕ್ಕವರ ಹಿತದೃಷ್ಟಿಯಿಂದ ನೋಡುವುದಾದರೆ ಅದು ನಮ್ಮ ಬೆಂಗಳೂರಲ್ಲಿರಬೇಕಾದ್ದೇ ಸೂಕ್ತ ಎಂದು ಹೇಳಬೇಕಾಗುವುದು. ಆದುದರಿಂದ ಈ ವಿಚಾರವನ್ನು ಕೇಂದ್ರದವರೊಡನೆ ವ್ಯವಹಾರಮಾಡಿ ಅದನ್ನು ಇಲ್ಲಿಯೇ ಇರುವಂತೆ ಮಾಡಬೇಕೆಂದು ನಾನು ಸೂಚಿಸಲಿಚ್ಛಿಸುತ್ತೇನೆ.

ಇನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕೈಗಾರಿಕೆಗೆ ನಮ್ಮ ಇಂಡಿಯಾ ಸರ್ಕಾರದವರು ಇಡೀ ಹಿಂದೂಸ್ಥಾನದಲ್ಲಿ ನಡೆಸಿರತಕ್ಕ ಕಾರ್ಯಕ್ರಮಗಳನ್ನೂ, ಖರ್ಚುಮಾಡಿರತಕ್ಕ ಹಣವನ್ನೂ ನಾವು ನೋಡುವುದಾದರೆ—ಈ ಬಾಬಿನಲ್ಲಿ ಇಡೀ ಹಿಂದೂಸ್ಥಾನದಲ್ಲಿ ಎಷ್ಟು ಹಣ ಖರ್ಚಾಗಿದೆಯೋ ಅದರಲ್ಲಿ ನಮ್ಮ ರಾಜ್ಯಕ್ಕೆಷ್ಟು ಹಣ ಬರಬೇಕಾಗಿತ್ತೋ ನಮಗೇನು ಒಂದು ಪಾಲು ದೊರೆಯಬೇಕಾಗಿತ್ತೋ ಅಷ್ಟನ್ನು ನಾವು ಆ ಕೇಂದ್ರ ಸರ್ಕಾರದ ಬೋರ್ಡಿನಿಂದ ಪಡೆದಿಲ್ಲ. ಅವರು ಮೊಟ್ಟ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಾಬಿಗೆ 11 ಲಕ್ಷ 18 ಸಾವಿರ ರೂಪಾಯಿಗಳನ್ನು ಒದಗಿಸಿದ್ದರು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ 17 ಲಕ್ಷ 76 ಸಾವಿರ ರೂಪಾಯಿಗಳನ್ನು ಒದಗಿಸಿದ್ದರು. ಇನ್ನು ಮೂರನೇ ಯೋಜನೆಯಲ್ಲಿ 122 ಲಕ್ಷ ರೂಪಾಯಿಗಳ ಒಂದು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ನಮ್ಮ ಮೈಸೂರು ರಾಜ್ಯದಲ್ಲಿ ಉತ್ಪತ್ತಿಯಾಗತಕ್ಕ ರೇಷ್ಮೆಯ ಪ್ರಮಾಣ ಇಡೀ ಇಂಡಿಯಾ ದೇಶದ ಉತ್ಪತ್ತಿಯಲ್ಲಿ ಶೇಕಡ 70–75 ರಷ್ಟಿರುವುದರಿಂದ, ಆ ಹಣದಲ್ಲಿಯೂ ಸಹಾ ಶೇಕಡ 70-75 ರಷ್ಟನ್ನು ನಮ್ಮ ಸಂಸ್ಥಾನದಲ್ಲೇ ಖರ್ಚುಮಾಡಬೇಕಾಗುವುದು. ಆದುದರಿಂದ ನಮ್ಮ ರಾಜ್ಯಕ್ಕೆ ಅಷ್ಟು ಹಣವನ್ನು ದೊರೆಕಿಸಿಕೊಳ್ಳುವುದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಸರ್ಕಾರದವರು ಇದರ ಅಭಿವೃದ್ಧಿಯ ಬಗ್ಗೆ ಹಾಕಿಕೊಂಡಿರತಕ್ಕ ಕೆಲವು ಕಾರ್ಯಗಳ ಬಗ್ಗೆ ನಾನೀಗ ಪ್ರಸ್ತಾಪ ಮಾಡುವುದಾದರೆ, ಅದರಲ್ಲಿ ಮೊಟ್ಟ ಮೊದಲನೆಯದಾಗಿ ಒಳ್ಳೆಯ

(ಶ್ರೀ ಎಂ. ಸಿ. ಬಸಪ್ಪ)

ಮೊಟ್ಟೆಗಳನ್ನು ತಯಾರು ಮಾಡತಕ್ಕ ಕೆಲಸವನ್ನು ನಮ್ಮ ಸರ್ಕಾರದವರೇ ಇಟ್ಟುಕೊಂಡಿದ್ದಾರೆ. ಆದರೆ ಸಾಮಾನ್ಯವಾಗಿ ನಮ್ಮ ರಾಜ್ಯಕ್ಕೆ 8 ಕೋಟಿ ಮೊಟ್ಟೆಗಳು ಬೇಕಾಗುತ್ತದೆಂದು ಅಂದಾಜ ಮಾಡಲಾಗಿದೆ. ಈಗ ಈ ಉದ್ಯಮವನ್ನು ಸರ್ಕಾರೀ ಸಂಸ್ಥೆಗಳೂ ಕೆಲವು ಖಾಸಗೀ ಸಂಸ್ಥೆಗಳೂ ನಡೆಸುತ್ತಿವೆ. ನಮ್ಮಲ್ಲಿರತಕ್ಕ ಒಟ್ಟು ಗ್ರೇನ್ಯೆಜುಗಳ ಸಂಖ್ಯೆ 48,535. ಮೊಟ್ಟೆಗಳನ್ನು ತಯಾರು ಮಾಡತಕ್ಕ ವಿಚಾರದಲ್ಲಿ ಫಾರಿನ್ ಜಾತಿಯ ಅಂದರೆ ಬಿಳಿಯ ಮೊಟ್ಟೆಗಳನ್ನು ತಯಾರಿಸತಕ್ಕ ಕೆಲವು ರೇಷ್ಮೆ ಫಾರಂಗಳನ್ನು ಸರ್ಕಾರದವರು ಸ್ಥಾಪಿಸಿದ್ದಾರೆ. ಆದರೆ ಇವುಗಳಿಂದ ಇಲ್ಲಿಯವರೆಗೂ ಎಷ್ಟು ಮೊಟ್ಟೆಗಳನ್ನು ಉತ್ಪತ್ತಿಮಾಡಿದ್ದಾರೆ, ಜನರಿಗೆಷ್ಟು ಸರಬರಾಯಿ ಮಾಡಿದ್ದಾರೆ ಎಂಬುದನ್ನು ನಾವು ಆಲೋಚನೆ ಮಾಡಿ ನೋಡುವುದಾದರೆ—ಅವುಗಳು ಸರಿಯಾಗಿ ಕೆಲಸ ನಡೆಸುತ್ತಿಲ್ಲ ಎಂದು ಗೊತ್ತಾಗುತ್ತದೆ. ಕೆಲವು ಖಾಸಗೀ ಸಂಸ್ಥೆಯವರಿಗೆ ಈ ಗೂಡುಗಳನ್ನು ತಯಾರಿಸತಕ್ಕ ಕೆಲಸವನ್ನೂ ವಹಿಸಿದ್ದಾರೆ. ಅವರು ಚಿಟ್ಟೆಗಳನ್ನು ತಯಾರು ಮಾಡಿ, ರಿಯರಿಂಗ್‌ಮಾಡಿ ರೇಷ್ಮೆ ಗೂಡುಗಳನ್ನು ತಯಾರಿಸಬೇಕಾಗಿದೆ. ಆದರೆ ಅವರಿಗೆ ಸರಿಯಾದ ವ್ಯವಸ್ಥೆಗಳನ್ನು ಒದಗಿಸಿಲ್ಲ. ಅವರಿಗೆ ಆ ಹುಳುಗಳನ್ನು ಸಾಕಿ, ಮೊಟ್ಟೆಗಳನ್ನು ತಯಾರಿಸತಕ್ಕ ವ್ಯವಸ್ಥಿತವಾದ ಫಾರಂಗಳಿಲ್ಲ. ಅವರು ಬಹಳ ಹಿಂದಿನಿಂದಲೂ ನಡೆಸುತ್ತಿದ್ದ ಆ ಒಂದು ಹಳೆಯ ಪದ್ಧತಿಯಲ್ಲೇ ಅದನ್ನು ಮಾಡುತ್ತಿದ್ದಾರೆ; ಅಂದರೆ ಆ ಮಿಶ್ರಜಾತಿಯ ಹುಳುಗಳು ಸೇರಿದಾಗ ಮಧ್ಯೆ ಒಂದು ಬಿಳೀ ಗೂಡು ಬರುತ್ತೆ, ಅದರಲ್ಲಿ ಬರತಕ್ಕ ಗಂಡು ಚಿಟ್ಟೆ ಹುಳುವನ್ನು ತಯಾರುಮಾಡಿ ಅದರಿಂದ ಕ್ರಾಸ್‌ಬ್ರೀಡ್ ಮಾಡಿ ಬಿಳಿಯ ಮೊಟ್ಟೆಗಳನ್ನು, ಅಂದರೆ ಲೇಯಿಂಗ್ಸ್‌ನ್ನು ಮಾಡತಕ್ಕ ಕ್ರಮ ಸರಿಯಾಗಿಲ್ಲ. ಆದುದರಿಂದ ಅದನ್ನು ಸರ್ಕಾರದವರೇ ಸಂಪೂರ್ಣವಾಗಿ ತಮ್ಮ ಆಡಳಿತದಲ್ಲಿ ಇಟ್ಟುಕೊಂಡು ಇದನ್ನು ಕಾರ್ಯಗತಮಾಡಬೇಕು. ಆದರೆ ಈಗ ನಡೆಯುತ್ತಿರುವ ರೀತಿಯಲ್ಲೇ ಅದು ಮುಂದುವರಿದಲ್ಲಿ ಅದು ಅಷ್ಟು ಯಶಸ್ವಿಯಾಗುವುದಿಲ್ಲ ಎಂದು ಹೇಳುತ್ತೇನೆ.

ಇನ್ನು ಈಗ ಅಲ್ಲಲ್ಲೇ ಚಾಕಿ ರೇರಿಂಗ್ ಸಂಟರುಗಳನ್ನು ಮಾಡಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಚಾಕೀ ಸೆಂಟರುಗಳನ್ನು ಮಾಡಬೇಕೆಂದು ಆಲೋಚಿಸಿದ್ದರೋ ಅದರಲ್ಲಿ ಈಗಾಗಲೇ 80 ನ್ನು ಮಾಡಿದ್ದಾರೆ. ಈ ವರ್ಷ ಇನ್ನೂ 20 ಸೆಂಟರುಗಳನ್ನು ತೆರೆಯಬೇಕೆಂದಿದ್ದಾರೆ. ಆದರೆ ಇದುವರೆಗೂ ಪ್ರಾರಂಭಮಾಡಿರತಕ್ಕ ಚಾಕಿ ಸೆಂಟರುಗಳು ಇರತಕ್ಕ ಪರಿಸ್ಥಿತಿಯನ್ನು ನೋಡಿದರೆ ಇದನ್ನು ಇಲಾಖೆಯವರು ನಾವು 80ನ್ನು ಮಾಡಿದ್ದೇವೆ, 100ನ್ನು ಮಾಡಿದ್ದೇವೆ ಎಂದು ಹೇಳಿಕೊಳ್ಳುವುದಕ್ಕೆ ಮಾತ್ರ ಅವು ಇರಬಹುದೇ ವಿನಾ ಅವು ಕೆಲಸಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಅವುಗಳಲ್ಲಿ ಅನೇಕ ನ್ಯೂನತೆಗಳಿವೆ. ಉದಾಹರಣೆಗೆ ಹೇಳುವುದಾದರೆ—ನಮ್ಮ ತಾಲ್ಲೂಕಿನಲ್ಲೇ ಈಗ 40 ಚಾಕೀ ಸೆಂಟರುಗಳನ್ನು ತೆರೆಯಲಾಗಿದೆ. ಇವರ ಒಂದು ಅಂದಾಜಿನ ಪ್ರಕಾರ ವರ್ಷಕ್ಕೆ ಸುಮಾರು 8 ಸಾವಿರ ರೂಪಾಯಿಗಳ ಖರ್ಚುಬೇಕಾಗುತ್ತದೆ. ಇದಕ್ಕೆ ಬೇಕಾಗಿರತಕ್ಕ ಕನಿಷ್ಠ ಸಿಬ್ಬಂದಿಯೆಂದರೆ ಒಬ್ಬ ಟ್ರೈನ್ಡ್ ಆಪರೇಟರು, ಇಬ್ಬರು ಸೊಪ್ಪನ್ನು ಕತ್ತರಿಸಲು ಚಾಪಿಂಗ್ ಬಾಯ್ಸ್, ಸೊಪ್ಪನ್ನು ಕಿತ್ತು ತರಲು ಅದಕ್ಕೆ ಜನ ಇಷ್ಟೆಲ್ಲಾ ಬೇಕು. ಕಾನೂನಿನಲ್ಲಿ ಇದನ್ನೆಲ್ಲಾ ಅಡಕಮಾಡಿದ್ದಾರೆ. ಆದರೆ ಇದುವರೆಗೆ ಪ್ರಾರಂಭಮಾಡಿರತಕ್ಕ 40 ಚಾಕಿ ಸೆಂಟರುಗಳಲ್ಲಿ ಒಂದೊಂದಕ್ಕೂ ಒಬ್ಬ ಆಪರೇಟರಿರತಕ್ಕ ಕಡೆ ಅವನಿಗೆ ಹುಳುಗಳನ್ನು ಸಾಕತಕ್ಕ ಅಸಿಸ್ಟೆಂಟನ್ನು ಕೊಟ್ಟಿದ್ದಾರೆ. ಅಷ್ಟು ವಿನಾ ಇನ್ನೇನೂ ಇಲ್ಲ. ಆದುದರಿಂದ ಹೇಳುವುದಕ್ಕೆ ಇವುಗಳನ್ನು ಲೆಕ್ಕಕ್ಕಾಗಿ ಮಾಡಿದ್ದಾರೆಯೇ ವಿನಾ ಮತ್ತೇನೂ ಅಲ್ಲ. ನಮಗೆ ಸಣ್ಣ ಹುಳುಗಳನ್ನು ತಯಾರಿಸತಕ್ಕ ಅಗತ್ಯ ಬಹಳವಾಗಿದೆ. ಇದನ್ನು ಇಲಾಖೆಯವರೇ ತಜ್ಞರ ಸಹಾಯದಿಂದ ಮಾಡಿದರೆ ಒಳ್ಳೆಯದು.

ಪ್ರೊಡಕ್ಷನ್ ಜಾಸ್ತಿ ಮಾಡುವುದಕ್ಕೆ ಅವಕಾಶ ಇದೆ. ಸುಮಾರು 100 ಮೊಟ್ಟೆಯಿಂದ ಎಷ್ಟು ಗೂಡು ಬೆಳೆಯುತ್ತದೆ ಎಂದರೆ ಎರಡು ಮಣ ರೇಷ್ಮೆ ಗೂಡು ಬೆಳೆಯುವುದಕ್ಕೆ ಅವಕಾಶವಿದೆ. ಎಲ್ಲಾ ಪ್ರೊಡೆಕ್ಷನ್ ತೆಗೆದುಕೊಂಡು, ಚಾಕಿ ಸೆಂಟರುಗಳಲ್ಲಿ ಚಾಕಿ ಮಾಡಿಸಿದ್ದೇ ಆದರೆ ಗೂಡುಗಳ ಉತ್ಪಾದನೆಯನ್ನು 3ರಿಂದ 3½ವರೆಯಷ್ಟು ಹೆಚ್ಚು ಮಾಡಿಕೊಳ್ಳುದಕ್ಕೆ ಅವಕಾಶವಿದೆ. ಆ ಒಂದು ಸಹಾಯವನ್ನು ಕೊಡಬೇಕೆಂಬ ಗುರಿಯನ್ನಿಟ್ಟುಕೊಂಡು ಸರ್ಕಾರದವರು ಕೆಲಸ ಮಾಡಿದರೂ ಕೂಡ ಇವತ್ತು ಯಾವ ಒಂದು ರೀತಿಯಲ್ಲಿ ನಡೆಯುತ್ತಾ ಇದೆ ಎಂಬುದನ್ನು ನೋಡಿದರೆ ನಿಮ್ಮ ಗುರಿಯನ್ನು ಸಾಧನೆ ಮಾಡುವುದಕ್ಕೆ ಆಗಿಲ್ಲ, ರೈತರಿಗೆ ನಷ್ಟವಾಗುತ್ತಾ ಇದೆ ಎಂದು ಹೇಳುತ್ತಾ ಇದ್ದಾರೆ. ರೈತರಲ್ಲಿ ಸಂಶಯ ಬಂದಿದೆ. ಅನೇಕ ರೈತರು ಕೇಳುತ್ತಾರೆ ನಾವು ನಮ್ಮ ಮನೆಯಲ್ಲಿ ಮಾಡಿದರೆ ಸುಮಾರು 9 ದಿವಸ ಹಿಡಿಯುತ್ತದೆ ಅದೇ ಚಾಕಿ ಸೆಂಟರ್‌ಗೆ ಕೊಟ್ಟರೆ 10ರಿಂದ 11 ದಿವಸ ಹಿಡಿಯುತ್ತದೆ ಎಂದು. ಈ ರೀತಿ ಏಕೆ ಆಗುತ್ತದೆ ಎಂದು ಯೋಚನೆ ಮಾಡುವುದಾದರೆ ಕಾಲಕ್ಕೆ ಸರಿಯಾಗಿ ಅದಕ್ಕೆ

ಸೊಪ್ಪು ಕೊಡದಿದ್ದ ಪಕ್ಷದಲ್ಲಿ ಈ ರೀತಿ ಹೆಚ್ಚಿನ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳತಕ್ಕ ತಕರಾರುಗಳು ಹಳ್ಳಿಗಳಲ್ಲಿ ಕೇಳಿಬರುತ್ತಾ ಇದೆ. ಆದ್ದರಿಂದ ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ನಂಬರ್‌ಗೆ ಬಹಳ ಕಾತುರ ಪಡಬೇಕಾಗಿಲ್ಲ ಮೂರನೆಯ ಪ್ಲಾನ್‌ನಲ್ಲಿ ನೂರು ಮಾಡಬೇಕೆಂದು ಆತುರವನ್ನು ಇಟ್ಟುಕೊಂಡು ಮಾಡಬೇಕಾದ ಕೆಲಸಕ್ಕೆ ಹೋಗಬೇಡಿ. ಮಾಡಿದ್ದನ್ನು ಚೆನ್ನಾಗಿ ಯಾವ ತೊಂದರೆಯೂ ಇಲ್ಲದ ರೀತಿಯಲ್ಲಿ ಮಾಡಿ ರೈತರಿಗೆ ಅನುಕೂಲವಾಗುವಂತೆ ಮಾಡುವುದು ಬಹಳ ಮುಖ್ಯ. ಇದನ್ನು ಇಲಾಖೆಯವರು ಗಮನದಲ್ಲಿಟ್ಟುಕೊಂಡು ಸರಿಪಡಿಸುತ್ತಾರೆ ಎಂದು ನಾನು ನಂಬಿದ್ದೇನೆ.

1-30 P.M.

ಇನ್ನು ಮಾರ್ಕೆಟಿಂಗ್ ಸೌಲಭ್ಯ. ತಾವು ಒಂದು ಯೋಜನೆಯನ್ನು ಇಟ್ಟುಕೊಂಡು ತಾಲ್ಲೂಕಿನಲ್ಲಿ ಅನೇಕ ಮಾರ್ಕೆಟಿಂಗ್ ಸೊಸೈಟಿಗಳನ್ನು ತೆಗೆದಿದ್ದೀರಿ. ಸರ್ಕಾರದವರು ಈ ವರ್ಷ ಒಳ್ಳೆಯ ಆಲೋಚನೆ ಮಾಡಿ ಸುಮಾರು 3 ಲಕ್ಷ ರೂಪಾಯಿಗಳಷ್ಟು ಪ್ರೊವಿಜನ್ ಮಾಡಿಕೊಂಡಿದ್ದೀರಿ. ಮತ್ತು ಎಲ್ಲೆಲ್ಲಿ ಅವಶ್ಯಕವೋ ಅಲ್ಲೆಲ್ಲಾ ಖಾಯಂ ಕಟ್ಟಡಗಳನ್ನು ಕಟ್ಟಿಸಬೇಕು. ಅಲ್ಲಿ ಬರತಕ್ಕ ವರ್ತಕರು ಹಾಗೂ ರೈತರಿಗೆ ಸಾಕಾದಷ್ಟು ಅನುಕೂಲವನ್ನು ಒದಗಿಸಬೇಕು ಎಂಬ ಒಳ್ಳೆಯ ಉದ್ದೇಶದಿಂದ ಈ ವರ್ಷದಲ್ಲೂ ಕೂಡ ಸುಮಾರು ಎರಡೂವರೆ ಇಂದ ಮೂರು ಲಕ್ಷದವರೆಗೂ ಹಣವನ್ನು ಖರ್ಚು ಮಾಡಬೇಕೆಂಬ ಒಂದು ಅಂದಾಜನ್ನು ಇಟ್ಟುಕೊಂಡಿದ್ದೀರಿ. ನಿಜವಾಗಿಯೂ ಕೂಡ ಈ ಒಂದು ಬಹಳ ಅವಶ್ಯಕವಾದಕೆಲಸವನ್ನು ಕೈಕೊಂಡಿದ್ದೀರಿ ಇದನ್ನು ಆದಷ್ಟು ಬೇಗ ಪೂರೈಸಿ ರೈತರಿಗೆ ಹೆಚ್ಚಿನ ಒಂದು ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ವರ್ತಕರಿಗೂ ಕೂಡ ಹೆಚ್ಚಿನ ಅನುಕೂಲವಾಗುತ್ತದೆ. ಆದ್ದರಿಂದ ಎಲ್ಲಿ ಅವಶ್ಯಕತೆ ಇವೆಯೋ ಅಲ್ಲೆಲ್ಲಾ ಕಟ್ಟಡಗಳನ್ನು ಆದಷ್ಟು ಬೇಗ ಕಟ್ಟಿಸಿ ಈ ಕೆಲಸವನ್ನು ಪೂರೈಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಫಿಲೇಚರ್ಸ್ ವಿಷಯದಲ್ಲಿ ಪ್ರತಿವರ್ಷವೂ ನೋಡಿದ ಹಾಗೆ ಈ ವರ್ಷವೂ ಕೂಡ ಮಾಮೂಲಾಗಿ ಆಗುತ್ತಾ ಇರುವಂತೆ ಹೆಚ್ಚು ನಷ್ಟವನ್ನು ನೋಡುತ್ತಾ ಇದ್ದೇವೆ. ಇದಕ್ಕೆ ನಾನಾ ಕಾರಣಗಳನ್ನು ಹೇಳಬಹುದು. ಮೊಟ್ಟ ಮೊದಲನೆಯದಾಗಿ ಅವರು ಹೇಳುವ ಕಾರಣವೇನೆಂದರೆ ಹೆಚ್ಚಿನ ಗೂಡು ಉತ್ಪನ್ನವಾಗಬೇಕಾಗುತ್ತದೆ, ಗೂಡಿನ ಬೆಲೆ ವಿಶೇಷವಾಗಿ ಹೆಚ್ಚಾಗಿದೆ. ಗೂಡನ್ನು ತಯಾರುಮಾಡುವುದಕ್ಕೆ ಬೆಲೆಯನ್ನು ಕಡಿಮೆ ಮಾಡಲು ಇಲಾಖೆಯವರು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಾ ಇದ್ದಾರೆ. ಆದರೂ ಕೂಡ ಕಡಿಮೆ ಮಾಡುವುದಕ್ಕೆ ಆಗಿಲ್ಲ ಎಂದು ನಾನಾ ಕಾರಣಗಳನ್ನು ಕೊಡುತ್ತಾರೆ, ಕಳೆದ ಸಾಲಿನಲ್ಲೂ ಕೂಡ ಇದೇ ವಿಚಾರವಾಗಿ ನಾನು ಮಾತನಾಡಿದೆ. ಇದಕ್ಕೆ ನಾನು ತಿಳಿದುಕೊಂಡಿರುವ ಕಾರಣ ಏನೆಂದರೆ ತಮ್ಮ ಮಾರ್ಕೆಟಿಂಗ್ ಆರ್ಗನೈಸೇಷನ್, ಅಥವಾ ಪರ್ಚೇಸಿಂಗ್ ಆರ್ಗನೈಸೇಷನ್ ಸರಿಯಾಗಿಲ್ಲ, ಸಮರ್ಪಕವಾಗಿಲ್ಲ, ಅದಕ್ಕೆ ತಮ್ಮಲ್ಲಿ ಸರಿಯಾದ ಸಿಬ್ಬಂದಿ ಇಲ್ಲ. ಇರುವವರಿಗೂ ಕೂಡ ರೇಷ್ಮೆ ಅಂತ ಎಷ್ಟಿದೆ ಗೂಡಿನಲ್ಲಿ, ಯಾವ ರೀತಿ ದರ ಕೊಡಬೇಕೆಂಬುದು ಅರ್ಥವಾಗಿಲ್ಲ. ಇವತ್ತೂ ಕೂಡ ನನಗೆ ಅದೇ ಸಂಶಯ ಇದೆ. ಸರ್ಕಾರಿ ಫಿಲೇಚರ್ಸ್‌ನಲ್ಲಿ ಕೆಲಸ ಮಾಡತಕ್ಕವರನ್ನು ಗೂಡುಗಳನ್ನು ಕೊಂಡುಕೊಳ್ಳಲು ಯಾವ ರೀತಿಯ ಜನರನ್ನು ಕಳುಹಿಸುತ್ತಾರೆ ಎಂಬುದನ್ನು ನೋಡತಾ ಇದ್ದೇವೆ. ಅವರಿಗೆ ಅದರಲ್ಲಿ ಯಾವ ರೀತಿಯ ಮಾಹಿತಿಯೂ ಇರುವುದಿಲ್ಲ. ಆದ್ದರಿಂದ ಆ ಮನುಷ್ಯನು ಅಲ್ಲಿಗೆ ಹೋದಾಗ ಅದರಲ್ಲಿ ಯಾವ ಯಾವ ಲೋಪದೋಷಗಳು ಇರುತ್ತವೆ ಅದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿರುವುದಿಲ್ಲ. ಹೀಗೆ ಅನೇಕ ಕಾರಣಗಳು ಇವೆ. ಅವನ್ನೆಲ್ಲಾ ಪ್ರತಿಯೊಂದನ್ನೂ ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಇಲಾಖೆಯವರು ಸರಿಯಾದಂತಹ ಗೂಡುಗಳನ್ನು ಕೊಟ್ಟಿದ್ದಾರೆ ಎಂದು ಸಮಾಧಾನ ಮಾಡಿಕೊಳ್ಳುವುದಕ್ಕೆ ಏನಾದರೂ ಕೆಲವು ಅಂಕಿ ಅಂಶಗಳನ್ನು ಇಟ್ಟುಕೊಳ್ಳುವುದು ಒಳ್ಳೆಯದು. ಟೆಸ್ಟೆಡ್ ಲೇಯಿಂಗ್ಸ್ ತೆಗೆದುಕೊಳ್ಳಬೇಕಾದ್ದು ಫಿಲೇಚರ್ಸ್ ದೃಷ್ಟಿಯಿಂದ ಬಹಳ ಅವಶ್ಯಕ. ಆದ್ದರಿಂದ ಅವನ್ನು ಕೊಂಡುಕೊಳ್ಳತಕ್ಕ ಸಂದರ್ಭದಲ್ಲಿ ಅದಕ್ಕೆ ಸಂಬಧಪಟ್ಟ ಆಫೀಸರು ಹೆಚ್ಚು ಕಡಿಮೆ ಮಾಡಿದ ಪಕ್ಷದಲ್ಲಿ ಬಹಳ ನಷ್ಟವಾಗುತ್ತದೆ ಎಂಬುದನ್ನು ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ಹರಾಜಿನಲ್ಲಿ ಕೊಂಡಕೊಳ್ಳತಕ್ಕ ಸಂದರ್ಭದಲ್ಲಿ ಈ ಕಂಡೀಷನ್‌ಗಳನ್ನೆಲ್ಲಾ ಹಾಕುವುದಕ್ಕೆ ಆಗುವುದಿಲ್ಲ ಎಂದು ಅವರು ಹೇಳುತ್ತಾರೆ. ನನ್ನ ಅಭಿಪ್ರಾಯವೇನೆಂದರೆ ನ್ಯಾಯವಾದ ಮಾರ್ಕೆಟ್‌ನಲ್ಲಿ ಈ ಲೇಯಿಂಗ್ಸ್ ಸೇರ್ ಮತ್ತು ಪರ್ಚೇಸ್ ಆದ ಪಕ್ಷದಲ್ಲಿ ಅಂತಹ ಲೋಪದೋಷಗಳು ಬರುವುದಿಲ್ಲ. ಹಾಗೆ ಆಗದೇ ಇರುವುದರಿಂದ ಇವತ್ತು ಈ ರೀತಿ ನಷ್ಟವಾಗುತ್ತಾ ಇದೆ. ಇದೂ ಅಲ್ಲದೇ ಓವರ್ ಹೆಡ್ ಚಾರ್ಜಸ್ ಪ್ರೊಡಕ್ಷನ್‌ಗಿಂತ ಜಾಸ್ತಿಯಾಗುತ್ತಾ ಇದೆ ಎಂದು ಹೇಳುತ್ತಾರೆ. ಒಪ್ಪಿಕೊಳ್ಳುತ್ತೇನೆ. ಆದರೆ ಪರ್ಚೇಸಿಂಗ್ ಆರ್ಗನೈಸೇಷನ್ ಸರಿಯಾಗಿದ್ದರೆ ಈ ರೀತಿ ನಷ್ಟವಾಗುವುದಕ್ಕೆ ಅವಕಾಶವಾಗುತ್ತಾ ಇರಲಿಲ್ಲ. ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ಶೇಕಡ 80ರಷ್ಟು ಲಾಭ ಸಂಪಾದನೆ ಮಾಡುತ್ತಾರೆ ಅದೇ ಸರ್ಕಾರದವರು

(ಶ್ರೀ ಎಂ. ಸಿ. ಬಸಪ್ಪ)

ಇಷ್ಟೆಲ್ಲಾ ಸಿಬ್ಬಂದಿಯನ್ನು ಇಟ್ಟುಕೊಂಡು ಶೇಕಡ 15ರಷ್ಟು ಲಾಭ ಸಂಪಾದನೆ ಮಾಡುವುದು ಎಂದರೆ ಇದರಲ್ಲಿ ಲೋಪದೋಷ ಏನಿದೆ ಎಂಬುದನ್ನು ಯೋಚನೆ ಮಾಡಿದ್ದೇ ಆದರೆ ಪರ್ಚೇಸಿಂಗ್ ಆರ್ಗನೈಸೇಷನ್ ಸರಿಯಾಗಿಲ್ಲ ಮತ್ತು ಮಾರಾಟದ ವ್ಯವಸ್ಥೆ ಕೂಡ ಸರಿಯಾಗಿಲ್ಲ ಎಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಆದ್ದರಿಂದ ಇನ್ನು ಮುಂದಾದರೂ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ನಷ್ಟವನ್ನು ತಪ್ಪಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri G. V. GOWDA** (Palyam).—Mr. Speaker, Sir, at the outset, I desire to submit that the progressive character so far as the industrial policy is concerned, has not been maintained. Neither we can derive satisfaction at the results achieved. In my opinion, no efforts have been made to start new industries nor are there efforts to derive more income from the Government owned concerns. Sir, we have been told that Mysore at one time occupied a coveted place in the industrial map of India. From that point of view, it deserves to occupy a more prominent place in the present day and there must have been in the State a fertilizer plant, aluminium plant, news-print manufacturing unit ; in the public sector and also efforts should have been made to get the fifth Steel Plant to Mysore State. Apart from these things, Sir, we should have some more sugar factories in the State of Mysore. Sir, now we are having 8 factories out of which three are functioning in the co-operative sector. We are further told that three more sugar factories are permitted and we do not know whether really industrial licences are given to these three places. The Government of Mysore has recommended certain applications and I say that our efforts would have to be made by the Government to pursue this matter and see that all these applications pending consideration at the Governmet of India level should be given clearance and industrial licence is issued as early as possible. We should see that at least fifteen factories are functioning in our State before the end of the fourth plan. If that attitude is not prevailing, we may get an apprehension whether the Government would be willing to issue any more industrial licences for sugar factories in Mysore. Because I am told that with regard to certain factories, they are changing the terms at the Government of India level and it is even apprehended whether all the three places-M. K. Hubli,, Bidar and Hiriyur—whether these places would be given licences before the end of the Third Plan. Therefore, I am stressing that the Hon'ble Chief Minister and the Hon'ble Industries Minister should see that much persuasion is made at the Government of India level and all the licences are issued for the factories which have been duly recommended by the State Government. I am also told that certain industrial concerns are being converted into Joint Stock Companies and I do not want to speak anything about the merits or otherwise of that proposal. However, I wish to draw the attention of the Hon'ble Minister to the fact whether it is not desirable to convert some of the industrial concerns, which according to Government are brought under good footing into co-operative ventures. The Government says that they are short of funds and they are not able to

start more industries in the State of Mysore. Those industries which according to Government have been brought under good footing can be converted into co-operative ventures, inviting shares from the people up to 49 per cent, Government having one per cent of the shares, and utilising that amount for starting new industries. That could be considered because it goes a long way to benefit the common man. By such conversion you will be making the common man participate in these ventures. If this policy is adopted, it may be possible for the Government to have more money which would facilitate them to start new industries in the State of Mysore.

So far as the investment by the Government in certain industrial concerns is concerned, I wish to say that without foresight, certain things have been done—investment made in M.S.K. Mills in Gulbarga and in the Karnatak Co-operative Textile Mills, Hubli. It shows how the financial aspect of these concerns have not been considered at all. In one case, the liabilities have exceeded the assets, and there the Government has committed, I should say, a big mistake in making an investment of more than 60 lakhs, especially in the Hubli Mills and thereby getting nothing. The accumulated loss is more than five lakhs. Every year that concern is losing. The idea of rehabilitating 30,000 spindles and 606 looms has not been realised. All the machinery then existing have been outmoded, 60 to 70 years old and the Government did not study the financial aspect of the Mill and induced the co-operative society at Dharwar to purchase that Mill and make investment of more than 60 lakhs. That was not a wise thing that Governmet did.

Even in the case of M.S.K. Mills, Gulbarga, 35,140 spindles and 606 looms-machinery was outmoded. The private people who were manning it applied to the Government for financial assistance. In 1959, without studying the financial aspects or the assets and liabilities of the company, Government started investing 64.5 lakhs on condition that all that money would be utilised for the rehabilitation of that Mill. But the wonderful thing that the people did there was—all the money—most of the amount advanced by the Government was utilised to discharge the past liabilities, dues that they had to pay to the Punjab National Bank or the amount that was due to the directors, *etc.*, The result was they suffered a loss of 29 lakhs after acquiring the mill and every year, the concern is losing. Now the Finance Minister has expressed that he is going to advance another thirty lakhs to that particular Mill. I do not know how this further advance of money will bring benefit to the Government or the State. Here, I wish to draw the attention of the House to the observations made by the Public Accounts Committee in the case of M.S.K. Mills, Gulbarga.

> "The Committee feel apprehensive that such type of stop-gap financial arrangements would only postpone the evil day of closing the Mill but at a great and continuous cost to Government. The Committee are of opinion that Government should not make further financial commitments to this mill except

(SRI G. V. GOWDA)

> after a thorough examination and unless it becomes the absolute owner of the majority of the shares. Otherwise, the huge money invested over this Mill may result as a gift by Government to the private sector at the cost of the tax-payer."

Moreover this particular mill wanted a loan to be raised from the National Industrial Development Corporation. A study team of this Corporation visited the Mill. At the instance of the Textitle Commissioner it has given a report that there is a capital deficiency of 15 lakhs, apart from debentures, secured loans and unsecured loans to the extent of 35 lakhs. So the liabilities exceed by fifty lakhs than the assets. And, our Government thought fit to make an investment of more than sixty to seventy lakhs, apart from the guarantee that the Government has given in respect of 20 lakhs. I wish that the Government takes wise steps and examine thoroughly before they make any investment.

So far as the rural industrialisation is concerned I should say that it has not received the encouragement that is due to it. Even the rural artisan training centres have not been increased. What happened to those people who have received training ?

In respect of industrial estates, which have been sanctioned some are working. But Government should take care and see that all those estates that are sanctioned are functioning. In certain places land has been acquired without putting up buildings. I do not know why buildings have not been constructed.

So far as the Sericulture industry is concerned, my friend Mr. Basappa has made observations, and I do not like to take much time of the House repeating them, except to say a few things in respect of cocoon marketing recently established. These were established with the idea of eliminating brokers. On the other hand, more brokers have come into the cocoon market. They go to the ryots and purchase and get the same to the market. The Cocoon Marketing Officer will not be knowing whether this person who has brought it is the producer. It has become impossible for the department to eliminate these middlemen. The ryot has not been helped in any manner whatsoever. Unless the department takes some steps to see that the actual producer is benefited or an agency is brought into existence to protect him, I should say that the ryot will not be helped in any manner. Now when the department has got the scope of picking and choosing the cocoons, I do not know why the Filature Industry should be on an unsound footing. Even this year, we have been seeing that there is much loss to the industry. Unless Government makes efforts to see that new races are evolved, that they are greater in filament and greater in length, unless that is done, I am afraid that the production of silk would continue to be less. The rendetta of silk which had been brought down has again gone up-19 to 20 pounds of cocoon for every pound of silk. In Japan we know tha

one pound of silk could be got out of every ten pounds of cocoons. But here, we have doubled the figure to twenty.

So, unless Government makes special efforts to see that new races are evolved and cocoons are produced, there is no solution for this industry and it can at no time be made self-supporting. Nearly 30 lakhs were spent and now Government propose to spend 43.60 lakhs. Even in respect of industries, if we see the income as well as the expenditure, it is not satisfactory.

Sir, so far as revenue is concerned, for 1965-66 they have estimated Rs. 11,98,00,000 of expenditure. But still the Industries Department is not self-supporting. From the Budget figures, we can see how we are not able to get even a small percentage of interest on the capital invested. I do not know whether they are taking into consideration the depreciation charges. Therefore, it is absolutely essential to have the financial aspects in mind and sea that these industries are made at least self-supporting.

Sir, Government should not leave any stone unturned to have new big industries in the public sector and convert some of the industries into co-operative ventures and see that the common man derives some benefit from these industries.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸಭಾಪತಿಯವರೇ, ನಮ್ಮ ಮುಂದೆ ಇರುವ ಕೈಗಾರಿಕಾ ಬೇಡಿಕೆಯನ್ನು ನಾನು ಸಮರ್ಥನೆ ಮಾಡುತ್ತ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ರಾಜ್ಯದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳ ಬೆಳವಣಿಗೆ ಆಗುತ್ತಿದೆಯೇ ಹೊರತು ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳು ಆಗುತ್ತಿಲ್ಲ. ಆದಕ್ಕೆ ನಾವು ವಿಷಾದ ಪಡಬೇಕಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಸಣ್ಣ ಕೈಗಾರಿಕೆಗಳನ್ನು ಬೆಳೆಸಬೇಕು, ಅಲ್ಲಿ ಏನೇನು ಸಾಮಾನು ಸಿಕ್ಕುತ್ತದೆ, ಏನೇನು ಕಚ್ಚಾವಸ್ತುಗಳು ಸಿಕ್ಕುತ್ತವೆ ಎನ್ನುವ ವಿಚಾರದಲ್ಲಿ ಒಂದು ಸರ್ವೆ ನಡೆಸಿ ಆಯಾ ಜಿಲ್ಲೆಯಲ್ಲಿ ಇಂಥಿಂಥ ಸ್ಥಳಗಳಲ್ಲಿ ಇಂಥಿಂಥ ಕೈಗಾರಿಕೆಗಳನ್ನು ಮಾಡಿದರೆ ಅದಕ್ಕೆ ಪ್ರೋತ್ಸಾಹ ಕೊಡುತ್ತೇವೆ ಎಂದು ಸರ್ಕಾರ ಪ್ರಚಾರಮಾಡಿ ಕೈಗಾರಿಕೆಗಳನ್ನು ನಡೆಸಲು ಮುಂದೆ ಬರುವವರಿಗೆ ಉತ್ತೇಜನವನ್ನು ಕೊಡಬೇಕು. ಎಂದು ಈ ಸಭೆಯಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇವೆ. ಆದರೆ ಅದು ಇನ್ನೂ ಕಾರ್ಯಗತವಾಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಸಣ್ಣ ಯೋಜನೆಗಳನ್ನು ತೆಗೆದುಕೊಳ್ಳತಕ್ಕ ಕಾರ್ಯ ಪುಸ್ತಕದಲ್ಲಿ ಮಾತ್ರ ಉಳಿದಿದೆಯೇ ಹೊರತು ಕಾರ್ಯಗತವಾಗುತ್ತ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಸಣ್ಣ ಸಣ್ಣ ಕೈಗಾರಿಕೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಬೆಳೆದರೆ ಅಲ್ಲಿರುವ ಬಡತನ ನಿರ್ಮೂಲವಾದೀತು. ಆದರ ಬಗ್ಗೆ ಸರ್ಕಾರ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ನಾನಾದರೂ ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮಲ್ಲಿ ಕೈಗಾರಿಕೆಗಳನ್ನು ಯಾವ ತರಹ ಬೆಳಸಬೇಕು, ಯಾವ ನಮೂನೆಯಲ್ಲಿ ಮಾಡಬೇಕು ಎನ್ನುವುದರಲ್ಲಿ ಜನತಗೆ ಅನುಭವ ಸಾಲದು. ಜನರಲ್ಲಿ ದುಡ್ಡು ಇದೆ. ಇದನ್ನು ಉಪಯೋಗಿಸಿಕೊಂಡು ಸಣ್ಣ ಕೈಕಾರಿಕೆಗಳನ್ನು ಪ್ರಾರಂಭ ಮಾಡುವ ಬಗ್ಗೆ ಜನರಿಗೆ ತಿಳುವಳಿಕೆಯನ್ನು ಕೊಡಲು ಜಿಲ್ಲೆಯಲ್ಲಿ ಒಂದೊಂದು ಆಫೀಸನ್ನು ತೆರೆದು ಯಾವ ಸ್ಥಳದಲ್ಲಿ ಯಾವ ಕೈಗಾರಿಕೆಯನ್ನು ಬೆಳಿಸುವುದಕ್ಕೆ ಸಾಧ್ಯ ಎನ್ನುವುದನ್ನು ಖಚಿತವಾಗಿ ತಿಳಿಸಿ, ಜನರಿಂದ ಅರ್ಜಿಯನ್ನು ತೆಗೆದುಕೊಂಡು ಏನು ಸವಲತ್ತುಗಳು ಬೇಕೋ ಅದನ್ನೆಲ್ಲ ಕೊಟ್ಟರೆ ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆಗಳು ಬೆಳೆಯುತ್ತವೆ.

ಶಿವಮೊಗ್ಗದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಎಂದು ತೆರಿದಿದ್ದಾರೆ. ಆದಕ್ಕೆ ಬೇಕಾದ ಭೂಮಿಯನ್ನು ಸ್ವಾಧೀನಪಡಿಸಿಕೊಂಡರು ! ಅದು ಇವತ್ತೂ ಹಾಗೆಯೇ ಪಾಳು ಬಿದ್ದಿದೆ. ಇಂಥ ಯೋಜನೆಗಳನ್ನು ಏಕೆ ಮಾಡುತ್ತಾರೆಯೋ ನನಗಂತೂ ಅರ್ಥವಾಗುವುದಿಲ್ಲ. ಮಾಡಿರತಕ್ಕ ಯೋಜನೆಗಳು ಅಭಿವೃದ್ಧಿಯಾಗದೆ ಅಲ್ಲಿಗೆ ಮೊಟಕಾಗಿ ನಿಲ್ಲತಕ್ಕ ಸಂದರ್ಭಗಳಿವೆ. ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರುವಂತೆ ಭದ್ರ ಪ್ರಾಜೆಕ್ಟ್ ಪ್ರದೇಶದಲ್ಲಿ ಕೆಲಸ ಪೂರೈಸಿದೆ. ಅಲ್ಲಿ ಕಟ್ಟಿರತಕ್ಕ ಸಾವಿರಾರು

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಮನೆಗಳು ಇವೆ. ಅಲ್ಲಿ ನೀರು ಮತ್ತು ವಿದ್ಯುಚ್ಛಕ್ತಿಯು ಸೌಕರ್ಯವಿದೆ. ರಸ್ತೆ ಸೌಕರ್ಯವಿದೆ. ವರ್ಕ್‌ಷಾಪ್ ಇದೆ. ಇಂಥ ಸ್ಥಳದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಮತ್ತು ವರ್ಕ್‌ಷಾಪ್ ಕೊಟ್ಟರೆ ಅಲ್ಲಿರುವ ಜನಗಳಿಗೆ ಅನುಕೂಲವಾಗುತ್ತದೆ. ಅಂಥ ಕಡೆ, ಅನುಕೂಲತೆ ಇರುವಕಡೆ ಬಿಟ್ಟು ಬೇರೆ ಜಾಗವನ್ನು ಅಕ್ವೈರ್ ಮಾಡಿಕೊಳ್ಳುತ್ತಾರೆ. ಆ ಜಾಗಕ್ಕೆ ಇಂಡಸ್ಟ್ರಿಯಲ್ ಎಸ್ಟೇಟ್ ಎಂದು ಹೆಸರಿಗೆ ಇರುತ್ತದೆ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅಂಥದ್ದು ಆಗಬಾರದು. ಇದರ ಬಗ್ಗೆ ಚೆನ್ನಾಗಿ ಕೆಲಸ ಮಾಡಬೇಕು ಎಂದು ತಿಳಿಸುತ್ತೇನೆ.

ಭದ್ರಾವತಿ ಕಾರ್ಖಾನೆ ದಿನೇ ದಿನೇ ಬೆಳೆಯುತ್ತದೆ. ಇದು ತುಂಬ ಸಂತೋಷದ ಸಂಗತಿ. ಸರ್ ಎಂ. ವಿಶ್ವೇಶ್ವರಯ್ಯನವರು ಆ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರು. ಅದು ಇವತ್ತು ಬೃಹದಾಕಾರವಾಗಿ ಬೆಳೆಯುತ್ತಿದೆ. ಮುಖ್ಯ ಮಂತ್ರಿಯವರು ಕೂಡ ಮೊನ್ನೆ ಅಲ್ಲಿಗೆ ಬಂದಿದ್ದಾಗ ವಿಶ್ವೇಶ್ವರಯ್ಯನವರ ಜ್ಞಾಪಕಾರ್ಥವಾಗಿ ಒಂದು ಸ್ಮಾರಕವನ್ನು ರಚಿಸಬೇಕು, ಅವರ ಹೆಸರಿನಲ್ಲಿ ಒಂದು ಕಾಲೇಜನ್ನು ತೆರೆಯಬೇಕು ಎನ್ನುವ ವಿಚಾರವನ್ನು ತಿಳಿಸಿದರು. ಆ ಕಾರ್ಖಾನೆಯಿಂದ ಬೇಕಾದಷ್ಟು ಲಾಭ ಬರುತ್ತಿರುವುದರಿಂದ ಅವರ ಹೆಸರಿನಲ್ಲಿ ಕಾರ್ಖಾನೆಯವರೇ ಒಂದು ತಾಂತ್ರಿಕ ಕಾಲೇಜನ್ನು ತೆರೆಯಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಫೆರೊ ಸಿಲಿಕಾನ್ ಪ್ಲಾಂಟ್ ಮೊದಲು ಸರಿಯಾಗಿ ನಡೆದು ಬಂದಿತ್ತು. ಅದು ಈಗ ಕೆಲಸ ಮಾಡುತ್ತಿಲ್ಲ. ನಮಗೆ ಶರಾವತಿಯಿಂದ ವಿದ್ಯುಚ್ಛಕ್ತಿ ದೊರೆಯುತ್ತಿದೆ. ಹೀಗಿರುವಾಗ ಅದನ್ನು ಏಕೆ ನಿಲ್ಲಿಸಬೇಕು ಎಂದು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಒಂದು ದಿವಸಕ್ಕೆ 15-16 ಟನ್ ತಯಾರಾಗತಕ್ಕ ಹಳೆ ಫೆರೊ ಸಿಲಿಕಾನ್ ಪ್ಲಾಂಟನ್ನು ಸರಿಯಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ತುಂಗಭದ್ರ ಸಕ್ಕರೆ ಕಾರ್ಖಾನೆ ವಿಚಾರದಲ್ಲಿ ನಾನು ಪ್ರಸ್ತಾಪ ಮಾಡಬೇಕಾಗಿದೆ. ಈ ಬಗ್ಗೆ ಅನೇಕ ಸಲ ನಾನು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆ ಕಾರ್ಖಾನೆಗೆ ಬೇಕಾಗುವಷ್ಟು ಕಬ್ಬು ಬರುತ್ತಿಲ್ಲ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟರು. ನಾನು ಜವಾಬ್ದಾರಿಯಿಂದ ಹೇಳುತ್ತೇನೆ, ನಾನು ಆ ತಾಲ್ಲೂಕಿಗೆ ಸಂಬಂದಪಟ್ಟ ಮನುಷ್ಯ. ಅಲ್ಲಿಗೆ ಕಬ್ಬು ತೆಗೆದುಕೊಂಡು ಹೋಗಿರತಕ್ಕವರು 24 ಗಂಟೆ, 30 ಗಂಟೆ ಕಾದು ನಿಲ್ಲಬೇಕಾದ ಪರಿಸ್ಥಿತಿ ಇದೆ. ಇದರಿಂದ ತೊಂದರೆ ಯಾಗಿದೆ. ಇದನ್ನು ಪರಾಮರ್ಶಿಸಿ ಎಂದು ಹೇಳುತ್ತೇನೆ. ಅಲ್ಲಿ ಇನ್ನೂ ಒಂದು ತೊಂದರೆ ಇದೆ. ಲಾರಿ ಅಥವಾ ಗಾಡಿಯಲ್ಲಿ ಕಬ್ಬನ್ನು ತೆಗೆದುಕೊಂಡು ಹೋಗಿ 'ವೇ ಬ್ರಿಡ್ಜ್' ನಲ್ಲಿ ತೂಕ ಮಾಡಿದರೆ ಒಂದು ತೂಕಕ್ಕೆ 15 ಕಿಲೋಗ್ರಾಂ ಕಡಮೆ ಬರುತ್ತದೆ. ಅದರ ಬಗ್ಗೆ ತೂಕದ ಇಲಾಖೆಗೆ ಸಂಬಂಧ ಪಟ್ಟ ಅಧಿಕಾರಿಗಳು ಕಂಪನಿಯವರಿಗೆ ನೋಟೀಸನ್ನು ಕೊಟ್ಟಿದ್ದಾರೆ. ಅಲ್ಲಿ ಮನಾಪಲ ನಡೆಯುತ್ತಿದೆ. ಸಕ್ಕರೆ ಕಾರ್ಖಾನೆಯ ಬಗ್ಗೆ ನನಗೆ ಬಹಳ ಅಭಿಮಾನವಿದೆ. ಆದರೆ ಅಲ್ಲಿ ಆಗುವ ಅನ್ಯಾಯವನ್ನು ಸರ್ಕಾರ ತಡೆಗಟ್ಟಬೇಕೆಂದು ಹೇಳುತ್ತಿದ್ದೇನೆ. ಸರ್ಕಾರ ಈ ಬಗ್ಗೆ ವಿಚಾರ ಮಾಡಿ ಯಾವ ಯಾವ ರೈತ ಎಷ್ಟುಗಾಡಿ ಅಥವಾ ಲಾರಿ ಕಬ್ಬನ್ನು ಕೊಟ್ಟಿರುತ್ತಾನೆಯೋ ಅದನ್ನು ಕಂಡು ಹಿಡಿದು ಅವರಿಗೆ ಅಥವಾ ಗಾಡಿ ಒಂದಕ್ಕೆ 15 ಕಿಲೋಗ್ರಾಂ ಪ್ರಕಾರಕಡಮೆ ಆಗಿರುವ ಕಬ್ಬಿನ ಬೆಲೆಯನ್ನು ರೈತನಿಗೆ ಕಾರ್ಖಾನೆಯಿಂದ ಕೊಡಿಸುವ ವ್ಯವಸ್ಥೆಯನ್ನುಮಾಡಬೇಕು ಎಂದು ಹೇಳುತ್ತೇನೆ. ಇಲ್ಲಿ ಇನ್ನೊಂದು ಕಾರ್ಖಾನೆಗೆ ಅವಕಾಶವಿದೆ. ಅಲ್ಲಿನ ರೈತರು ಇನ್ನೊಂದು ಕಾರ್ಖಾನೆಯನ್ನು ಹಾಕಲು ಮುಂದೆ ಬರುತ್ತಿದ್ದಾರೆ. ಅದಕ್ಕಾಗಲೇ ರೈತರು ಅರ್ಜಿಯನ್ನು ಸಲ್ಲಿಸಿ ದ್ದಾರೆ. ರೈತರ ಹಿತದೃಷ್ಟಿಯಿಂದ ಇನ್ನೊಂದು ಕಾರ್ಖಾನೆಯನ್ನು ಇಲ್ಲಿ ಮಾಡುವ ಬಗ್ಗೆ ಸರ್ಕಾರ ದವರು ತಕ್ಕ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

2-00 P.M.

ಇನ್ನು ನಮ್ಮ ತಾಲ್ಲೂಕಿನಲ್ಲಿ ಹೊನ್ನಿನ ಗುಡ್ಡ ಎಂಬ ಹೆಸರಿನ ಒಂದು ಪ್ರದೇಶವಿದೆ. ಅದು ಬಂಗಾರ ಸಿಗತಕ್ಕ ಗುಡ್ಡ. ನಾವು ಹಿಂದೆ ಸಣ್ಣ ಸಣ್ಣ ಮಕ್ಕಳಾಗಿದ್ದಾಗ ಅಲ್ಲೆಲ್ಲಾ ಆಟವಾಡಿ ಬರುತ್ತಿದ್ದೆವು. ಕೆಲವರು ಅಲ್ಲಿನ ಮರಳನ್ನು ತೆಗೆದುಕೊಂಡು ಹೋಗಿ ನೀರಿನಲ್ಲಿ ನೆನೆಸಿ ಹಾಗೆಯೇ ಬಂಗಾರವನ್ನು ಮಾಡಿಕೊಳ್ಳುತ್ತಿದ್ದರು. ಅದು ನಿಜವಾದ ಪಕ್ಷದಲ್ಲಿ ಅದರಿಂದ ನಮ್ಮ ರಾಜ್ಯಕ್ಕೆ ಎಷ್ಟೋ ಅಭಿವೃದ್ಧಿ ಕೆಲಸಗಳು ಆದಾವು ಎಂಬುದಾಗಿ ನಾನು ಹೇಳುತ್ತೇನೆ. ಆದ್ದರಿಂದ ಈ ಹೊನ್ನಿನ ಗುಡ್ಡದಲ್ಲಿ ಬಂಗಾರ ಎಷ್ಟರ ಮಟ್ಟಿಗೆ ಸಿಗುತ್ತದೆಂಬುದನ್ನು ಸರ್ಕಾರದವರು ಕೂಡಲೇ ಪ್ರಸ್ತಾಪ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸು ತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಈ ಕೈಗಾರಿಕೆಗಳ ಬೇಡಿಕೆಯ ಮೇಲೆ ಮಾತನಾಡುತ್ತಾ ನಮ್ಮ ರಾಜ್ಯ ಸ್ವಾತಂತ್ರವಾದ ಮೇಲೆ ಬಂದಂಥ ಎಲ್ಲಾ ಮಂತ್ರಿಮಂಡಲಗಳೂ ಈ ರಾಜ್ಯದಲ್ಲ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕು ಸರ್. ಎಂ. ವಿಶ್ವೇಶ್ವರಯ್ಯನವರು ಹೇಳಿದಹಾಗೆ ಈ ರಾಜ್ಯವನ್ನು ಇಂಡಸ್ಟ್ರಿಯಲ್ ಸ್ಟೇಟಾಗಿ ಮಾಡಬೇಕೆಂದು ದೊಡ್ಡ ದೊಡ್ಡ ಪದಗಳನ್ನು ಹೇಳಿಕೊಂಡು ಆ ಪದಗಳಲ್ಲಿಯೇ ತೃಪ್ತರಾಗಿದ್ದಾರೆಯೇ ಹೊರತು ಏನು ಸಾಧನೆ ಮಾಡುವುದಕ್ಕೆ ಇವರು ಹೋಗಿಲ್ಲ. ಇನ್ನು ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಎಷ್ಟರ ಮಟ್ಟಿಗೆ ಕೈಗಾರಿಕೆಯಲ್ಲಿ ಪ್ರಗತಿ ಹೊಂದಿದ್ದಾರೋ ಅಷ್ಟು ಕೂಡ ನಾವು ಪ್ರಗತಿ ಹೊಂದಲಿಲ್ಲ. ಈ ಕಡೆ ಮದ್ರಾಸ್, ಆ ಕಡೆ ಆಂಧ್ರ, ಇನ್ನೊಂದು ಕಡೆ ಮಹಾರಾಷ್ಟ್ರ ಈ ಪ್ರದೇಶಗಳಲ್ಲಿ ಎಷ್ಟೆಷ್ಟು ಪ್ರಯತ್ನಗಳನ್ನು ಕೈಗಾರಿಕೆಗೋಸ್ಕರವಾಗಿ ಮಾಡುತ್ತಿದ್ದಾರೋ ಅಷ್ಟನ್ನು ಇವರು ಮಾಡುತ್ತಿಲ್ಲ. ಕೇಂದ್ರ ಸರ್ಕಾರದಿಂದ ಅಲ್ಲೆಲ್ಲಾ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರಲ್ಲಿ ಯಾವ ರೀತಿ ಹಣ ಸಹಾಯವನ್ನು ಪಡೆಯುತ್ತಿದ್ದಾರೋ ಮತ್ತು ಅಲ್ಲಿ ಹೋಗಿ ಯಾವ ರೀತಿ ತಮ್ಮ ಪ್ರಭಾವವನ್ನು ಬೀರುತ್ತಿದ್ದಾರೋ ಆ ರೀತಿಯಾಗಿ ಈ ಸರ್ಕಾರದವರು ಏನನ್ನೂ ಮಾಡುತ್ತಿಲ್ಲ. ಈ ಸರ್ಕಾರದವರು ಸುಮ್ಮನೆ ಯೋಜನೆಗಳನ್ನು ಮಾಡುವುದಷ್ಟೇ. ರಾಜ್ಯದಲ್ಲಿ ಸಣ್ಣ ಪುಟ್ಟ ವ್ಯವಹಾರಗಳಿಗೆಲ್ಲಾ ಸರ್ಕಾರ ಕೈಹಾಕಿ ಒಬ್ಬರಿಗೊಬ್ಬರು ಕೈಕಾಲುಗಳನ್ನು ಕತ್ತರಿಸಿಕೊಳ್ಳುವ ಪ್ರಸಂಗಗಳಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಅದಕ್ಕೋಸ್ಕರವೇ ಪಕ್ಕದ ರಾಜ್ಯಗಳಲ್ಲಿ ಕೈಗಾರಿಕೆ ಅಭಿವೃದ್ಧಿಯಾಗಿರುವಷ್ಟು ನಾವು ಮುಂದೆ ಹೋಗಿಲ್ಲ. ಶ್ರೀಮಾನ್ ಬಿ. ಡಿ. ಜತ್ತಿಯವರು ಕೈಗಾರಿಕೆ ಮಂತ್ರಿಗಳಾಗಿದ್ದಾಗ ಈ ಸಭೆಯಲ್ಲಿ ಕೈಗಾರಿಕೆ ಬೇಡಿಕೆಯ ವಿಚಾರವಾಗಿ 2—3 ದಿನಗಳು ಚರ್ಚೆಯಾದ ಸಂದರ್ಭದಲ್ಲಿ ಅನೇಕ ಆಶ್ವಾಸನೆಗಳನ್ನು ಕೊಟ್ಟರು. ಕೇಂದ್ರದ ನೆರವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯುತ್ತೇವೆಂದು ಹೇಳಿದ್ದರು. ಈಗ ಆ ಮಂತ್ರಿ ಮಂಡಲ ಹೋಗಿ 3 ವರ್ಷಗಳಾದರೂ ಕೈಗಾರಿಕೆ ಕ್ಷೇತ್ರದಲ್ಲಿ ಅವರು ಹೇಳಿದಷ್ಟು ಮತ್ತು ಈಗ ಇವರು ಹೇಳುವಷ್ಟು ದೂರ ಪ್ರಗತಿಯನ್ನು ಸಾಧಿಸಿಲ್ಲವೆಂದು ನಾನು ಹೇಳುತ್ತೇನೆ. ಆಗಾಗ್ಗೆ ನಮ್ಮ ಮುಖ್ಯಮಂತ್ರಿಗಳು ಹಾಗೂ ಕೈಗಾರಿಕೆಯ ಸಚಿವರು ನಾವು ಸ್ಪೆಷಲ್ಲಾಗಿ ಸ್ಟೀಲನ್ನು ಅಭಿವೃದ್ಧಿಮಾಡುವುದಕ್ಕೋಸ್ಕರ ಮತ್ತು ಮ್ಯಾನ್ಯುಫ್ಯಾಕ್ಚರ್ ಮಾಡುವುದಕ್ಕೋಸ್ಕರ ಭದ್ರಾವತಿಯಲ್ಲಿ ಎಷ್ಟೋ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂಬುದಾಗಿ ಹೇಳಿದ್ದಾರೆ. ಮತ್ತೆ ಕೆಲವು ಫ್ಯಾಕ್ಟರಿಗಳಲ್ಲ ನಷ್ಟವಾಗುತ್ತಿದ್ದುದನ್ನು ತಡೆಗಟ್ಟಿದ್ದೇವೆಂಬುದಾಗಿ ಹೇಳಿದರು. ಯಾವ ರಾಜ್ಯದಲ್ಲಿ ರೈತನಾದವನು ಭೂಮಿಯಲ್ಲಿ ನಂಬಿಕೆ ಇಟ್ಟುಕೊಂಡು ವ್ಯವಸಾಯ ಮಾಡುತ್ತಾನೋ, ಮತ್ತು ಕೈಗಾರಿಕೆ ಅಭಿವೃದ್ಧಿಗಾಗಿ ದುಡಿಯುತ್ತಾನೋ ಅಂತಹವನಿಗೆ ಸರ್ಕಾರದವರು ವಿಶೇಷವಾಗಿ ಪ್ರೋತ್ಸಾಹವನ್ನು ಕೊಡಬೇಕು. ಅಂತಹವನಿಗೆ ಪ್ರೋತ್ಸಾಹ ಕೊಡದಿದ್ದರೆ, ಏನು ಈ ಕೈಗಾರಿಕೆ ಕ್ಷೇತ್ರದಲ್ಲಿ ಆದಾಯವನ್ನು ನಿರೀಕ್ಷಣೆ ಮಾಡಿದ್ದೇವೋ ಅದು ಬರೀ ಕನಸಿನ ಮಾತು ಆಗುತ್ತದೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಶ್ರೀಮಾನ್ ಬಸಪ್ಪನವರು ಇಬ್ಬರು ಮಂತ್ರಿಗಳು ಜಪಾನಿಗೆ ಹೋಗಿದ್ದರು, ಅವರು ಮೈಸೂರು ರಾಜ್ಯದಲ್ಲಿ ರೇಷ್ಮೆ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಹೋದರೇ ವಿನಹ ಯಾರೂ ವ್ಯಾಜ್ಯ ಮಾಡಿಕೊಂಡು ಹೋಗಲಿಲ್ಲವೆಂದು ಹೇಳಿದರು ಅಲ್ಲದೆ ಅವರು ಬಂದಮೇಲೆ ಉಪಮಂತ್ರಿಗಳು ತಮ್ಮನ್ನು ಕರೆಸಿ ಮಾತನಾಡಿದರು ಎಂಬುದಾಗಿಯೂ ಹೇಳಿದರು. ಆದರೆ ನಾನು ಹೇಳುವುದೇನೆಂದರೆ ಇವರು ಎಷ್ಟರ ಮಟ್ಟಿಗೆ ಅವರ ಲೋಪದೋಷಗಳನ್ನು ಮುಚ್ಚಿಡುತ್ತಿದ್ದಾರೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಯಾವ್ಯಾವ ಮಾರ್ಗದಲ್ಲಿ ಉಪಮಂತ್ರಿಗಳು ಹೋಗುತ್ತಿದ್ದಾರೆಂಬುದು ಇದರಿಂದಲೇ ಚೆನ್ನಾಗಿ ವ್ಯಕ್ತವಾಗುತ್ತದೆ. ನಾವು ಅವರನ್ನು ಕೆಲವು ಮೆಷಿನರಿಗಳನ್ನು ಕೇಳಿದ್ದೆವು. ಅವು ಇದುವರೆಗೂ ನೇರವಾಗಿ ರೈತರಿಗೆ ಮುಟ್ಟಿಲ್ಲ. ಅವರು ಬಂದು ಸುಮಾರು 1 ವರ್ಷ ಹತ್ತಿರವಾಯಿತು. ಅರಣ್ಯ ಸಂಪತ್ತು ಮತ್ತು ಕೈಗಾರಿಕೋದ್ಯಮದಲ್ಲಿ ನನಗಂತೂ ಯಾವ ಬೆಳಕನ್ನೂ ಕಾಣಿಸಿದಂತಾಗಲಿಲ್ಲ. ಅದಕ್ಕೋಸ್ಕರವಾಗಿ 10-15 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಪಕ್ಕದ ರಾಷ್ಟ್ರಗಳಿಗೆ ಹೋಗಿ ಬಂದ ಅನುಭವವನ್ನು ಇಲ್ಲ ಭಾಷಣ ಮಾಡಿದರೆ ಏನು ಪ್ರಯೋಜನ? ಅಲ್ಲದೆ ಇವರು ಸುಮ್ಮನೆ ಇಲ್ಲಿ ಆರೆಟರಿ ಮಾಡಿದರೇ ಹೊರತು ಈ ಉದ್ಯಮಕ್ಕೆ ಏನೇನು ಪ್ರಯತ್ನಗಳನ್ನು ಮಾಡಿದ್ದಾರೆಂಬುದನ್ನು ಈ ಸಭೆಗೆ ತಿಳಿಸುವುದಕ್ಕೆ ಶ್ರಮಪಡಲಿಲ್ಲ. ಈ ಕೈಗಾರಿಕೆ ವಿಷಯದಲ್ಲಿ ಸರ್ಕಾರ ಇಷ್ಟು ಮಂದಗತಿಯನ್ನು ಅನುಸರಿಸಿದರೆ ನಿಜವಾಗಿ ಈ ಕೈಗಾರಿಕೆ ಬೆಳೆಯುವುದಿಲ್ಲ. ಇವರು ಕೈಗಾರಿಕೆಗಳಿಗೆ ಹಣವನ್ನು ಇನ್‌ವೆಸ್ಟ್ ಮಾಡುವಾಗ, ಖರ್ಚು ಮಾಡುವಾಗ ಬಹಳ ದೀರ್ಘವಾಗಿ ಯೋಚನೆ ಮಾಡಬೇಕು. ಸಾಮಾನ್ಯವಾಗಿ ಎನ್. ಜಿ. ಓ. ಗಳು ಸಂಬಳ ಸಾರಿಗೆ ಜಾಸ್ತಿ ಮಾಡಿ ಎಂದು ಸರ್ಕಾರದವರನ್ನು ಕೇಳಿದರೆ ಹಣವಿಲ್ಲ ತೆರಿಗೆಯನ್ನು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಹಾಕಬೇಕಾಗುತ್ತದೆ. ಸಿಬ್ಬಂದಿ ಹೆಚ್ಚಿರುವ ಕಡೆಗಳಲ್ಲಿ ಅಧಿಕಾರಿಗಳನ್ನು ತೆಗೆಯಬೇಕು. ಡಿ. ಎ. ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಇವರ ಒಂದು ಅವ್ಯವಸ್ಥೆಯು ಪರಮಾವಧಿಯಲ್ಲಿ

(ಶ್ರೀ ಸಿ. ಜಿ. ಮುಕ್ಕಣ್ಣಪ್ಪ)

ಕೈಗಾರಿಕೆ ಕ್ಷೇತ್ರದಲ್ಲಿ ಅನುಸರಿಸಿರುವ ನೀತಿಯನ್ನು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಗುಲ್ಬರ್ಗ ಮತ್ತು ಹುಬ್ಬಳ್ಳಿಯಲ್ಲಿರತಕ್ಕ ಎರಡು ಮಿಲ್ಲುಗಳ ಮೇಲೆ ಹಣವನ್ನು ಇನ್ವೆಸ್ಟ್ ಮಾಡಿದ್ದಾರೆ. ಯಾವ ನ್ಯಾಯ ? ಸುಮಾರು 60-70 ವರ್ಷಗಳ ಕೆಳಗೆ ಸ್ಥಾಪನೆ ಮಾಡಿದಂಥ ಎರಡು ಸ್ಪಿನಿಂಗ್ ಮಿಲ್ಲುಗಳ ಮೇಲೆ 67 ಲಕ್ಷ ರೂಪಾಯಿಗಳನ್ನು ಹಾಕಿದ್ದಾರೆ. ಇದು ಎಷ್ಟು ನ್ಯಾಯ, ಇದರಿಂದ ಬಂದಂಥ ಲಾಭವೆಷ್ಟು? ಅನುಕೂಲವೆಷ್ಟು? ಇದಾವುದನ್ನು ಇವರು ಹೇಳುವುದಕ್ಕಾಗುವುದಿಲ್ಲ. ಈ ರಾಜ್ಯದಲ್ಲಿ ಎಲ್ಲಾ ಹಣಕ್ಕೂ ರಕ್ಷಣೆ, ಹೊರಗಿನಿಂದ ಬಂದಂಥವನಿಗೆ ರಕ್ಷಣೆ. ಆದರೆ ಈಗ ಗುಲ್ಬರ್ಗದಲ್ಲಿ ಒಬ್ಬ ಸಚಿವರು ಅಭಿಮಾನದಿಂದ, ಮುಂದೆ ಸಚಿವರಾಗಿ ತಮ್ಮ ಒಂದು ಸ್ಥಾನಮಾನವನ್ನು ಭದ್ರಮಾಡಿಕೊಳ್ಳುವುದಕ್ಕೋಸ್ಕರ ದೇಶದ ಬೋರೆಗೌಡನ ಹಣವನ್ನು ಮುರಿದು ಬೀಳುವಂತಹ ಅಲ್ಲಿರತಕ್ಕ ಸ್ಪಿನಿಂಗ್ ಲೂಮ್ಸ್ ಗೋಸ್ಕರ ವೃಥಾ ಖರ್ಚು ಮಾಡುತ್ತಿದ್ದಾರೆ. ಸುಮ್ಮನೆ ಎಲೆಕ್ಟ್ರಿಕ್ ಸ್ವಿಚ್ ಹಾಕಿದರೆ ಸಾಕು ಹಳೆಯ ಲೂಮ್ಸ್‌ಗಳೆಲ್ಲ ಚಟ್‌ಪಟ್ ಆಗುತ್ತವೆ. ಅಂದಮೇಲೆ ಈ ಎರಡು ಮಿಲ್‌ಗಳಿಗಾಗಿ ಇನ್ನು ಹತ್ತು ವರ್ಷಗಳವರೆಗೆ ಕಷ್ಟಪಟ್ಟರೂ ಅವುಗಳಿಂದ ಬರತಕ್ಕ ವರಮಾನ ನಮಗೇನೂ ಕಾಣುವುದಿಲ್ಲ.

Sri B. D. JATTI (Minister for Finance).—As far as the Hubli Co-operative Textile Mill is concerned, I might inform the House that it has turned the corner and it is earning not by thousands but by some lakhs. So, the criticism which he is trying to make against this mill does not hold good. As for M. S. K. Mills, it will take some time.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಹಣಕಾಸಿನ ಸಚಿವರು ಹುಬ್ಬಳ್ಳಿ ಮಿಲ್ಲಿನಿಂದ ಸಾವಿರಗಳಷ್ಟು ಅಲ್ಲ ಲಕ್ಷಾಂತರ ರೂಪಾಯಿಗಳನ್ನು ವರಮಾನ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆಂಬುದಾಗಿ ಆಶ್ವಾಸನೆ ಕೊಟ್ಟರು. ಆ ಒಂದು ಆಶಾಭಾವನೆ ಇವರಿಗೆ ಇದೆ. ಅಂತಹ ಒಂದು ಆಶಾಕಿರಣ ಮೂಡಿದೆ. ಇದು ಜಯಪ್ರದವಾಗುತ್ತದೆಂದು ಹೇಳುತ್ತಿದ್ದಾರೆ. ಅವರು ಗುಲ್ಬರ್ಗಾ ಮಿಲ್‌ಗೆ ಹಾಕಿದ್ದು, ಆ ಮಿಲ್ಲಿಗೆ ಹಾಕಿದ್ದಂಥ ಬಂಡವಾಳದ ಮೇಲೆ ಸಾಲ ಕೊಡುತ್ತಿದ್ದುದು, ಅಲ್ಲದೆ ಮ್ಯಾನೇಜಿಂಗ್ ಡೈರೆಕ್ಟರ್ಸ್ ಬೋನಸ್ ಕೊಡುವುದಕ್ಕೋಸ್ಕರ ಮಾಡಿದ್ದಂತಹ ವ್ಯವಸ್ಥೆ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಈ ರೀತಿಯಾಗಿ ಒಂದು ಮಾತನ್ನು ಬರೆಯುತ್ತಾರೆ :

> "The whole affair gives an impression that the Government has been some how misled to invest its funds resulting in benefit to the Mills' creditors and principal shareholders at the cost of the tax-payer. What is most regrettable is that the Government invested Rs. 60 lakhs without being the absolute owner of 51 per cent shares, because 17 per cent of the shares are to be re-transferred."

ಹಣಕಾಸಿನ ಸಚಿವರು ಇಲ್ಲಿ ಇದ್ದಾರೆ. ಅವರು ತಮಗೆ ಹಣಕಾಸಿನ ಖಾತೆ ಇದೆಯೆಂದು ಸರ್ಕಾರದ ಹಣವನ್ನು ತೆಗೆದುಕೊಂಡು ಹೋಗಿಏನು ಧೈರ್ಯವಾಗಿ ಅಂತಹ ಮಿಲ್ಲುಗಳ ಮೇಲೆ ಹಾಕಿದ್ದಾರೋ ಗೊತ್ತಿಲ್ಲ. 70 ವರ್ಷಗಳ ಹಿಂದೆ ಇದ್ದಂಥ ಮಿಲ್‌ಗೆ, ತಮಗೆ ಬೇಕಾದವರಿಗೆ ಯಾರಿಗೋ ದುಡ್ಡು ಕೊಡುವುದಕ್ಕೋಸ್ಕರ ಈ ಸರ್ಕಾರ ಹಣವನ್ನು ಅವುಗಳ ಮೇಲೆ ಇನ್ವೆಸ್ಟ್ ಮಾಡುತ್ತದೆ.

ಶ್ರೀ ಕೆ. ಮಲ್ಲಪ್ಪ (ಕೈಗಾರಿಕೆ ಮತ್ತು ವಾಣಿಜ್ಯ ಶಾಖೆಯ ಮಂತ್ರಿಗಳು).—ಆದ್ದರಿಂದ ಸರ್ಕಾರಕ್ಕೆ ಬರುವುದೂ ಉಂಟು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗುಲ್ಬರ್ಗಾ ಮಿಲ್‌ಗಾಗಿ ಎಷ್ಟು ಹಣವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ? ಇವರ ಕೈಗಾರಿಕೆ ನೀತಿ ರಾಷ್ಟ್ರದ ಕಲ್ಯಾಣಕ್ಕೋಸ್ಕರವಲ್ಲ ರಾಷ್ಟ್ರಾಭಿವೃದ್ಧಿಗೋಸ್ಕರವಲ್ಲ. ಕೈಗಾರಿಕಾಭಿವೃದ್ಧಿಗೋಸ್ಕರವಲ್ಲ. ಯಾವುದೋ ಒಂದು ಇಂಟರೆಸ್ಟನ್ನು ಸ್ಯಾಟಿಸ್‌ಫೈ ಮಾಡುವುದಕ್ಕೋಸ್ಕರವೆಂದು ಹೇಳಬಹುದು. ಈ ರೀತಿಯಾಗಿ ಈ ಮಿಲ್ಲುಗಳಲ್ಲಿ ಹಣವನ್ನು ಇನ್ವೆಸ್ಟ್ ಮಾಡಿರುವುದು ಸರಿಯಲ್ಲ. I must congratulate the Chairman of Public Accounts Committee because he had the courage to criticise the attitude of the Government for investing huge monies without any return.

ಆದಕ್ಕೋಸ್ಕರವಾಗಿ ಈಗಲಾದರೂ ಸ್ವಲ್ಪ ಕಣ್ಣು ಬಿಟ್ಟು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೊಟ್ಟಿರುವ ವರದಿಯನ್ನು ಸರ್ಕಾರದವರು ಕೂಲಂಕಷವಾಗಿ ವಿಮರ್ಶೆ ಮಾಡಬೇಕು. ಕೈಗಾರಿಕೆಗಳ ಮೇಲೆ ಸರ್ಕಾರದವರು ಹಣವನ್ನು ಇನ್‌ವೆಸ್ಟ್ ಮಾಡಿರುವ ವಿಷಯದಲ್ಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಮಾಡಿರತಕ್ಕಂಥ ವಾದ ವಿವಾದವನ್ನು ನೋಡಿ ನನಗೆ ಬಹಳ ವ್ಯಸನವಾಯಿತು. ಇದು ಮನಸ್ಸಿಗೆ ಬಹಳ ದುಃಖ ತರತಕ್ಕಂಥಾದ್ದು. ಸರ್ಕಾರದವರು ಇಂಥಾದ್ದನ್ನು ಮಾಡಬಾರದು ಯಾವುದು ಸರ್ಕಾರದ ಬೊಕ್ಕಸಕ್ಕೆ ಆದಾಯವನ್ನು ತರುವುದಿಲ್ಲವೋ, ಯಾವುದರಿಂದ ದೇಶದ ಕಲ್ಯಾಣ ಆಗುವುದಿಲ್ಲವೋ, ಉದ್ಯಮ ಬೆಳೆಯುವುದಿಲ್ಲವೋ ಅಂಥಾ ಕಡೆ ಸರ್ಕಾರ ಹಣವನ್ನು ಹಾಕಬಾರದು, ಎಂದು ನಾನು ಹೇಳುತ್ತೇನೆ. ಒಂದು ಸಂದರ್ಭದಲ್ಲಿ ಫೈನಾನ್ಸ್ ಕಾರ್ಪೋರೇಷನ್‌ನವರು ಅವರಿಗೆ ದುಡ್ಡು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ಟರ್ನ್‌ಡೌನ್ ಮಾಡಿದಮೇಲೆ ಸರ್ಕಾರದವರು ಅವರಿಗೆ ಹೇಗೆ ಹಣವನ್ನು ಕೊಟ್ಟರು ನಾನು ಕೇಳುತ್ತೇನೆ. ನಮ್ಮ ದೇಶದಲ್ಲಿ ಕೈಗಾರಿಕೆ ಬೆಳೆಯಬೇಕು, ನಮಗೆ ಹಣ ಸಾಲದು, ನಮಗೆ ಇನ್ನೂ ಹೆಚ್ಚು ಹಣಬೇಕು ಎಂದು ಫೈನಾನ್ಸ್ ಕಾರ್ಪೋರೇಷನ್ನಿನವರ ಹತ್ತಿರ ಹಣವನ್ನು ಕೇಳಿದರೆ ಕೇಂದ್ರ ಸರ್ಕಾರದವರು ಮೈಸೂರಿನ ಜನತೆಯೊಂದಿಗೆ ಕಣ್ಣಾಮುಚ್ಚಾಲೆಯ ಆಟವನ್ನಾಡುತ್ತಿದ್ದಾರೆ. ನಮಗೆ ಸಿಮೆಂಟ್ ಫ್ಯಾಕ್ಟರಿಬೇಕು, ಅಲ್ಯೂಮಿನಿಯಂ ಫ್ಯಾಕ್ಟರಿ ಬೇಕು, ಸ್ಪೆಷಲ್ ಸ್ಟೀಲ್ ಪ್ಲಾಂಟ್ ಬೇಕು ಎಂದು ಡಿಲ್ಲಿ ಸರ್ಕಾರಕ್ಕೆ ಇವರು ಹೋದರು ಮಾತನಾಡಿದರು, ಅವರೂ ಹೋದರು ಮಾತನಾಡಿದರು, ಆದರೆ ಈ ವಿಷಯದಲ್ಲಿ ಕೇಂದ್ರ ಸರ್ಕಾರದವರು ಕಣ್ಣಾಮುಚ್ಚಾಲೆಯ ಆಟವಾಡುತ್ತಿದ್ದಾರೆ. ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಷಯದಲ್ಲಿ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತಾರೆ ಮತ್ತೆ ಇನ್ನೊಬ್ಬರು ಇನ್ನೊಂದು ಹೇಳಿಕೆಯನ್ನ ಕೊಡುತ್ತಾರೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಷಯದಲ್ಲಿ ಯಾರು ಬೇರೆ ಬೇರೆ ಹೇಳಿಕೆಗಳನ್ನು ಕೊಟ್ಟಿದ್ದಾರೆ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಟೆಕ್ನಿಕಲ್ ಎಕ್ಸ್‌ಪರ್ಟ್‌ಗಳು ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆಯಲ್ಲಿ ಸ್ಥಾಪನೆ ಮಾಡಬೇಕೆಂದು ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಇನ್ನೊಂದು ಕಡೆ ಒಬ್ಬರು ಸೇಲಂನಲ್ಲಿ ಆಗಬೇಕು ಎಂದು ಹೇಳುತ್ತಿದ್ದಾರೆ. ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಷಯದಲ್ಲಿ ಪರಿಶೀಲಿಸಲು ಒಂದು ಟೆಕ್ನಿಕಲ್ ಎಕ್ಸ್‌ಪರ್ಟ್ ಕಮಿಟಿಯನ್ನು ನಮ್ಮ ಸರ್ಕಾರದವರು ನೇಮಕ ಮಾಡಿದ್ದರು. ಆ ಕಮಿಟಿಯವರು ಆ ವಿಷಯದಲ್ಲಿ ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆಯೋ ಆ ಅಭಿಪ್ರಾಯಗಳನ್ನೊಳಗೊಂಡ ಒಂದು ಪುಸ್ತಕವನ್ನು ನಮಗೆ ಇಲ್ಲಿ ಕೊಟ್ಟಿದ್ದಾರೆ. ಅದರ ವಿಷಯದಲ್ಲಿ ನಾನು ಈಗ ಮಾತನಾಡುತ್ತಿದ್ದೇನೆ. ಇಲ್ಲಿ ತಾವು ನಮ್ಮನ್ನು ಸುಮ್ಮನೆ ಯಾವುದೊ ಕ್ರಾಸ್ ಎಗ್ಸಾಮಿನ್ ಮಾಡಬೇಡಿ.

ಶ್ರೀ ಎಸ್. ನಿಜಲಿಂಗಪ್ಪ.—ತಳ, ಬುಡ ಯಾವುದೂ ಇಲ್ಲದೆ ಮಾನ್ಯ ಸದಸ್ಯರು ಸುಮ್ಮನೆ ಮಾತನಾಡುತ್ತಿದ್ದಾರೆ. ನಾನು ಕೇಳುತ್ತಿದ್ದೇನೆ. ಅವರಿಗೆ ಹೇಳುವುದಕ್ಕೆ ಅಧಿಕಾರವಿದೆ ಅವರು ಹೇಳುತ್ತಾರೆ. ಆದರೆ ಆ ವಿಷಯದಲ್ಲಿ ಏನೇನು ಇದೆ ಎಂಬುದನ್ನು ತಿಳಿದುಕೊಂಡು ಹೇಳಿದರೆ ಒಳ್ಳೆಯದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೌದು, ನಮಗೆ ತಳ, ಬುಡ ಯಾವುದೂ ಗೊತ್ತಿಲ್ಲ. ಏನೋ ಬೀದಿಯಲ್ಲಿ ಮಾತನಾಡುವ ಹಾಗೆ ಮಾತನಾಡುತ್ತೇವೆ. ನಮಗೆ ಅದರ ಹಿನ್ನಲೆ ಗೊತ್ತಿಲ್ಲ. ನಮಗೆ ಜವಾಬ್ದಾರಿ ಇಲ್ಲ. ಮುಖ್ಯಮಂತ್ರಿಗಳಿಗೆ ಎಲ್ಲಾ ವಿಷಯಗಳೂ ಗೊತ್ತಿದೆ. ನಮಗೆ ಏನೂ ಗೊತ್ತಿಲ್ಲ. ಈ ಹೊಸಪೇಟೆಯ ಉಕ್ಕಿನ ಕಾರ್ಖಾನೆಯ ವಿಷಯದಲ್ಲಿ ನಮ್ಮ ಸರ್ಕಾರದವರು ನೇಮಕ ಮಾಡಿದ್ದಂತಹ ಸಮಿತಿಯವರು ಕೊಟ್ಟಿರತಕ್ಕ ವರದಿಯಲ್ಲಿರತಕ್ಕ ಅಂಶಗಳನ್ನು ನಾನು ಪ್ರಸ್ತಾಪ ಮಾಡುತ್ತಾ, ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆಯಲ್ಲಿಯೇ ಸ್ಥಾಪನೆ ಮಾಡುವಂತೆ ಇಂಡಿಯಾ ಸರ್ಕಾರದವರಿಗೆ ಒತ್ತಾಯ ಮಾಡಬೇಕು ಎಂಬ ಅಂಶವನ್ನ ಮನಸ್ಸಿನಲ್ಲಿ ಇಟ್ಟುಕೊಂಡು ನಾನು ಮಾತನಾಡುತ್ತಿದ್ದೆ. ಈಗ ನಿಮ್ಮ ಕೈಯಲ್ಲಿ ಎಲ್ಲಾ ಅಧಿಕಾರವನ್ನು ಕೊಟ್ಟಿದೆ, ನಾನು ಇಲ್ಲಿ ಹೇಳತಕ್ಕಂಥ ವಿಷಯದಲ್ಲಿ ಸತ್ಯ ಏನೂ ಇಲ್ಲ ಎಂದರೆ ಎಂದುಕೊಳ್ಳಿ ಚಿಂತೆಯಿಲ್ಲ. ನನ್ನ ಮನಸ್ಸಿಗೆ ಏನು ತೋರುತ್ತದೆಯೋ ಅದನ್ನು ನಾನು ಈ ಸಭೆಗೆ ಹೇಳುತ್ತೇನೆ. ಅದರಲ್ಲಿ ಹಿತ ಇದ್ದರೆ ತೆಗೆದುಕೊಳ್ಳಿ, ಅದರಲ್ಲಿ ಹಿತ ಇಲ್ಲದೆ ಇದ್ದರೆ ಬಿಟ್ಟುಬಿಡಿ. ಆದಕ್ಕೆ ನನ್ನ ನಿರ್ಬಂಧವೇನೂ ಇಲ್ಲ. ಈ ಕೈಗಾರಿಕೆಯನ್ನು ಸ್ಥಾಪನೆ ಮಾಡುವ ವಿಷಯದಲ್ಲಿ ಅಖಿಲಭಾರತದ ಕಾಂಗ್ರೆಸ್ ಅಧ್ಯಕ್ಷರು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ, ಹಿಂದೂಸ್ಥಾನದ ಪ್ರಧಾನಿಗಳು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ, ಶ್ರೀಮಾನ್ ಮಲ್ಲಪ್ಪನವರು ಒಂದು ಸ್ಟೇಟ್‌ಮೆಂಟನ್ನು ಕೊಟ್ಟರು. ಮಂಗಳೂರಿನಲ್ಲಿ ಫರ್ಟಿಲೈಜರ್ ಫ್ಯಾಕ್ಟರಿ ಮತ್ತು ಅಲ್ಯೂಮಿನಿಯಂ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಫ್ಯಾಕ್ಟರಿ ಅಸ್ತಿತ್ವಕ್ಕೆ ಬರುತ್ತದೆಯೋ, ಹೊಸಪೇಟೆಯಲ್ಲಿ ಸ್ಥಾಪನೆ ಮಾಡಬೇಕೆಂದಿರತಕ್ಕ ಉಕ್ಕಿನ ಕಾರ್ಖಾನೆ ಯಾವ ಮಟ್ಟದಲ್ಲಿ ಇದೆ ಎಂಬುದನ್ನು ನಾವು ತಿಳಿದುಕೊಳ್ಳಬೇಡವೇ? ನಿಮಗೆ ಎಷ್ಟು ದೇಶಾಭಿಮಾನ ಇದೆಯೋ ನನಗೂ ಅಷ್ಟೇ ದೇಶಾಭಿಮಾನ ಇದೆ. ಇದರಲ್ಲಿ ಯಾರಿಗೆ ಯಾವುದೂ ಶಾಶ್ವತವಲ್ಲ. ನಿಮಗೆ ಮುಖ್ಯಮಂತ್ರಿಗಳ ಸ್ಥಾನ ಶಾಶ್ವತವಲ್ಲ. ನನಗೆ ಈ ಸಭೆಯ ಸದಸ್ಯತ್ವದ ಸ್ಥಾನ ಶಾಶ್ವತವಲ್ಲ. ತಾವು ಅನುಭವಿಗಳು. ಯಾರಾದರೂ ಏನಾದರೂ ಹೇಳುವಾಗ ಅವರ ಮನಸ್ಸಿಗೆ ವ್ಯಸನವನ್ನುಂಟುಮಾಡಬಾರದು. ನಾವು ಹೇಳುವುದರಲ್ಲಿ ಏನಾದರೂ ತಪ್ಪು ಇದ್ದರೆ ಅದು ಸರಿಯಿಲ್ಲ ಎಂದು ಹೇಳಿ, ಸುಮ್ಮನೆ ನಾವು ಮಾತನಾಡುವುದನ್ನು ನಿಲ್ಲಿಸಿ ನಮ್ಮ ಬಾಯಿಮುಚ್ಚಿಸುವುದಕ್ಕೆ ಪ್ರಯತ್ನಮಾಡಿದರೆ, ನಾವು ಶಾಲಾ ಸ್ಕೂಲುಗಳಲ್ಲಿ ಓದತಕ್ಕ ಮಕ್ಕಳಾಗಬೇಕು ಎಂದರೆ ನಾವು ಈ ಶಾಸನ ಸಭೆಯಲ್ಲಿ ಇರುವುದಕ್ಕೆ ಅರ್ಹರಲ್ಲ. ನಿಜವಾಗಿಯೂ ನನ್ನ ಮನಸ್ಸಿಗೆ ನೋವಾಗುತ್ತದೆ. ಈ ರಾಜ್ಯದಲ್ಲಿ ಸಿಮೆಂಟ್ ಫ್ಯಾಕ್ಟರಿಗೆ ಲೈಸೆನ್ಸು ಕೊಡುವಾಗ ಅನೇಕ ಸಾರಿ ಪ್ರಶ್ನೆಗಳು ಉದ್ಭವವಾಗುತ್ತವೆ. ಈಗ ಹೊಸದುರ್ಗದಲ್ಲಿ ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಯಾರು ಮುಂದೆ ಬಂದರೂ ಕೊಡುತ್ತೇವೆಂದು ಹೇಳುತ್ತಿದ್ದಾರೆ, ಮೈಸೂರಿಗೆ ಹೆಚ್ಚು ಕುಮ್ಮಕ್ಕು ಕೊಡಬೇಕು, ಮೈಸೂರಿನಲ್ಲಿ ಕೈಗಾರಿಕೆಗಳು ಪ್ರಮುಖ ಪಾತ್ರವನ್ನು ವಹಿಸಬೇಕು ಎಂದು ಸರ್ಕಾರದ ನೀತಿ ಇದೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಇದುವರೆಗೆ ಮೈಸೂರು ದೇಶದಲ್ಲಿ ಯಾವ ಕೈಗಾರಿಕೆಯನ್ನು ಸ್ಥಾಪನೆಮಾಡಿ ಮೈಸೂರಿನ ಜನ ಶ್ರೀಮಂತರಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರೆಂದು ನಾನು ಸರ್ಕಾರದವರನ್ನು ಕೇಳುತ್ತೇನೆ. ಅದಕ್ಕೋಸ್ಕರವಾಗಿ ರಾಜ್ಯ ಸರ್ಕಾರದವರು ತಮ್ಮ ಕೈಲಾದ ಪ್ರಯತ್ನವನ್ನು ಮಾಡಿ ಕೇಂದ್ರ ಸರ್ಕಾರದವರ ಜೊತೆಯಲ್ಲಿ ಮಾತನಾಡಿ ಕೈಗಾರಿಕೆಯನ್ನು ಸ್ಥಾಪನೆಮಾಡುವ ವಿಷಯದಲ್ಲಿ ಮೈಸೂರಿಗೆ ಹೆಚ್ಚಿನ ಮೆಹನತ್ತು ಕೊಡಬೇಕೆಂದು ಅವರಿಗೆ ಹೇಳಬೇಕೆಂದು ನಾನು ಹೇಳುತ್ತೇನೆ.

ಇನ್ನು ಕೈಗಾರಿಕಾ ಶಾಖೆಯ ಸಚಿವರು ಕೆಲವು ವರದಿಗಳನ್ನು ನಮಗೆ ಕೊಟ್ಟಿದ್ದಾರೆ. ಇವುಗಳೆಲ್ಲವನ್ನೂ ನಾನು ನೋಡಿದೆ. ಈಗ ನಮ್ಮ ದೇಶದಲ್ಲಿರತಕ್ಕ ಕೈಗಾರಿಕೆಗಳಲ್ಲಿ ಕೆಲವು ಮಾತ್ರ ಆದಾಯವನ್ನು ಕೊಡುತ್ತವೆ, ಕೆಲವು ಆದಾಯವನ್ನು ಕೊಡುವುದಿಲ್ಲ ಎಂಬುದು ನಮಗೆ ಗೊತ್ತಾಗುತ್ತಿದೆ. ಈಗ ನಾಳೆ ಸರ್ಕಾರದವರು ಇಂಡಸ್ಟ್ರಿಯಲ್ ಕಾರ್ಪೊರೇಷನ್‌ಅನ್ನು ಸ್ಥಾಪನೆಮಾಡಬೇಕೆಂದಿದ್ದಾರೆ. ಅದಕ್ಕೆ ಈ ಕೈಗಾರಿಕೆಗಳೆಲ್ಲವನ್ನೂ ಟ್ರಾನ್ಸ್‌ಫರ್ ಮಾಡುವಾಗ ಆ ಕಾರ್ಪೊರೇಷನ್ನಿನ ಸ್ಟೇಟಸ್ ಏನು, ಅದೇನು ಪಬ್ಲಿಕ್ ಸೆಕ್ಟಾರೇ ಅಥವಾ ಪ್ರೈವೇಟ್ ಸೆಕ್ಟಾರೇ ಅದರ ವಿಷಯ ಏನು ಎಂಬುದು ನನಗೆ ಅರ್ಥವಾಗಲಿಲ್ಲ. ಮತ್ತು ಈ ಕೈಗಾರಿಕೆಗಳನ್ನು ಕಾರ್ಪೊರೇಷನ್ನಿಗೆ ಟ್ರಾನ್ಸ್‌ಫರ್ ಮಾಡಿದರೆ ಆಗ ಸರ್ಕಾರದ ನಿಲುವು, ಸರ್ಕಾರದ ಪಾತ್ರ ಏನು ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಈಗ ಭದ್ರಾವತಿಯಲ್ಲಿರತಕ್ಕ ಕೈಗಾರಿಕೆಗಳಿಗೆ ಒಂದು ಕಾರ್ಪೊರೇಷನ್, ನ್ಯೂ.ಜಿ.ಇ.ಎಫ್ ಕೈಗಾರಿಕೆಗಳಿಗೇ ಒಂದು ಕಾರ್ಪೊರೇಷನ್ ಮಾಡುತ್ತೀರಾ ಅಥವಾ ಎಲ್ಲಾ ಕೈಗಾರಿಕೆಗಳಿಗೂ ಒಂದು ಕಾರ್ಪೊರೇಷನ್ ಮಾಡುತ್ತೀರಾ ಹೇಗೆ ಇದರಲ್ಲಿ ಸರ್ಕಾರದ ನಿಲುವು ಏನು ಎಂಬುದನ್ನ ತಿಳಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಪ್ರಜಾಪ್ರಭುತ್ವ ಸರ್ಕಾರ ಸ್ಥಾಪನೆ ಆದ ಕಾಲದಿಂದಲೂ ಇಲ್ಲಿ ಫಿಲಂ ಇಂಡಸ್ಟ್ರಿಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಶ್ರೀಮಾನ್ ಹನುಮಂತಯ್ಯನವರ ಕಾಲದಿಂದಲೂ ಅದು ನಡೆಯುತ್ತಿದೆ. ಆಮೇಲೆ ಶ್ರೀಮಾನ್ ಜತ್ತಿಯವರೂ ಕೂಡ ನಮ್ಮ ದೇಶದಲ್ಲಿ ರಾಫಿಲಂ ಪ್ರೊಡ್ಯೂಸಿಂಗ್ ಇಂಡಸ್ಟ್ರಿಯನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ. ಈಗ ನೀಲಗಿರಿಯಲ್ಲಿ ರಾಫಿಲಂ ಪ್ರೊಡ್ಯೂಜಿಂಗ್ ಇಂಡಸ್ಟ್ರಿಯನ್ನು ಸ್ಥಾಪನೆಮಾಡುತ್ತಾರೆಂಬ ವರ್ತಮಾನ ಕೇಳಿಬರುತ್ತದೆ. ಮೈಸೂರು ರಾಜ್ಯದಲ್ಲಿ ಅದನ್ನು ಸ್ಥಾಪನೆ ಮಾಡಬೇಕೆಂದು ಕೇಂದ್ರ ಸರ್ಕಾರದವರಿಗೆ ಯಾರೂ ತಿಳಿಸಲಿಲ್ಲವೇ? ಇಲ್ಲಿ ಅದನ್ನು ಸ್ಥಾಪನೆ ಮಾಡಬೇಕೆಂದು ಇಲ್ಲಿ ವಾಯುಗುಣ ಹಿತಕರವಾಗಿಲ್ಲವೇ ಎಂದು ನಾನು ಕೇಳುತ್ತೇನೆ. ಅದಕ್ಕೋಸ್ಕರವಾಗಿ ಮೈಸೂರು ರಾಜ್ಯದಲ್ಲಿ ರಾಫಿಲಂ ಇಂಡಸ್ಟ್ರಿಯನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಜಿಂಕ್‌ಷೀಟ್ ಸರಿಯಾಗಿ ಸಿಕ್ಕುತ್ತಿಲ್ಲ. ಅದೆಲ್ಲವೂ ಡಿಫೆನ್ಸಿಗೆ ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ. ಇವೊತ್ತು ಅದನ್ನು ರೀಪ್ಲೇಸ್ ಮಾಡುವುದಕ್ಕೆ ಬೇರೆ ಏನಾದರೂ ಸರ್ಕಾರದವರು ಪ್ರಯತ್ನ ಮಾಡಿದ್ದಾರೆಯೋ? ಜಿಂಕ್‌ಷೀಟು, ಆಸ್‌ಬೆಸ್ಟೋಷೀಟ್ಸ್ ಇವುಗಳನು ಮ್ಯಾನುಫ್ಯಾಕ್ಚರ್ ಮಾಡುವುದಕ್ಕೆ ಸರ್ಕಾರದವರು ಏನಾದರೂ ನಿರ್ಧಾರಮಾಡಿದ್ದಾರೆಯೋ? ಎಲ್ಲೆಲ್ಲಿ ಅದಕ್ಕೆ ಬೇಕಾದ ರಾಮೆಟೀರಿಯಲ್ಸ್ ಸಿಕ್ಕುತ್ತದೆ ಎನ್ನುವ ಸರ್ವೆ ಮಾಡಿದ್ದಾರೆಯೇ?

ಯಾವ ಮಟ್ಟದಲ್ಲಿ ಯಾವುದು ಅಸ್ತಿತ್ವಕ್ಕೆ ಬರುತ್ತದೆ ಎಂಬುದನ್ನು ಸರ್ಕಾರದವರು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮಿನರಲ್ ಡೆವಲಪ್‌ಮೆಂಟ್ ಬೋರ್ಡು ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಈ ಮಿನರಲ್ ಡೆವಲಪ್‌ಮೆಂಟ್ ಬೋರ್ಡು ಸರಕಾರಕ್ಕೆ ಒಂದು ಕುತ್ತು. ಇದಕ್ಕೆ ನೂರಾರು ಲಾರಿಗಳನ್ನು ಕೊಂಡುಕೊಂಡು, ಸಾವಿರಾರು ಎಕರೆ ಲೀಸ್ ಮಾಡಿದರು. ಆಮೇಲೆ ಲಾರಿಗಳನ್ನು ಹರಾಜು ಹಾಕಿದರು. ತಾವು ಇಂಥ ಸಂಸ್ಥೆಯ ಮೇಲೆ ಹಣ ಹಾಕುವಾಗ ಇದರಿಂದ ದೇಶಕ್ಕೆ ಅನುಕೂಲ ವಾಗುತ್ತದೆಯೆ, ಈ ಸಂಸ್ಥೆ ಬೆಳೆಯುತ್ತದೆಯೆ ಇಲ್ಲವೆ, ಖಜಾನೆಗೆ ಹಣ ಬರುತ್ತದೆಯೆ ಇಲ್ಲವೆ ಎಂದು ಯೋಚನೆ ಮಾಡದೆ, ಏನೊ ಒಂದು ಬೆಳಿಗ್ಗೆ ಡಿಸಿಶನ್ ತೆಗೆದುಕೊಂಡು ಬೋರ್ಡು ಮಾಡಿ, ಲಾರಿ ಜೀಪು ತೆಗೆದುಕೊಂಡು, ಡೈರೆಕ್ಟರ್ ನೇಮಕ ಮಾಡಿ, ಮೆಂಬರುಗಳು ಅಂತ ನೇಮಿಸಿ, ಈ ಪೊಲಿಟಿಕಲ್ ಆಂಬಿಶನ್ ಫುಲ್‌ಫಿಲ್ ಮಾಡತಕ್ಕಂಥ ಹವ್ಯಾಸವನ್ನು ಸರ್ಕಾರದವರು ಬಿಟ್ಟರೆ, ಸರ್ಕಾರದವರು ಕೈಗಾರಿಕೆಗಳಿಗೋಸ್ಕರವಾಗಿ ಖರ್ಚುಮಾಡುವ ಹಣ ನಿಜವಾಗಿಯೂ ಸಾರ್ಥಕವಾಗುತ್ತದೆ. ಇಲ್ಲದೆ ಹೋದರೆ ಅದು ಆಗುವುದಿಲ್ಲ ಅಂತ ನಾನು ಹೇಳುತ್ತೇನೆ. ತಾವು ಕೈಗಾರಿಕೆಗಳಿಗೋಸ್ಕರ ದೇಶದ ಆದಾಯದಲ್ಲಿ ಅರ್ಧದಷ್ಟನ್ನಾದರೂ ಖರ್ಚು ಮಾಡಬೇಕು ; ಇಲ್ಲದೆಹೋದರೆ ಕುಂಭಕರ್ಣನ ಬಾಯಿಗೆ ಸ್ವಲ್ಪ ನೀರು ಬಿಟ್ಟ ಹಾಗೆ ಎಲ್ಲಾ ಕೈಗಾರಿಕೆಯ ಗತಿಯೂ ಆಗಬಹುದು. ನೀವು 10-15 ಕೋಟಿ ರೂಪಾಯಿ ಖರ್ಚುಮಾಡಿದರೆ, ಎಸ್ಟಾಬ್ಲಿಶ್‌ಮೆಂಟಿಗೇ ಜಾಸ್ತಿ ಖರ್ಚಾಗಿ, ಕೈಗಾರಿಕೆಗೆ ಸ್ವಲ್ಪ ರಾಮೆಟೀರಿಯಲ್ಲನ್ನೂ ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಮತ್ತಿನ್ನೇನೂ ಸಾಧ್ಯವಾಗುವುದಿಲ್ಲ ಅನ್ನುವುದನ್ನು ಸರಕಾರದವರು ತೀವ್ರವಾಗಿ ಆಲೋಚನೆ ಮಾಡಬೇಕು. About employment potential ಹೇಳಬೇಕಾಗಿದೆ.

Mr. SPEAKER.—It will be dealt with in reply.

Sri C. J. MUCKANNAPPA.—Concerns which are run by the Government of India, ಅವುಗಳಲ್ಲಿ ಮೈಸೂರಿನವರಿಗೆ ಯಾವ ಅವಕಾಶವಿಲ್ಲ. ಮೈಸೂರು ಸರಕಾರದವರು ಕೇಂದ್ರ ಸರಕಾರದ ಕೈಗಾರಿಕೆಗಳಲ್ಲಿ ಹಾಕಿರತಕ್ಕಂಥ ಹಣಕ್ಕೂ, ಅಲ್ಲಿ ಮೈಸೂರಿನವರಿಗೆ ಕೊಡತಕ್ಕಂಥ ಕೆಲಸಕಾರ್ಯಗಳಿಗೂ ನ್ಯಾಯವಾದ ಸಂಬಂಧವಿಲ್ಲ. ನಮ್ಮ ಸರಕಾರದವರು ಮೈಸೂರಿನವರಿಗೆ ಏನು ಮಾಡುತ್ತಿದ್ದಾರೆ ? ಕನ್ನಡ ಜನ, ಕನ್ನಡ ಮಾತೆ, ಕನ್ನಡ ನಾಡು ಎಂದು ಹೇಳಿದ್ದೇ ಹೇಳಿದ್ದು, ಆದರೆ ಕನ್ನಡಿಗರ ಅಭಿಮಾನಿಗಳೇ ಇಲ್ಲ. ಕನ್ನಡಿಗರಿಗೆ ಕೇಂದ್ರದ ಕೈಗಾರಿಕೆಗಳಲ್ಲಿ ಏನೂ ಸ್ಥಳವೇ ಇಲ್ಲ; ಕನ್ನಡಿಗರಿಗೆ 2 ಪರ್ಸೆಂಟಿನಷ್ಟು ಕೂಡ ಇಲ್ಲ ಯಾವ ಕೈಗಾರಿಕೆಯಲ್ಲಿಯೂ ಸ್ಥಳವಿಲ್ಲ. ಅದನ್ನು ಅನೇಕ ಸಲ ಕೈಗಾರಿಕಾ ಮಂತ್ರಿಗಳನ್ನು ಕೇಳಿಕೊಂಡಿದ್ದೇವೆ. ಕನ್ಯಾಕುಮಾರಿಯಿಂದ ಹಿಮಾಚಲದವರೆಗೆ ಮಾತನಾಡುತ್ತಿರತಕ್ಕಂಥ ಸರಕಾರಕ್ಕೆ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆ ಎಂದು ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಕನ್ಯಾಕುಮಾರಿಯಿಂದ ಹಿಮಾಚಲದವರೆಗೆ ಈ ಬಜೆಟ್ ಹೋಗುವುದಿಲ್ಲ ; ಇದು ಮೈಸೂರಿಗೆ ಮಾತ್ರ ಒಳಪಟ್ಟಿದೆ.

ಶ್ರೀ ಎಸ್. ರುದ್ರಪ್ಪ (ಕಲ್ಗಿ).—ಮಾನ್ಯ ಸಭಾಪತಿಗಳೆ, ನಮ್ಮ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದು ಬಯಸುತ್ತೇನೆ.

ಗುಲ್ಬರ್ಗ, ಬಿದರ್ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಲೈಮ್‌ಸ್ಟೋನ್ ಬಹಳ ಹೇರಳವಾಗಿ ಸಿಗುತ್ತದೆ. ಈ ಲೈಮ್‌ಸ್ಟೋನನ್ನು ನಮ್ಮ ಜಿಲ್ಲೆಯಲ್ಲಿ ಮನೆ ಕಟ್ಟಲಿಕ್ಕೆ ಮತ್ತು ಶಾಲೆಗಳನ್ನು ಕಟ್ಟಲಿಕ್ಕೆ ಉಪಯೋಗಿಸುತ್ತಾರೆ. ಎರಡು ವರ್ಷಗಳ ಹಿಂದೆ ಕೇಂದ್ರಸರಕಾರದವರು ಲೈಮ್ ಸ್ಟೋನನ್ನು ಉಪಯೋಗಮಾಡಬಾರದು ಎಂದು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ ; ಆಕ್ಷನ್ನಿನಲ್ಲಿ ಅಥವ ಲೀಸಿನಲ್ಲಿ ಕೂಡ ಕೊಡಬಾರದೆಂದು ಆಜ್ಞೆ ಹೊರಡಿಸಿದ್ದಾರೆ. ಇದರಿಂದ ಗ್ರಾಮಾಂತರಗಳಲ್ಲಿರತಕ್ಕಂಥ ಜನರಿಗೆ ಬಹಳ ಅನಾನುಕೂಲವುಂಟಾಗಿದೆ. ಆದ್ದರಿಂದ ಮನೆಗಳನ್ನು ಕಟ್ಟುವುದನ್ನು ಬಂದ್ ಮಾಡಿದ್ದಾರೆ. ಶಾಲೆಗಳನ್ನು ಕಟ್ಟಬೇಕಾದರೂ ಜಾಸ್ತಿ ರೇಟ್ ಕೊಟ್ಟು ಸ್ಲಾಬುಗಳನ್ನು ತೆಗೆದುಕೊಂಡು ಶಾಲೆಗಳನ್ನು ಕಟ್ಟುವ ಪರಿಸ್ಥಿತಿ ಬಂದಿದೆ. ಆದರೆ ರೈತರಿಗೆ ಇದು ಕೇಳಿದರೂ ಸಿಗುವುದಿಲ್ಲ. ಸರಕಾರದವರು ಹೊರಡಿಸಿರುವ ಆಜ್ಞೆಯಿಂದ ಈ ರೀತಿ ಬಹಳ ಅನಾನುಕೂಲವಾಗಿದೆ ; ಇದರಿಂದ ರೈತರಿಗೆ ಅನಾನುಕೂಲವಾಗಿದೆ.

ಎರಡನೆಯದು, ನಮ್ಮಲ್ಲಿ ಸುಮಾರು 3-4 ಪ್ರೈವೇಟ್ ಕಂಪೆನಿಗಳಿವೆ—ಶಹಾಬಾದ್ ಕಂಪೆನಿ, ವಾಡಿ ಕಂಪೆನಿ ಮತ್ತು ಚಿತಾಪುರ್ ಕಂಪೆನಿ ಅಂತ ಇವೆ. ಈ ಕಂಪೆನಿಗಳಿಗೆ ಕೆಲವೊಂದು ರೀತಿಯಿಂದ ಪ್ರೋತ್ಸಾಹ ಸಿಗುತ್ತಿದೆ ; ಏತಕ್ಕೆಂದರೆ ತಮ್ಮ ಮುಖಾಂತರ ಯಾವ ಲೈಮ್‌ಸ್ಟೋನೂ

(ಶ್ರೀ ಎಸ್. ರುದ್ರಪ್ಪ)

ಸಿಗುವುದಿಲ್ಲ; ಕಂಪನಿಗಳಿಗೆ ಹೋಗಿ ಲೈಮ್‌ಸ್ಟೋನು ತೆಗೆದುಕೊಳ್ಳಬೇಕಾಗುತ್ತದೆ. ಅವರು ರೇಟುಗಳನ್ನು ಹೆಚ್ಚು ಮಾಡುತ್ತಾ ಇದ್ದಾರೆ. ಇದರಿಂದ ರೈತರಿಗೆ ಬಹಳ ಅನಾನುಕೂಲವಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ತಿಳಿಸುವುದೇನೆಂದರೆ ಮನೆಗಳನ್ನು ಕಟ್ಟಲಿಕ್ಕೆ ಏನಾದರೂ ಎಕ್ಸೆಂಪ್ಷನ್ ಮಾಡಿ.

ಎರಡನೆಯದಾಗಿ ನಮ್ಮಲ್ಲಿ ಎಂ.ಎಸ್.ಕೆ. ಮಿಲ್ಲಿದೆ. ಅದಕ್ಕೆ ಸಾಕಷ್ಟು ಹಣ ಸಾಲ ಕೊಟ್ಟಿದ್ದಾರೆ ಮತ್ತು ಅದರ ಮ್ಯಾನೇಜ್‌ಮೆಂಟನ್ನು ಸರಕಾರದವರು ತೆಗೆದುಕೊಂಡಿರುತ್ತಾರೆ. ಈಗ ಒಬ್ಬ ಮಾನ್ಯ ಸದಸ್ಯರು ಹೇಳಿದಹಾಗೆ, ಮಿಲ್ ತೃಪ್ತಿಕರವಾಗಿ ನಡೆದಿಲ್ಲ. ಸುಮಾರು 60 ಲಕ್ಷ ರೂಪಾಯಿ ಅದರ ಮೇಲೆ ಇನ್‌ವೆಸ್ಟ್ ಮಾಡಿದ್ದಾರೆ; ಬಹಳ ಲುಕ್ಸಾನು ಆಗಿದೆ. ಇದರ ವಿಷಯವಾಗಿ ನಾನು ಮತ್ತು ಕೆಲವು ಸದಸ್ಯರು ಮಾನ್ಯ ಮಂತ್ರಿಗಳಿಗೆ ಹೇಳಿದ್ದೇವೆ. ಅಲ್ಲಿಯ ಪರಿಸ್ಥಿತಿ ತೃಪ್ತಿಕರವಾಗಿ ನಡೆಯಬೇಕಾದರೆ, ಮೇನೇಜಿಂಗ್ ಡೈರೆಕ್ಟರ್ ಅಥವ ಮ್ಯಾನೇಜರನ್ನು ವರ್ಗಾಯಿಸಿ ಏನಾದರೂ ಅದರ ವಿಷಯದಲ್ಲಿ ಪರಿಶೀಲನೆ ಮಾಡಬೇಕು ಎಂದು ಅನೇಕ ಸಲ ಹೇಳಿದ್ದೇವೆ. ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಇದರಿಂದ ಮಿಲ್ಲಿನ ಕೆಲಸ ತೃಪ್ತಿಕರವಾಗಿ ನಡೆಯಲಿಕ್ಕೆ ಅವಕಾಶವಿಲ್ಲ. ಆದ್ದರಿಂದ ನನ್ನ ಸಲಹೆ ಏನೆಂದರೆ, ಯಾವುದಾದರೂ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ, ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ ಯಾವರೀತಿಯಲ್ಲಾದರೂ ಮಿಲ್ಲು ಲಾಭದಿಂದ ತೃಪ್ತಿಕರವಾಗಿ ನಡೆಯುವಂತೆ ಮಾಡಬೇಕು.

ಮೂರನೆಯದಾಗಿ, ಗುಲ್ಬರ್ಗ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅತ್ಯಮೂಲ್ಯವಾದ ಮಿನರಲ್‌ಗಳಿವೆ. ಬೀದರಿನಲ್ಲಿ ಚೈನ ಕ್ಲೆ ಇದೆ; ರಾಯಚೂರಿನಲ್ಲಿ ಡೈಮಂಡ್ಸ್ ಸಿಗುತ್ತವೆ ಮತ್ತು ಸುರಪೂರದಲ್ಲಿ ಬಂಗಾರದ ಖನಿಜಗಳು ಸಿಗುತ್ತವೆ. ಬೇರೆ ಜಿಲ್ಲೆಗಳಲ್ಲಿ ಯಾವ ರೀತಿಯಲ್ಲಿ ಟೆಕ್ನೊ-ಎಕನಾಮಿಕ್ ಸರ್ವೆ ಮಾಡುತ್ತಿದ್ದೀರೋ ಅದೇ ರೀತಿಯಾಗಿ ಈ ಜಿಲ್ಲೆಗಳಲ್ಲಿಯೂ ಟೆಕ್ನೊ-ಎಕನಾಮಿಕ್ ಸರ್ವೆಮಾಡಿ, ಅಲ್ಲಿ ಯಾವ ಯಾವ ಸ್ಕೀಮುಗಳನ್ನು ಮಾಡಬಹುದೆಂದು ನೋಡಿ, ಜನಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಬೇಕು. ಇದರಿಂದ ಜನಗಳಿಗೆ ಅನುಕೂಲವಾಗುತ್ತದೆ. ತೀವ್ರವಾಗಿ ಈ ದಿಶೆಯಲ್ಲಿ ಸರಕಾರದವರು ಲಕ್ಷ್ಯ ಕೊಟ್ಟು ಟೆಕ್ನೊ-ಎಕನಾಮಿಕ್ ಸರ್ವೆ ಮಾಡಬೇಕೆಂದು ಸೂಚಿಸುತ್ತೇನೆ.

ನಾಲ್ಕನೆಯದಾಗಿ ಕಲ್ಬುರ್ಗಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಾಕಷ್ಟು ರಾ-ಮೆಟೀರಿಯಲ್ಲುಗಳು ಸಿಗುವುದಿಲ್ಲ; ಹೊರಗಡೆಯಿಂದ ಬರುವ ರಾ-ಮೆಟೀರಿಯಲ್ಲಿನಲ್ಲಿ ಬೆಂಗಳೂರು ಜಿಲ್ಲೆಗೆ 80 ಪರ್ಸೆಂಟು ಹೋಗಿ, ಮಿಕ್ಕದ್ದರಲ್ಲಿ ಸುಮಾರು 17 ಪರ್ಸೆಂಟು ಬೊಂಬಾಯಿ ಕರ್ಣಾಟಕಕ್ಕೆ ಉಪಯೋಗ ಮಾಡುತ್ತಾರೆ. ಆದ್ದರಿಂದ ನಮ್ಮ ಕಡೆಯ ಸಣ್ಣಸಣ್ಣ ಕೈಗಾರಿಕೆಗಳಿಗೆ ರಾಮೆಟೀರಿಯಲ್ ಸಿಗುವುದಿಲ್ಲ. ಈ ದೃಷ್ಟಿಯಿಂದ ಸರಕಾರದವರು ಈ ದಿಶೆಯಲ್ಲಿ ಲಕ್ಷ್ಯಕೊಟ್ಟು ಹೆಚ್ಚು ರಾಮೆಟೀರಿಯಲ್ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಹೈದರಾಬಾದ್ ಕರ್ಣಾಟಕದ ಗುಲ್ಬರ್ಗಕ್ಕೆ ಈಗಾಗಲೇ ಇಂಡಸ್ಟ್ರಿಯಲ್ ಎಸ್ಟೇಟ್ ಕೊಟ್ಟಿದ್ದಾರೆ. ಆದರೆ ಇದುವರೆಗೆ ನಮ್ಮಲ್ಲಿಗೆ ಕರೆಂಟ್ ಇಲ್ಲ. ಆದ್ದರಿಂದ ಇಂಡಸ್ಟ್ರಿಯಲ್ ಎಸ್ಟೇಟ್ ಪ್ರಾರಂಭ ಮಾಡುವುದಕ್ಕೆ ಅನಾನುಕೂಲವಾಗಿದೆ ಅಂತ ಹೇಳುತ್ತೇನೆ. ಈಗಾಗಲೆ ನಮ್ಮಲ್ಲಿಗೆ ಕರೆಂಟ್ ಬಂದಿದೆ, ಹೈಡೆಲ್ ಪವರ್ ಬಂದಿದೆ. ಆದರೂ ಇಲ್ಲಿಯವರೆಗೆ ಇಂಡಸ್ಟ್ರಿಯಲ್ ಎಸ್ಟೇಟ್ ಪ್ರಾರಂಭವಾಗಿಲ್ಲ, ಇದಕ್ಕೆ ಕಾರಣವೇನು? ನಮ್ಮಲ್ಲಿ ಕರೆಂಟು, ರಾಮೆಟೀರಿಯಲ್ ಸಿಗುತ್ತಿಲ್ಲವಾದ್ದರಿಂದ ಸಣ್ಣ ಸಣ್ಣ ಕೈಗಾರಿಕೆಗಳು ಅಭಿವೃದ್ಧಿಯಾಗುತ್ತಿಲ್ಲ. ಆದ್ದರಿಂದ ಇಂಡಸ್ಟ್ರಿಯಲ್ ಎಸ್ಟೇಟುಗಳಿಗೆ ಸೌಕರ್ಯಗಳನ್ನು ಒದಗಿಸಿ ಇವುಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಈ ಮೂರು ನಾಲ್ಕು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಈಗಾಗಲೇ ನನ್ನ ಸ್ನೇಹಿತರು ಬಹಳ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ.

ಮೈಸೂರು ಬಹಳ ಹಿಂದಿನಿಂದಲೂ ಕೈಗಾರಿಕೆಯಲ್ಲಿ ಬಹಳ ಪ್ರಸಿದ್ಧವಾದ ದೇಶವಾಗಿತ್ತು. ಈಚೆಗೆ, ನಮಗೆ ಸ್ವತಂತ್ರ್ಯ ಬಂದನಂತರ ನಾವು ಬಹಳ ಕುಂಟುತ್ತಾ, ತೆವಳುತ್ತಾ ಹೋಗುತ್ತಾ ಇದ್ದೇವೆ. ಈ ಬಾಬಿನಲ್ಲಿ ಎಷ್ಟು ಮುತುವರ್ಜಿ ವಹಿಸಿ ಕೆಲಸ ಮಾಡಬೇಕಾಗಿತ್ತೋ, ಅಷ್ಟು ಮುತು-

ವರ್ಜಿ ವಹಿಸಿ ಕೈಗಾರಿಕೆಗಳನ್ನು ಕೊಟ್ಟಿಲ್ಲ ಅಂತ ಹೇಳಿ ನನಗೆ ಭಾಸವಾಗುತ್ತದೆ. ಕೈಗಾರಿಕೆಗಳಲ್ಲಿ ಎಷ್ಟು ಉತ್ಪತ್ತಿಯಾಗಬೇಕೊ ಅಷ್ಟು ಉತ್ಪತ್ತಿ ಬರುತ್ತಾ ಇಲ್ಲ. ಅನೇಕ ಫ್ಯಾಕ್ಟರಿಗಳು ನಷ್ಟದಿಂದಲೇ ಕೆಲಸ ಮಾಡುತ್ತಿವೆ ಎಂದು ಹೇಳಿ ಕೇಳುತ್ತಾ ಇದ್ದೇವೆ.

2-30 P.M.

ಎಲ್ಲ ಬೆಂಗಳೂರು ಪಟ್ಟಣದ ಸುತ್ತಮುತ್ತ ಎಲ್ಲ ಕೈಗಾರಿಕೆಗಳನ್ನೂ ಹಾಕುವುದಕ್ಕೆ ಸರಕಾರ ಬಹುಮಟ್ಟಿಗೆ ನಿಗಾ ಕೊಡುತ್ತಿದೆ ಎಂದು ನನಗೆ ಭಾಸವಾಗುತ್ತಿದೆ. ಹೀಗೆ ಆಗಬಾರದು. ದೇಶದಲ್ಲಿ ಬಡತನಕ್ಕೆ ತೌರೂರು ಆಗಿರತಕ್ಕ ತುಮಕೂರು, ಚಿತ್ರದುರ್ಗ, ಕೋಲಾರ, ಮಂಡ್ಯ, ಹಾಗೂ ಪಾಂಡವಪುರದ ಸಬ್ ಡಿವಿಜನ್ನು ಈ ಭಾಗಗಳಲ್ಲಿ ಜನಗಳಿಗೆ ವ್ಯವಸಾಯ ಮಾಡುವುದಕ್ಕೆ ಸರಿಯಾದ ಮಳೆ, ಬೆಳೆ ಇರುವುದಿಲ್ಲ, ಇಂತಹ ಕಡೆ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸರಕಾರ ಪ್ರಯತ್ನ ಮಾಡಬೇಕೆಂದು ನಾನು ಇಲ್ಲಿ ಸರಕಾರವನ್ನು ಬಹಳ ನಮ್ರತೆಯಿಂದ ಕೇಳಿಕೊಳ್ಳಬೇಕಾಗಿದೆ. ನಮ್ಮಲ್ಲಿ ಕೂಲಿ ಕೆಲಸ ಮಾಡತಕ್ಕ ಜನ ಬಹಳವಿದ್ದಾರೆ. ಅವರಲ್ಲಿ ಅನೇಕರು ಹಳ್ಳಿಗಳನ್ನು ಬಿಟ್ಟು ಪಟ್ಟಣಕ್ಕೆ ಬಂದು ಸೇರಿಕೊಂಡು ನಮಗೆ ಬೆಳಗಾದರೆ ಕೆಲಸವಿಲ್ಲ ಏನಾದರೂ ಕೆಲಸವನ್ನು ಮಾಡಿಕೊಡಬೇಕೆಂದು ಕೇಳುತ್ತಾರೆ. ಈಗತಾನೇ ಮಾನ್ಯ ಶ್ರೀ ಮುಕ್ಕಣ್ಣಪ್ಪನವರು ಇದರ ಬಗ್ಗೆ ಹೇಳಿದರು. ನಮ್ಮ ಸೆಂಟ್ರಲ್ ಗವರ್ನಮೆಂಟಿನವರು ಈ ಊರಿನಲ್ಲಿ ಬಹಳವಾದ ಕಾರ್ಖಾನೆಗಳನ್ನು ತೆರೆದಿದ್ದಾರೆ. ಆದರೆ ನಮ್ಮ ನೆಲದಲ್ಲಿ ನಮ್ಮಿಂದ ಸೌಕರ್ಯಗಳನ್ನು ಹೊಂದಿ ನಮ್ಮ ಜನಕ್ಕೆ ಎಷ್ಟು ಪ್ರಾತಿನಿಧ್ಯ ಕೊಡಬೇಕೋ ಅಷ್ಟು ಪ್ರಾತಿನಿಧ್ಯವನ್ನು ಕೊಡದೆ ಇರತಕ್ಕದ್ದು ಬಹಳ ಯಾತನೆಯನ್ನುಂಟುಮಾಡಿದಂತಾಗಿದೆ. ಇಲ್ಲೆಲ್ಲಾ ಕೇರಳದ ಜನ ಹಾಗೂ ತಮಿಳರು ಇಲ್ಲಿ ಬಂದು ಅವರದೇ ಒಂದು ರೀತಿಯಾದ ಮನಾಪಲಿಯಾಗಿದೆ ಎಂದು ಹೇಳಿದರು ಅದು ತಪ್ಪಾಗಲಾರದು. ಕನ್ನಡಿಗರು ಅದೇನು ಪಾಪ ಮಾಡಿ ಈ ದೇಶದಲ್ಲಿ ಹುಟ್ಟಿದರೋ ಅವರಿಗೇನೂ ಸಿಗುತ್ತಿಲ್ಲ. ನಮ್ಮಿಂದ ಇಷ್ಟು ಸೌಕರ್ಯಗಳನ್ನು ಅವರಿಗೇಕೆ ಕೊಡಬೇಕಾಗಿತ್ತು? ಸರಕಾರ ಮೊದಲೇ ಅವರು ಇಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವಾಗ ಒಂದು ಕಂಡಿಷನ್ನು ಹಾಕಿ ನಮ್ಮ ಸೌಕರ್ಯಗಳು ಬೇಕಾದರೆ ನಾವು ಹಾಕುವ ಕಂಡಿಷನ್ನುಗಳಿಗೆ ಅನುಸಾರವಾಗಿ ಇಲ್ಲಿ ಕೈಗಾರಿಕೆ ನಡೆಸಬೇಕು ಇಲ್ಲವೇ ಹೋದರೆ ಇಲ್ಲ ಎಂದೇಕೆ ಹೇಳಬಾರದು? ಹಿಂದೆ ಹೇಳದೇ ಹೋದರೆ ಇನ್ನು ಮುಂದಾದರೂ ಇವುಗಳಲ್ಲಿ ನಮ್ಮ ಜನಕ್ಕೆ ಕೆಲಸಗಳನ್ನು ಸಿಗುವ ಪರಿಸ್ಥಿತಿ ಉಂಟುಮಾಡಬೇಕೆಂದು ನಾನು ಇಲ್ಲಿ ಕೇಳಿಕೊಳ್ಳಬೇಕಾಗಿದೆ.

ಇನ್ನು ರಾ ಮೆಟೀರಿಯಲ್ಸ್‌ಗಳ ಬಗ್ಗೆ ಬಹಳ ತೊಂದರೆ ಬರುತ್ತಿದೆ. ಈಗತಾನೇ ಮಾನ ಸದಸ್ಯರಾದ ಶ್ರೀಮಾನ್ ರುದ್ರಪ್ಪನವರು ಹೇಳಿದ ಹಾಗೆ ನಮಗೆ ಬರತಕ್ಕ ರಾ ಮೆಟೀರಿಯಲ್ಸ್‌ಗಳಲ್ಲಿ ಮುಕ್ಕಾಲು ಪಟ್ಟು ಬೆಂಗಳೂರಿನಲ್ಲೇ ಉಪಯೋಗವಾಗುತ್ತದೆ. ಸಂಸ್ಥಾನದ ಇತರ ಭಾಗಗಳಿಗೆ ಸಿಗುವುದಿಲ್ಲ ಎಂದು ಹೇಳಿದರು. ಇದು ನಿಜವಾದ ಮಾತು. ಇವನ್ನು ಸರಿಯಾಗಿ ವಿತರಣೆ ಮಾಡಬೇಕು. ರೈಲು ಸೌಕರ್ಯವಿರುವ ಪ್ರದೇಶದಲ್ಲಿ ಹಾಗೂ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಮತ್ತು ಸುಮಾರಾಗಿ ದೊಡ್ಡ ದೊಡ್ಡ ಹಳ್ಳಿಗಳು ಬರತಕ್ಕ ಪ್ರದೇಶದಲ್ಲಿ ಕೈಗಾರಿಕಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಶರಾವತಿಯಿಂದ ಈಗ ಬೇಕಾದಷ್ಟು ವಿದ್ಯುಚ್ಛಕ್ತಿ ಬರುತ್ತ ಇರುವುದರಿಂದ ಇನ್ನು ದೇಶದ ಮುಂದಿರುವ ಕೆಲಸಕಾರ್ಯಗಳು ಅತಿ ತ್ವರಿತದಿಂದ ಆಗಿ ಇನ್ನೊಂದು ವರ್ಷದಲ್ಲಿ ಹೆಚ್ಚು ವಿದ್ಯುಚ್ಛಕ್ತಿ ಬರುವುದರಿಂದ ಬಂಡವಾಳವನ್ನೂ ಹಾಕಲು ಜನಕ್ಕೆ ಒದಗಿಸುತ್ತಾರೆ. ಇದರ ಸಲುವಾಗಿ ವ್ಯವಸಾಯ ಬಿಟ್ಟರೆ ಕೈಗಾರಿಕೆ ಇವೆರಡು ಬಾಬುಗಳಿಗಾಗಿ ಇಷ್ಟು ಬಂಡವಾಳವನ್ನೂ ಹಾಕಿದರೆ ಅದರಿಂದ ಪ್ರಯೋಜನವಾಗುತ್ತದೆ. ಈ ಕೆಲಸವನ್ನು ಮಾಡಬೇಕು. ಜೊತೆಗೆ ವ್ಯವಸಾಯದಲ್ಲಿ ಬಹುಮಟ್ಟಿಗೆ ಟ್ರಾಕ್ಟರ್ಸ್‌ಗಳು, ಇಂಪ್ಲಿಮೆಂಟುಗಳು ಮತ್ತು ಈಗ ಹೊಸದಾಗಿ ಉಳುವುದಕ್ಕೆಂದು ನೇಗಿಲುಗಳನ್ನು ಮಾಡುತ್ತಿದ್ದಾರೆ. ಈಗ್ಗೆ ಒಂದೂವರೆ ವರ್ಷಗಳ ಕೆಳಗೆ ಹೆಬ್ಬಾಳ್ ಫಾರಂನಲ್ಲಿ ಜಪಾನು ಮಾದರಿಯ ನೇಗಿಲುಗಳನ್ನು ಮತ್ತು ಅದರಿಂದ ಪವರು ಟಿಲ್ಲರುಗಳನ್ನು ಹೇಗೆ ಮಾಡುವುದು ಎನ್ನುವ ಪ್ರದರ್ಶನಗಳನ್ನೂ ಮಾಡಿ ತೋರಿಸಿದ್ದರು. ಇದನ್ನು ಮಾಡಲು ಬೆಂಗಳೂರಿನಲ್ಲಿಯೇ ಒಂದು ಸಂಸ್ಥೆಯವರು ಕೈಗಾರಿಕೆ ಸ್ಥಾಪನೆ ಮಾಡಿ ಆದಷ್ಟು ಬೇಗ ಒಂದು ನೇಗಿಲಗೆ ಸುಮಾರು 2000 ದಿಂದ 3000 ರೂಪಾಯಿಗಳ ಅಂದಾಜಿನಲ್ಲಿ ತಂದು ತಯಾರಾಗತಕ್ಕ ಏರ್ಪಾಡನ್ನು ಮಾಡುತ್ತೇವೆಂದು ಅಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ಹಾಗೂ ಕೈಗಾರಿಕಾ ಮಂತ್ರಿಗಳೂ ನಮಗೆ ಆ ದಿವಸ ಒಂದು ಭರವಸೆಯನ್ನೂ ಕೊಟ್ಟರು. ಇಲ್ಲಿಯವರೆಗೆ ಈ ಕಾರ್ಖಾನೆ ಏನಾಯಿತು ಅಂತಹ ಆಧುನಿಕ ವ್ಯವಸ್ಥೆಯಿಂದ ವ್ಯವಸಾಯವಾಗುತ್ತದೆಯೇ ಇಲ್ಲವೇ ಎನ್ನುವುದು ಗೊತ್ತಾಗುತ್ತಿಲ್ಲ. ಆದುದರಿಂದ ಸಣ್ಣ ಪುಟ್ಟ ಹಿಡುವಳಿಗಳಲ್ಲಿ ಯಾಂತ್ರೀಕರಣ ಮಾಡದೇ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಹೋದರೆ ಇನ್ನು ಮುಂದೆ ನಮ್ಮ ವ್ಯವಸಾಯ ಉಳಿಯುವುದಕ್ಕೆ ಬರುವುದಿಲ್ಲ. ನಮ್ಮಲ್ಲಿದ್ದ ಗೋ ಸಂಪತ್ತು ಕ್ಷೀಣವಾಗುತ್ತ ಬರುತ್ತಿದೆ. ಇದಕ್ಕಾಗಿ ಗೋಮಾಳವಿದ್ದ ಜಮೀನುಗಳನ್ನೆಲ್ಲಾ ದರ ಖಾಸ್ತಿನ ಮೇಲೆ ಹಂಚುತ್ತಿರುವುದರಿಂದ ನಮ್ಮ ಜಾನುವಾರುಗಳು ಸಂಪತ್ತುಗಳಿಗಾಗಿ ಏನು ಮೇವನ್ನು ಒದಗಿಸುತ್ತಿದ್ದರೋ ಅದು ಸಿಗದೆ ಇರತಕ್ಕ ಪರಿಸ್ಥಿತಿ ನಮಗೆ ಬಂದಿದೆ. ವ್ಯವಸಾಯದ ಉಪಕರಣಗಳನ್ನು ಯಾಂತ್ರೀಕರಣ ಮಾಡುವುದಕ್ಕಾಗಿ ಆದಷ್ಟು ಕಾರ್ಯಗಳನ್ನು ನಮ್ಮ ದೇಶದಲ್ಲಿ ಮಾಡಲು ಅವಕಾಶವಿರುವುದರಿಂದ ನಮ್ಮ ಸರಕಾರದವರು ಇದಕ್ಕೆ ತೀವ್ರ ಗಮನ ಕೊಡಬೇಕೆಂದು ಈ ಸಮಯದಲ್ಲಿ ಕೇಳುತ್ತೇನೆ. ಈಗ ಜಿಂಕು ಷೀಟುಗಳು ಸಿಗದೆ ಬಹಳ ತೊಂದರೆಯಾಗಿದೆ. ನಮ್ಮ ಪ್ರಾಂತದಲ್ಲಿರುವ ಹೊಳೆನರಶೀಪುರದಲ್ಲಿ ಕಲ್ನಾರು ಬಹಳವಾಗಿ ಸಿಗತಕ್ಕ ನಿರೀಕ್ಷೆ ಇರುವುದರಿಂದ ಇಲ್ಲಿ ಒಂದು ಆಸ್‌ಬೆಸ್ಟಾಸ್ ಕಾರ್ಖಾನೆಯನ್ನು ಆದಷ್ಟು ಬೇಗ ಮಾಡಿಕೊಡಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಸ್ವಾಮೀ, ಈಗ ನಮ್ಮ ಮುಂದಿಟ್ಟಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಇಲ್ಲಿ ಹೇಳಬಯಸುತ್ತೇನೆ.

ನಮ್ಮ ಧಾರವಾಡ ಜಿಲ್ಲೆ ಕೈಗಾರಿಕೆಯಲ್ಲಿ ಬಹಳ ಹಿಂದುಳಿದಿರುವ ಪ್ರದೇಶ ಮತ್ತು ಯಾವಾಗಲೂ ನಾವು ಅನೇಕ ಕೈಗಾರಿಕೆಗಳನ್ನು ಇಲ್ಲಿ ಸ್ಥಾಪಿಸಬೇಕೆಂದು ಇಲ್ಲಿನ ಜನ ಅನೇಕ ಸಾರಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪದೇ ಪದೇ ಇಲ್ಲಿಯೂ ನಾವು ವಿನಂತಿ ಮಾಡಿಕೊಳ್ಳಬೇಕಾಗಿ ಬಂದಿದೆ. ಮಾನ್ಯ ಜತ್ತಿಯವರು ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನನ್ನು ಸ್ಥಾಪಿಸಲಾಯಿತು. ಹುಬ್ಬಳ್ಳಿಯಲ್ಲಿ ಒಂದು ಕೈಗಾರಿಕಾ ಎಸ್ಟೇಟು ಸ್ಥಾಪನೆ ಮಾಡಿದ ನಂತರ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಮಲ್ಲಪ್ಪನವರು ಮಂತ್ರಿಗಳಾಗಿ ಬಂದ ನಂತರ ಇನ್ನೂ ಯಾವ ಕೈಗಾರಿಕೆಗಳೂ ಸ್ಥಾಪನೆಯಾಗಲಿಲ್ಲ ಎಂದು ಈ ಸಾರಿಯೂ ಕೂಡ ವಿಜ್ಞಾಪನೆಗಳನ್ನು ಅವರ ಮುಂದೆ ಇಡಬೇಕಾಗಿ ಬಂದಿದೆ. ಹುಬ್ಬಳ್ಳಿಯಲ್ಲಿ ಇಂಡಸ್ಟ್ರಿಯಲ್ ಎಸ್ಟೇಟುಗಳಿಗಾಗಿ ಕಟ್ಟಿದ ಮಳಿಗೆಗಳು ಈಗ ಬೀಳುವ ಸ್ಥಿತಿಗೆ ಬಂದಿವೆ. ಮತ್ತು ಇಲ್ಲಿ ಸ್ಥಾಪಿಸಲು ಅನೇಕ ಮೆಷಿನರಿಗಳೂ, ಕಚ್ಚಾ ಮಾಲೂ ಇವನ್ನು ನಮ್ಮ ಸರಕಾರದವರು ಸರಿಯಾಗಿ ಪುರವಟೆ ಮಾಡದೇ ಕೆಲವು ಕಾರ್ಖಾನೆಗಳು ಬಂದಾಗಿವೆ. ಇವೆಲ್ಲ ವಿಚಾರಗಳನ್ನು ಇತ್ತೀಚೆಗೆ ಸರಿಯಾಗಿ ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೂ ಕೂಡ ಇದನ್ನು ವಿಚಾರ ಮಾಡುತ್ತೇವೆಂದು ಹೇಳುತ್ತಾ ಇನ್ನೂ ಇಲ್ಲಿನ ಜನಕ್ಕೆ ಕಚ್ಚಾ ಮಾಲನ್ನು ಸರಿಯಾಗಿ ಪುರವಟೆ ಮಾಡಿಲ್ಲ. ಪುರವಟೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರೂ ಕೂಡ ಆ ಆಶ್ವಾಸನೆ ಇನ್ನೂ ಹಾಗೇ ಉಳಿದಿವೆ. ಇದರಿಂದ ಕೈಗಾರಿಕೆ ನಡೆಸುತ್ತೇವೆ ಎಂದು ಮುಂದೆ ಬರತಕ್ಕ ಜನಕ್ಕೆ ನಿರುತ್ಸಾಹದಿಂದ ತೊಂದರೆಗೆ ಒಳಪಟ್ಟಿದ್ದಾರೆ. ಇದಕ್ಕಾಗಿ ನಾನು ವಿನಂತಿ ಮಾಡುವುದು ಇಷ್ಟು. ಅತಿ ಹಿಂದುಳಿದಿರುವ ನಮ್ಮ ಜಿಲ್ಲೆಯಲ್ಲಿ ನಾವೂ ಕೂಡ ತಮ್ಮನ್ನು ಕೇಳುವುದು ತಾವು ಕೊಟ್ಟ ವಚನವನ್ನು ಪೂರೈಸಿ ಕೈಗಾರಿಕೆಯಲ್ಲಿ ಉತ್ಸಾಹದಿಂದ ಮುಂದೆ ಬರುವ ಜನರ ಮುಖದ ಮೇಲೆ ತಣ್ಣೀರು ಎರಚುವಂತೆ ಮಾಡದೆ ಅವರನ್ನು ಮೇಲಕ್ಕೆ ಎತ್ತಬೇಕು ಎಂದು ನಾನು ಇಲ್ಲಿ ಕಳಕಳಿಯಿಂದ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನನ್ನು ತಮ್ಮ ಕಾಲಿನ ಮೇಲೆ ನಿಲ್ಲತಕ್ಕ ಆರ್ಥಿಕ ಸ್ಥಿತಿಯಲ್ಲಿ ಮುಂದುವರಿಯಬೇಕಾದರೆ ಅಲ್ಲಿರುವ ಹುಬ್ಬಳ್ಳಿ-ಧಾರವಾಡದ ನಡುವೆ ಹತ್ತು ಮೈಲಿಗಳ ಪ್ರದೇಶದಲ್ಲಿ ದೊಡ್ಡ ಇಂಡಸ್ಟ್ರಿಯನ್ನು ಮಾಡಿದರೆ ಅದರಿಂದ ಅವರ ಆರ್ಥಿಕ ಸ್ಥಿತಿ ಚೆನ್ನಾಗುತ್ತದೆ. ಎಲ್ಲಿಯವರೆಗೆ ತಾವು ಇಲ್ಲಿರುವ ಹತ್ತು ಮೈಲಿ ಏರಿಯಾವನ್ನು ಇಂಡಸ್ಟ್ರಿಯಲೈಸು ಮಾಡುವುದಿಲ್ಲವೋ ಅಲ್ಲಿಯವರೆಗೆ ಅಲ್ಲಿಯ ಕಾರ್ಪೊರೇಷನ್ನಿಗೆ ಅನುಕೂಲವಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿ ಒಂದು ಅಲ್ಯೂಮಿನಿಯಂ ಫ್ಯಾಕ್ಟರಿಯನ್ನು ಮಾಡುತ್ತೇವೆಂದು ಹೇಳಿದರು. ಇದನ್ನು ಈಗ ತ್ವರಿತದಿಂದ ಕಾರ್ಯಗತವಾಗುವಂತೆ ಮಾಡಿ ಎಂದು ಹೇಳುತ್ತೇನೆ. ಅಲ್ಲಿರುವ ಹತ್ತು ಮೈಲಿಗಳ ಏರಿಯಾದಲ್ಲೂ ದೊಡ್ಡ ಕೈಗಾರಿಕೆಗಳೂ ಆಗಬೇಕು ಎಂದು ಈ ಭಾಗದ ಜನರು ಅಪೇಕ್ಷೆಪಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಪ್ರಾಜೆಕ್ಟು ಆಫೀಸರುಗಳು ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಇಂಡಸ್ಟ್ರಿಮಾಡಬೇಕೆಂದು ಅಲ್ಲಿರುವ ಜನಗಳ ಪ್ರೇಮವನ್ನು ಸಂಪಾದಿಸಿ ಅವರ ಮನವೊಲಿಸಲು ತಕ್ಕ ಕಾರ್ಯಕ್ರಮವೊಂದನ್ನು ಹಾಕಿಕೊಂಡು ಮಾಡಿದರೆ ನಮ್ಮ ಈ ಏರಿಯಾ ಮುಂದಕ್ಕೆ ಬರುತ್ತದೆ ಮತ್ತು ಇದನ್ನು ನಾವು ಇಲ್ಲಿ ಮಂತ್ರಿಗಳ ಗಮನಕ್ಕೆ ತಂದರೆ ಅದಕ್ಕೆ ಬೇಕಾದ ಸಹಾಯಗಳೂ ಬರುತ್ತವೆ. ಆದರೆ ಇಲ್ಲಿ ನಾವು ಮಂತ್ರಿಗಳನ್ನು ನೋಡಲು ಜನ ಬಂದಾಗ ಕೈಗಾರಿಕೆಗಳನ್ನು ಕೋ ಆಪರೇಟೀವ್ ಬೆಸಿಸ್ ಮೇಲೆ ಮಾಡಬೇಕೆಂದು ಹೇಳುತ್ತಾರೆ. ಇದಕ್ಕಾಗಿ ಕೋಆಪರೇಷನ್ನು ಮಂತ್ರಿಗಳ ಬಳಿಗೆ ಹೋಗಿ ಕೇಳಿದರೆ ಅವರು

ಇಂಡಸ್ಟ್ರೀಸ್ ಮಂತ್ರಿಗಳ ಕಡಗೆ ಹೋಗಬೇಕೆಂದು ಹೇಳುತ್ತಾರೆ. ಹೀಗೆ ಇಲ್ಲಿಂದ ಅಲ್ಲಿಗೆ ಅಲ್ಲಿಂದ ಇಲ್ಲಿಗೆ ಓಡಾಡಿ ಇವರಲ್ಲಿ ಇಂಡಸ್ಟ್ರೀಸ್ ಮಂತ್ರಿಗಳದು ಖರೆಯೋ ಅಥವಾ ಕೋಆಪರೇಷನ್ನು ಮಂತ್ರಿಗಳದು ಖರೆಯೋ ನಮಗೆ ಗೊತ್ತಾಗದೆ ಆಗಿದೆ. ಇಲ್ಲಿ ಯಾವ ಕೈಗಾರಿಕೆಗಳೂ ಆಗದೆ ಮುಂದೆ ಹೋಗುತ್ತಿದೆ. ಇದಕ್ಕಾಗಿ ಒಂದು ಸೂಕ್ತವಾದ ಯೋಜನೆಯನ್ನು ಮಾಡಿಕೊಂಡು ಅಲ್ಲಿರುವ ಜನ ಹಾಗೂ ತಾಲ್ಲೂಕಾ ಡೆವಲಪ್‌ಮೆಂಟು ಬೋರ್ಡಿನ ಅಧ್ಯಕ್ಷರು ಎಲ್ಲರೂ ಕೂಡಿಕೊಂಡು ಸರಕಾರದ ಕಡೆಗೆ ಬಂದು ಹೇಳುವಾಗ, ಇದಕ್ಕೆ ಬೇಕಾದ ಪ್ಲಾನುಗಳು ಹಾಗೂ ಎಸ್ಟಿಮೇಟುಗಳನ್ನು ಒಪ್ಪಿ ಆಗುತ್ತಿದ್ದರೆ ಆಗಬೇಕೆಂದು ಹೇಳಬೇಕು, ಇಲ್ಲದಿದ್ದರೆ ಇಲ್ಲ ಎಂದು ಬಿಡಬೇಕು. ಆಶ್ವಾಸನೆ ಕೊಟ್ಟು ಆಶೆ ಉಂಟುಮಾಡಿ ತಿರುಗಿ ಹೋಗುವಾಗ್ಗೆ ಯಾವ ಮನಸ್ಸಿನಿಂದ ಹೋಗುತ್ತಾರೆ ಎಂಬುದು ನಮಗೆ ಗೊತ್ತಾಗುತ್ತದೆ, ಆದರೆ ಮಂತ್ರಿಗಳಿಗೆ ಗೊತ್ತಾಗುವುದಿಲ್ಲ ಎಂದು ವಿಷಾದದಿಂದ ಹೇಳುತ್ತೇವೆ. ಕೋ-ಆಪರೇಟಿವ್ ಬೇಸಿಸ್ ಮೇಲೆ ಉದ್ಯಮ ಪ್ರಾರಂಭ ಮಾಡಬೇಕು ಎಂದು ಹೇಳುವುದಾದರೆ ಇಂಥ ಉದ್ಯಮಕ್ಕೆ ನಿಕಟ ಸಂಬಂಧ ಇದ್ದವರನ್ನು ಕಳಿಸಿ ಕೊಡಬೇಕು, ಅವರು ಸರಿಯಾದ ರೀತಿಯಲ್ಲಿ ಮಾರ್ಗ ದರ್ಶನ ಮಾಡುತ್ತಾರೆ. ಜನ ಕೂಡ ವಿಶ್ವಾಸ ಇಡುತ್ತಾರೆ. ನಮ್ಮ ಪ್ರದೇಶ ಹಿಂದುಳಿದ ಪ್ರದೇಶವಾಗಿದೆ. ವಿಜಾಪೂರ ಧಾರವಾಡ ಬೆಳಗಾಂವ ಕಾರವಾರ ಈ ಭಾಗದಲ್ಲಿ ಉದ್ಯಮ ಸ್ಥಾಪನೆ ಮಾಡುವ ವಿಚಾರದಲ್ಲಿ ನಿಷ್ಕಾಳಜಿ ಮಾಡಬಾರದು. ಜನರಿಗೆ ನಿರುತ್ಸಾಹ ಮಾಡದೆ ಉದ್ಯೋಗ ದೊರೆಯಲು ಉದ್ದಿಮೆಗಳನ್ನು ಪ್ರಾರಂಭಮಾಡಿ ಜನರಿಗೆ ಸೌಕರ್ಯ ಒದಗಿಸಿ ಕೊಟ್ಟು ಮುಂದೆ ತರಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಸಂಜೀವನಾಥ ಐಕಳ (ಸುರತ್ಕಲ್).—ಮಾನ್ಯ ಅಧ್ಯಕ್ಷರೇ, ಸ್ವಲ್ಪ ಸಮಯದಲ್ಲಿ ಕೆಲವು ವಿಷಯಗಳ ಬಗ್ಗೆ ಮಾತನಾಡಬೇಕೆಂದಿದ್ದೇನೆ. ನಮ್ಮ ಪ್ರದೇಶದಲ್ಲಿ ಪ್ರಾಮುಖ್ಯವಾಗಿ ಗುಡಿ ಕೈಗಾರಿಕೆ ಇದೆ. ಇದಲ್ಲದೆ ಹ್ಯಾಂಡ್ ಲೂಂ ಇಂಡಸ್ಟ್ರೀ ಬಗ್ಗೆ ಸರಕಾರದ ಗಮನ ಸೆಳೆಯುತ್ತೇನೆ. ಕೈ ಮಗ್ಗದ ಮೇಲೆ ದುಡಿಯುವವರ ಸಂಖ್ಯೆ ಹೆಚ್ಚಾಗಿದ್ದು ಇನ್ನೊಂದು ಪ್ರಾಮುಖ್ಯವಾದ ಕೈಗಾರಿಕೆಯಾಗಿದೆ. ಕೈ ಮಗ್ಗದ ಕೈಗಾರಿಕೆಗೆ ಬೇಕಾಗುವ ನೂಲು, ಬಣ್ಣ, ಇವುಗಳ ಕ್ರಯ ಜಾಸ್ತಿಯಾಗಿ ಮಾರುಕಟ್ಟೆಯಲ್ಲಿ ಸರಿಯಾಗಿ ಮಾಲು ಸಿಗದೆ ಜನ ಕಷ್ಟ ಪರಿಸ್ಥಿತಿಯಲ್ಲಿ ಇದ್ದಾರೆ. ಇದರ ಬಗ್ಗೆ ನಾನು ಕೆಲವು ಸೂಚನೆಗಳನ್ನು ಮಂತ್ರಿಗಳಿಗೆ ಕಳಿಸಿಕೊಟ್ಟಿದ್ದೇನೆ. ನಮಗೆ ಹಿರಿಯರಾದ ಶ್ರೀ ರಾಜಗೋಪಾಲಾಚಾರಿಯವರು ಈ ವಿಷಯದ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. 40 ಕೌಂಟಿಗಿಂತ ಕಡಿಮೆ ಇರತಕ್ಕ ಬಟ್ಟೆಯ ತಯಾರಿಕೆಯು ಕೈಮಗ್ಗದವರಿಗೆ ಮೀಸಲಾಗಿ ಇಡಬೇಕು, ಅಂದರೆ ಇದಕ್ಕೆ ಒಂದು ಸ್ಥಾನ ದೊರೆಯುತ್ತದೆ ಹಾಗು ಅದರಿಂದ ಹಳ್ಳಿಯ ಜನರ ಆರ್ಥಿಕ ಸ್ಥಿತಿ ಸುಧಾರಣೆಯಾಗಿ ಅವರು ಮುಂದೆ ಬರಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಆಲ್ ಇಂಡಿಯಾ ಹ್ಯಾಂಡ್ ಲೂಂ ಬೋರ್ಡ್ ಮತ್ತು ನಮ್ಮ ಪ್ರಾಂತ ಕೈಗಾರಿಕಾ ಇಲಾಖೆಯವರು ಇದಕ್ಕೆ ಗಮನ ಕೊಟ್ಟಿಲ್ಲ. ಇದಕ್ಕೆ ಗಮನ ಕೊಡದೇ ಹೋದರೆ ಇನ್ನು ಮುಂದೆ ಇದು ಭಯಂಕರ ಸ್ಥಿತಿಗೆ ಬರುವಂತೆ ಕಾಣುತ್ತದೆ. ಅನೇಕ ಕಡೆ ಪಾವರ್ ಲೂಮ್ಸು ಜಾರಿಗೆ ತಂದು ಮೂರು ನಾಲ್ಕು ವರ್ಷವಾಯಿತು. ಪಾವರ್ ಲೂಮ್ಸು ಪ್ರಾರಂಭ ಮಾಡಲು ಷೆಡ್ಡಿಗೆ ಬೇಕಾಗುವ ಸಾಮಾನು ತರಿಸಿ ಇಟ್ಟಿದ್ದೀರಿ. ಆದರೆ ಪಾವರ್ ಲೂಮ್ಸು ಕೆಲಸ ಮಾಡಲು ಬೇಕಾಗುವ ಮೋಟಾರ್ಸ್ ಅನುಕೂಲತೆ ಇಲ್ಲ. ನಾಲ್ಕೈದು ವರ್ಷಗಳ ಹಿಂದೆ ತಂದಿರತಕ್ಕ ಪಾವರ್ ಲೂಮ್ಸು ಕೆಲಸವಿಲ್ಲದೆ ತುಕ್ಕು ಹಿಡಿಯುವ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದು ಆಶ್ಚರ್ಯಕರವಾಗಿದೆ. ಪ್ರತಿಯೊಂದು ಸಾಮಾನು ಮೂರು ನಾಲ್ಕು ಕಡೆಯಿಂದ ಸಪ್ಲೈ ಮಾಡಬೇಕೆಂದು ಇದೆ. ಆದರೆ ಸಪ್ಲೈ ಇನ್‌ಸ್ಪೆಕ್ಟರ್ ಹಾಗು ಅಧಿಕಾರಿಗಳು ಹೋಗಿ ಬರುವುದಕ್ಕೆ ಖರ್ಚು ಮಾಡಿದ ಟೀ.ಎ., ಡೀ. ಎ. ಹಣ ಈ ಪಾವರ್ ಲೂಮ್ಸು ಬೆಲೆಗಿಂತ ಹೆಚ್ಚಾಗಿದೆ. ಕೋ-ಆಪರೇಟಿವ್ ಸೊಸೈಟಿ ಮಾಡಬೇಕೆಂದು ಹೇಳಿ ಎಂಟಹತ್ತು ಕಡೆ ಪಾವರ್ ಲೂಮ್ಸು ಇಟ್ಟಿದ್ದಾರೆ. ಷೆಡ್ ಕಟ್ಟಿದ್ದಾರೆ. ಇದನ್ನು ನೋಡುವುದಕ್ಕೆ ಬಂದ ಅಧಿಕಾರಿಗಳ ಸ್ವಂತ ಭತ್ಯದ ಖರ್ಚು ಪಾವರ್ ಲೂಮ್ಸುಗಳಿಗೆ ಮಾಡಿದ ಖರ್ಚಿಗಿಂತ ಜಾಸ್ತಿಯಾಗಿದೆ. ನಮ್ಮ ಊರಿಗೆ ಮಾತ್ರ ಇದು ಬರಲಿಲ್ಲ. ಯಾವ ಪ್ರಯೋಜನವಾಗಿಲ್ಲ. ನಮ್ಮ ಊರಿನ ಹತ್ತಿರ ಇರುವ ಕಿನಿಗೋಳಿ ಗ್ರಾಮದಲ್ಲಿ ಕೋ-ಆಪರೇಟಿವ್ ಸೊಸೈಟಿ ಮಾಡಿದ್ದಾರೆ. ಅದರ ಪರಿಸ್ಥಿತಿ ಇದೇ ರೀತಿ ಇದೆ. ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ಗ್ರಾಮೋದ್ಯೋಗ ಸಂಸ್ಥೆಯಲ್ಲಿ ನಡೆದಂಥ ದುರಾಚಾರ ಅನಾಚಾರ ಅವಿಚಾರ ಬಗ್ಗೆ ಚರ್ಚೆಯಾಗಿದೆ. ಅದನ್ನು ಪುನಃ ಈಗ ಹೇಳಬೇಕಾಗಿಲ್ಲ. ಕೈಗಾರಿಕೆಯಿಂದ ಪ್ರಯೋಜನವಾಗಿಲ್ಲ. ಕೈಗಾರಿಕೆ ಹಾಳಾಗಿ ಹೋಗುತ್ತಿದೆ. ಈ ಗ್ರಾಮ ಕೈಗಾರಿಕೆಯಲ್ಲಿ ಕೈ ಹಾಕಿ ಸುಟ್ಟುಕೊಂಡಂಥವರಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೇನೆ. ಖಾದಿ ತುತ್ತು ವಿಲೇಜ್ ಇಂಡಸ್ಟ್ರೀಜನಿಂದ ಉತ್ಪತ್ತಿ ಬರುವುದಿಲ್ಲ, ಪ್ರತಿಫಲ ಬರುವುದಿಲ್ಲ. ಅಂಥ ಕೈಗಾರಿಕೆಗಳಿಗೆ ಕೊಡತಕ್ಕ ಸಹಾಯ ಧನ ನಿಲ್ಲಿಸಿ ನಿಜವಾಗಿ ಲಾಭದಾಯಕವಾದ ಬಟ್ಟೆ ಸೋಪು

(ಶ್ರೀ ಸಂಜೀವನಾಥ ಐಕಳ)

ಗಾಣದ ಎಣ್ಣಿ ಚರ್ಮದ ಸಾಮಾನು ತಯಾರು ಮಾಡುವ ಕೈಗಾರಿಕೆಗಳಿಗೆ ಒಂದು ಷೆಡ್ಯೂಲ್ ಮಾಡಿ ಪ್ರೋತ್ಸಾಹ ಕೊಡಬೇಕು. ಖಾದಿ ಬೋರ್ಡಿನಲ್ಲಿ ಅನೇಕ ಜನರು ಕೆಲಸ ಮಾಡುತ್ತಾರೆ ಆದರೆ ಅವರಿಗೆ ಕೂತುಕೊಳ್ಳಲು ಆಫೀಸಿನಲ್ಲಿ ಸ್ಥಳವಿಲ್ಲ ಅವರು ತಿರುಗಾಡುತ್ತ ಇರುತ್ತಾರೆ ಅಂಥವರ ಸಂಖ್ಯೆ ಜಾಸ್ತಿಯಾಗಿದೆ. ಖಾದಿ ಬೋರ್ಡಿನ ಹಿಂದಿನ ಪ್ರೆಸಿಡೆಂಟರು ರಿಟೈರ್ ಆಗಿ ಹೋಗುವುದಕ್ಕೆ ಮುಂದೆ 58 ಜನರ ನೇಮಕ ಮಾಡಿ ಶಹಾಬಾಸಗಿರಿ ಪಡೆದಿದ್ದಾರೆ. ಈ 58 ಜನರು ಹೊಸದಾಗಿ ಬಂದವರಿಗೂ ಕೆಲಸವಿಲ್ಲ ಮೊದಲು ಇದ್ದವರಿಗೂ ಅಲ್ಲಿ ಕೆಲಸವಿಲ್ಲ. ಈ ವಿಷಯವನ್ನು ಸಭೆಯ ಗಮನಕ್ಕೆ ತಂದಿದ್ದೇನೆ. ಸರಕಾರದವರು ಇದರ ಬಗ್ಗೆ ಏನು ಮಾಡುತ್ತಾರೆ ಮಾಡಲಿ. ಈ ಖಾದಿ ಬೋರ್ಡು ಅಂದರೆ ಚುನಾವಣೆಯಲ್ಲಿ ಸೋತು ಹೋದ ಮಾಜಿ ಮಂತ್ರಿಯವರಿಗೆ ಒಂದು ಸ್ಥಾನ ಕೊಡುವುದಕ್ಕಾಗಿ ಕಲ್ಪಿಸಿಕೊಂಡಿದ್ದಾರೆ. ನಿಮ್ಮ ಪಕ್ಷದಲ್ಲಿ ಜಗಳವಾಡತಕ್ಕಂಥವರಿಗೆ ಮಂತ್ರಿ ಮಂಡಳದಲ್ಲಿ ಸ್ಥಾನ ಸಿಕ್ಕದೇ ಇದ್ದವರಿಗೆ ನಿಮ್ಮ ಪಕ್ಷದ ಸಂಸ್ಥೆಯ ಹಿತ ರಕ್ಷಣೆಗಾಗಿ ಒಂದು ಸ್ಥಾನ ಕಲ್ಪಿಸಿಕೊಟ್ಟು ದುರುಪಯೋಗಪಡಿಸಿಕೊಳ್ಳುತ್ತಿದ್ದೀರಿ. ಮೋಸ ಮಾಡುತ್ತಾ ಇದ್ದೀರಿ. ಇದೊಂದು ದೊಡ್ಡ ಸಮಸ್ಯೆಯಾಗಿದೆ. ಖಾದಿ ಬೋರ್ಡಿನ ಹೆಸರಿನಲ್ಲಿ ಪದೇ ಪದೇ ಅನ್ಯಾಯ ನಡೆಯುತ್ತಿದೆ.

ಇನ್ನು ಮಿನರಲ್ ಡೆವಲಪ್‌ಮೆಂಟ್ ಬೋರ್ಡು ಎಂದು ಮಾಡಿದ್ದೀರಿ. ಈ ಬೋರ್ಡಿನ ಬಗ್ಗೆ ಒಂದು ಮಾತು ಹೇಳಿದರೆ ತಪ್ಪಾಗಲಾರದು. ಈ ಬೋರ್ಡಿನ ಹೆಸರಿನಲ್ಲಿ ಹಣ ದುಂದು ಮಾಡಿ ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಈ ಮಿನರಲ್ ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಎಷ್ಟು ಲಾರಿಗಳಿವೆ ? ಎಷ್ಟು ವ್ಯವಹಾರ ನಡೆಯುತ್ತಿದೆ ? ಪರದೇಶಕ್ಕೆ ಕಲ್ಲಿದ್ದಲು ಅದಿರು ಕಳಿಸಿ ಹಣ ಸರಕಾರಕ್ಕೆ ಲಾಭ ದೊರೆಯುವುದರ ಬದಲು ನಷ್ಟವಾಗುತ್ತಿದೆ. ಇದರ ಅವ್ಯವಹಾರ ನೀತಿ ಬಗ್ಗೆ ಪರಿಶೀಲನೆ ಮಾಡಬೇಕೆಂದು ಒತ್ತಾಯ ಪೂರ್ವಕ ಹೇಳುತ್ತೇನೆ. ಕಬ್ಬಿಣ ಅದಿರು ಮೈನಿಕಾ ಪರದೇಶಕ್ಕೆ ಕಳಿಸಿ ಪ್ರೈವೇಟ್ ಫರ್ಮ್ಸ್ ಎಷ್ಟು ಲಾಭ ಪಡೆಯುತ್ತಿದ್ದಾರೆ ? ಆದರೆ ಈ ಮೈನಿಂಗ ಬೋರ್ಡಿನಲ್ಲಿ ಅವ್ಯವಹಾರ ನಡೆದಿದೆ. ಲಾರಿಗಳ ಸಂಖ್ಯೆ ಎಷ್ಟು ಏನಾಗಿದೆ ಎಂಬುದು ದೇವರಿಗೇ ಗೊತ್ತು. ಇದು ಒಂದು ದಾರುಣ ಕಥೆಯಾಗಿದೆ.

ಇನ್ನು ಫಾರೆಸ್ಟ ಇಂಡಸ್ಟ್ರೀಜ ಬಗ್ಗೆ ಸರಕಾರದ ಗಮನ ಸೆಳೆಯುವುದು ಒಳ್ಳೆಯದು ಎಂದು ಕಾಣುತ್ತದೆ. ನಮ್ಮ ದೇಶದಲ್ಲಿ ಬೇಕಾದಷ್ಟು ಆರಣ್ಯ ಸಂಪತ್ತು ಇದೆ. ಆದುದರಿಂದ ಅರಣ್ಯ ಸಂಪತ್ತನ್ನು ಉಪಯೋಗಿಸಿಕೊಂಡು ಕೈಗಾರಿಕೆಗಳನ್ನು ನಡೆಸುವ ಬಗ್ಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ನಮ್ಮ ಸರಕಾರ ದುಡ್ಡು ಕೊಟ್ಟು ಈ ಕೈಗಾರಿಕೆಗೆ ಪ್ರೋತ್ಸಾಹ ಕೊಡುತ್ತದೆ. ಆದರೆ ಅದು ಸದುಪಯೋಗವಾಗುತ್ತಿಲ್ಲ. ಹೊಸಪೇಟೆ ಶುಗರ್ ಫ್ಯಾಕ್ಟರಿಯಲ್ಲಿ ಮರಾರಕಾ ಎನ್ನುವವರು ಮುಂಬಯಿಯವರು ಮ್ಯಾನೇಜಿಂಗ ಡೈರೆಕ್ಟರ್ ಆಗಿದ್ದಾರೆ. ಏಳು ಜನ ಡೈರೆಕ್ಟರರಲ್ಲಿ ಐದು ಜನ ಡೈರಕ್ಟರರು ಮುಂಬಯಿಯವರು ಆಗಿದ್ದು ಅವರು ಕಾಂಗ್ರೆಸ್ ಟಿಕೇಟಿನಿಂದ ಆರಿಸಿ ಬಂದ ಪಾರ್ಲಿಮೆಂಟಿನ ಸದಸ್ಯರು ಆಗಿದ್ದಾರೆ. ಹೊಸಪೇಟೆ ಶುಗರ್ ಫ್ಯಾಕ್ಟರಿಯಿಂದ ಒಂಭತ್ತು ಮೈಲಿ ದೂರದಲ್ಲಿ ಕಮಲಾಪುರದಲ್ಲಿ ಹಾಗು ಗಂಗಾವತಿಯಲ್ಲಿ ಒಂದು ಸಕ್ಕರೆ ಕಾರಖಾನೆ ಕೊ-ಆಪರೇಟಿವ್ ಬೇಸಿಸ್ ಮೇಲೆ ಸ್ಥಾಪನೆ ಮಾಡಬೇಕೆಂದು ನಾಲ್ಕು ಸಾವಿರ ಎಕರೆಯಲ್ಲಿ ಕಬ್ಬು ಬೆಳೆಸಿ ಸಕ್ಕರೆ ಕಾರ್ಖಾನೆ ಮಾಡುವ ಉದ್ದೇಶ ಇಟ್ಟುಕೊಂಡು ಬಂಡವಾಳ ಹಾಕಿ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಿದರು. ಆದರೆ ಈ ಕಾಂಗ್ರೆಸ್ ಪಾರ್ಲಿಮೆಂಟಿನ ಸದಸ್ಯರು ಮೊರಾರ್ಜಿ ಬಂಧುಗಳು ಡಿಲ್ಲಿಯಲ್ಲಿ ಕೂತುಕೊಂಡು ನಮ್ಮ ಮುಖ್ಯ ಮಂತ್ರಿಗಳನ್ನೂ ಕೈಗಾರಿಕಾ ಮಂತ್ರಿಗಳನ್ನೂ ಬರಮಾಡಿಕೊಂಡು ತಮ್ಮ ಪ್ರಭಾವಕ್ಕೆ ಒಳಪಡಿಸಿ ಕಮಲಾಪುರ ಸಕ್ಕರೆ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ಅಡ್ಡಿ ಆತಂಕಗಳನ್ನು ಹಾಕಿದರು.

Sri K. MALLAPPA.—We are not under the influence of anybody. We have made recommendation. I am making a definite statement that we have made recommendation for establishing sugar factories at Kamalapur and Gangavathi. Applications are pending before the Government of India. We are not the licensing authority and the Government of India have to issue the license.

Sri SANJEEVANATH AIKALA.—It is not enough if the Government make just a recommendation. The Government should pursue it. The raiyats of these two places have come forward and they have

been trying for the last 5 to 7 years, but still this Government simply makes a recommendation. That is an eye-wash. Actualiy this Government is under the influence of those Millionaire Congress Parliamentary Members who are preventing the establishment of sugar factories at Kamalapur and Gangavathi.

Mr. SPEAKER.—I believe this point was raised by the Hon'ble Member some time back and somebody asked whether he was a relation of somebody else.

ಶ್ರೀ ಸಂಜೀವ ನಾಥ ಐಕಳ.—ಆ ರೀತಿ ಅವರ ಒಂದು ಪ್ರಭಾವದಿಂದ ಅಲ್ಲಿ ಸಕ್ಕರೆ ಕಾರ್ಖಾನೆ ಬರುವುದಕ್ಕಾಗುವುದಿಲ್ಲ.

ಇನ್ನು ಗ್ರಾಮ ಕೈಗಾರಿಕೆಗಳ ಬಗ್ಗೆ ಸರ್ಕಾರದವರು ಹೆಚ್ಚಿನ ಆಸ್ತೆಯನ್ನು ವಹಿಸಬೇಕು. ಅಲ್ಲೀಗ ಕೆಲವು ಬಾಟಲ್ ನೆಕ್ಕುಗಳಿವೆ. ಅದರಿಂದ ಅವು ಕುಸಿದು ಬೀಳುತ್ತವೆ. ಇನ್ನು ನಮ್ಮಲ್ಲಿ ನಾರಿನ ಕೈಗಾರಿಕೆಯು ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವುಗಳನ್ನು ಮುಚ್ಚುವುದೇ ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಈ ಕೈಗಾರಿಕಾ ಕಾರ್ಖಾನೆಗಳನ್ನು ತೆಗೆದಿರತಕ್ಕ ವಿಚಾರಕ್ಕೆ ಬಂದರೆ—ದಿನಂಪ್ರತಿ ನಮ್ಮ ದಕ್ಷಿಣ ಭಾರತದ ವಲಯದಲ್ಲಿ ಸರ್ಕಾರಿ ಹಾಗೂ ಖಾಸಗೀ ಕಾರ್ಖಾನೆಗಳೆಷ್ಟು ಸ್ಥಾಪಿತ ವಾಗಿವೆ ಎಂಬುದನ್ನು ಲೆಕ್ಕ ಹಾಕಿದರೆ–1962–63ರಲ್ಲಿ ಮದ್ರಾಸಿನಲ್ಲಿ 253, ಆಂಧ್ರದಲ್ಲಿ 55, ಮತ್ತು ಕೇರಳದಲ್ಲಿ 45, ಮೈಸೂರಿನಲ್ಲಿ 48 ಮಾತ್ರ. ಇನ್ನು 63—64ರಲ್ಲಿ ಮದ್ರಾಸಿನಲ್ಲಿ 158, ಆಂಧ್ರದಲ್ಲಿ 27, ಕೇರಳದಲ್ಲಿ 42 ನಮ್ಮ ಮೈಸೂರಿನಲ್ಲಿ 28.

ಅಧ್ಯಕ್ಷರು.—ತಾವೇನು ಮಾಡಿದ್ದೀರಾ ಈ ವಿಚಾರದಲ್ಲಿ?

ಖಾಸಗಿಯವರು ಹೊಸದಾಗಿ ಕಾರ್ಖಾನೆಗಳನ್ನು ಮಾಡಲು ಮುಂದೆ ಬಂದರೆ, ಅವರು ಅರ್ಜಿ ಹಾಕಿಕೊಂಡರೆ ಆ ಬಗ್ಗೆ ಸರ್ಕಾರದವರು ಸರಿಯಾದ ಆಸ್ತೆಯನ್ನು ವಹಿಸುತ್ತಿಲ್ಲ, ಶ್ರದ್ಧೆಯನ್ನು ವಹಿಸುತ್ತಿಲ್ಲ, ಹೀಗಾಗಿ ಅವು ನಮ್ಮಲ್ಲಿ ಹಿಂದೆ ಬಿದ್ದಿವೆ.

Sri K. MALLAPPA.—One hundred and fifty-two licences have been given for the private sector.

Sri SANJEEVANATH AIKALA.—I can quote authoritative figures published by Canara Bank News letter. ಈ ರೀತಿಯಾಗಿ ಹೊಸ ಕಾರ್ಖಾನೆಗಳನ್ನು ತೆಗೆಯಲು ಯಾವ ಸಂಸ್ಥೆ ಮುಂದೆ ಬಂದಾಗ್ಗೂ ಸರ್ಕಾರದವರು ಹೆಚ್ಚಿನ ಆಸ್ತೆ ವಹಿಸುತ್ತಿಲ್ಲ, ಹಾಗೂ ಸರ್ಕಾರದವರ ಮೇಲ್ವಿಚಾರಣೆ ಈ ಪಬ್ಲಿಕ್ ಸೆಕ್ಟಾರಿನ ಬಗ್ಗೆ ಸರಿಯಾಗಿಲ್ಲ, ತೃಪ್ತಿಕರ ವಾಗಿಲ್ಲ ಎಂಬುದಾಗಿ ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ನಾನು ಅದನ್ನು ಅನುಮೋದಿಸುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಉತ್ತರ).—ಅಧ್ಯಕ್ಷರೇ, ಈ ಕೈಗಾರಿಕೆಗಳ ಮೇಲೆ ಮಾತನಾಡುತ್ತಾ ನಮ್ಮಲ್ಲಿ ಈಗ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಅಂದರೆ ಸಕ್ಕರೆ ಸಿಮೆಂಟ್ ಮತ್ತು ಕಾಟನ್ ಟೆಕ್ಸ್‌ಟೈಲ್ಸ್ ಇತ್ಯಾದಿಗಳ ಬಗ್ಗೆ ಸ್ವಲ್ಪ ಉತ್ಸಾಹ ಕಂಡುಬಂದಾಗ್ಗೂ ಇದುವರೆಗೆ ಇವರು 4-5 ಸಕ್ಕರೆ ಕಂಪೆನಿಗಳಿಗೆ ಲೈಸೆನ್ಸನ್ನು ಕೊಟ್ಟಿದ್ದಾರೆ. ಇನ್ನು 2 ಸಿಮೆಂಟ್ ಕಂಪೆನಿಗಳಿಗೆ ಲೈಸೆನ್ಸ್ ಕೊಡಲಾಗಿದೆ, ಇನ್ನೂ 2 ಬರುವುದರಲ್ಲಿವೆ, ಅಂತ ಹೇಳಿದ್ದಾರೆ. ಇನ್ನು ನಮ್ಮಲ್ಲಿ 2 ಲಕ್ಷ 40 ಸಾವಿರ, ಕಾಟನ್ ಟೆಕ್ಸ್‌ಟೈಲ್ಸ್ ಬಗ್ಗೆ; ಸ್ಪಿಂಡಲ್ಸ್‌ಗಳು ಬೇಕಾಗುತ್ತವೆ. ಹೀಗೆಲ್ಲಾ ಇವರು ಹೇಳಿಕೆಗಳನ್ನು ಕೊಟ್ಟಿದ್ದರೂ ಅವು ಬರಿ ಒಂದು ಹೇಳಿಕೆಯ ರೂಪದಲ್ಲಿ ಇವೆಯೇ ಹೊರತು ಅವಿನ್ನೂ ಕಾರ್ಯ ರೂಪಕ್ಕೆ ಬಂದಿಲ್ಲ. ಹೀಗೆ ನಮ್ಮ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಇವುಗಳ ಅಭಿವೃದ್ಧಿಯೇನೂ ಆಷ್ಟಾಗಿಲ್ಲ ಎಂದು ನಾನು ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ಮೇಲಾಗಿ ಇವುಗಳಿಂದ ಬರತಕ್ಕ ಉತ್ಪತ್ತಿ ಬೇರೆ ಕಡಮೆಯಾಗಿದೆ. ಇದಕ್ಕೆ ಕಾರಣವೇನೆಂಬುದನ್ನು ನಾವು ಕಂಡು ಹಿಡಿಯಬೇಕಾಗಿದೆ.

ಆದರೆ ನಾನೀಗ ಕೆಲವು ಸಣ್ಣ ಕೈಗಾರಿಕೆಗಳ ಬಗ್ಗೆ ವಿವರವಾಗಿ ಕೆಲವು ವಿಚಾರಗಳನ್ನು ತಿಳಿಸಬೇಕೆಂದಿದ್ದೇನೆ. ಡಿಸ್ಟ್ರಿಕ್ಟ್ ಕೋ ಅಪರೇಟಿವ್ ಸೊಸೈಟಿಗಳಲ್ಲಿ ಕೆಲವಕ್ಕೆ 10 ಸಾವಿರದ ವರೆಗೂ ಸಾಲ ಕೊಡತಕ್ಕ ಅಧಿಕಾರವನ್ನು ಕೊಟ್ಟು, ಸದರಿ ಸಾಲಗಳನ್ನು ಒಂದು ವರ್ಷದ ಅವಧಿ

(ಶ್ರೀ ಬಿ. ಕೆ. ಪುಟ್ಟಯ್ಯ)

ಯಲ್ಲೇ ವಾಪಸು ಮಾಡಬೇಕೆಂದು ಹೇಳಿ ಸರ್ಕಾರದವರೊಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಆ ಸಂಸ್ಥೆಗಳಿಗೆ ಅಷ್ಟು ಶಕ್ತಿಯಿರುವುದಿಲ್ಲ. ಅವು ಸಾಲ ಪಡೆದ ಒಂದು ವರ್ಷದವರೆಗೂ ರಾಮೆಟೀರಿಯಲ್ಸನ್ನು ಒದಗಿಸಿಕೊಳ್ಳುವುದೇ ಆಗುತ್ತದೆ, ಇನ್ನು ಒಂದು ವರ್ಷ ಅವು ಒಂದು ವರ್ಕಿಂಗ್ ಆರ್ಡರಿಗೆ ಬರಲು ಕಾಲ ಹಿಡಿಯುತ್ತದೆ. ಹೀಗೆ ಅವುಗಳಿಗೆ ಸರಿಯಾಗಿ ಕೆಲಸ ಪ್ರಾರಂಭಿಸುವುದಕ್ಕೇ ಎರಡು ಮೂರು ವರ್ಷಗಳ ಕಾಲ ಬೇಕು. ಹಾಗಿರುವಾಗ ಅವುಗಳಿಗೆ ಆ ಸಾಲವನ್ನು ಒಂದೇ ವರ್ಷದಲ್ಲಿ ರಿಟರ್ನ್ ಮಾಡಬೇಕೆಂದರೆ ಬಹಳ ಹಾನಿಯಾಗುತ್ತದೆ. ಅವುಗಳಿಗೆ ಸಾಲ ಕೊಡುವುದರಿಂದೇನೂ ಉಪಕಾರ ಮಾಡಿದಂತೆ ಆಗುವುದಿಲ್ಲ. ಹೀಗಾಗಿ ಈ ದಿವಸ ಈ ಸಣ್ಣ ಕೈಗಾರಿಕೆಗಳವರಲ್ಲಿ ನಿರುತ್ಸಾಹ ಮೂಡಿದೆ. ಸರ್ಕಾರದವರು ಈ ವಿಚಾರಕ್ಕೆ ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ. ಇಂಥ ಸಂಸ್ಥೆಗಳು ಈಗ ನಮ್ಮಲ್ಲಿ 14 ಇವೆ. ಇನ್ನು ನಾವು ನಮ್ಮ ನಮ್ಮ ಸರ್ಕಾರ ನಡೆಸುತ್ತಿರುವ ಯಾವ ಒಂದು ಕೈಗಾರಿಕೆಯನ್ನು ತೆಗೆದುಕೊಂಡರೂ ಅವು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಅದಕ್ಕೆ ಬೇಕಾದಷ್ಟು ಸಾಕ್ಷ್ಯ ಇದೆ. 2 ಕಾರ್ಖಾನೆಗಳು ನಷ್ಟದಲ್ಲಿ ಕೆಲಸ ಮಾಡುತ್ತಿವೆ. ಇನ್ನು ಉಳಿದ 12 ಲಾಭದಲ್ಲಿ ಕೆಲಸ ಮಾಡುತ್ತಿವೆ. ಆದರೂ ನಾವು ಅವುಗಳು ಈ ದಿವಸ ಲಾಭದಲ್ಲಿ ಕೆಲಸ ಮಾಡುತ್ತಿವೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಅವು ಗಳಿಸಿರತಕ್ಕ ಲಾಭವನ್ನು ಲೆಕ್ಕ ಹಾಕಿದರೆ ಕೆಲವು 5 ಸಾವಿರ, ಕೆಲವು 10 ಸಾವಿರ, ಇನ್ನು ಕೆಲವು, 1 ಲಕ್ಷ, ಇದಕ್ಕಿಂತ ಹೆಚ್ಚಿನ ಲಾಭಗಳಿಸಿರತಕ್ಕದ್ದು ಯಾವುದೂ ಇಲ್ಲ. ಇದರಿಂದ ಏನು ಅರ್ಥವಾಗುತ್ತದೆ ಎಂದರೆ—ಅಂದರೆ ನನಗೆ ತಿಳಿದ ಮಟ್ಟಿಗೆ ಸರ್ಕಾರದವರು ಈ ಸಂಸ್ಥೆಗಳನ್ನು ಮ್ಯಾನೇಜ್ ಮಾಡಲು ನೇಮಕ ಮಾಡತಕ್ಕ ಅಧಿಕಾರಿಗಳು ಯಾರಿದ್ದಾರೋ ಅಂಥವರನ್ನು ಅಲ್ಲಿಂದ 2—3 ವರ್ಷಗಳಲ್ಲೇ ಬದಲಾವಣೆ ಮಾಡಿ ಬಿಡುತ್ತಾರೆ. ಇಂಥ ಒಂದು ಸಂಸ್ಥೆಯ ವರ್ಗ ಮಾಡುತ್ತಾ ಹೋದರೆ ಆ ಅಧಿಕಾರಿಗಳು ಅಲ್ಲಿಯ ವ್ಯವಹಾರವನ್ನು ಚೆನ್ನಾಗಿ ಅರಿತುಕೊಂಡು ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಈ ಕೈಗಾರಿಕಾ ಸಂಸ್ಥೆಗಳಿಗೂ ಬೇರೆ ಬರಿ ಕಾಗದ ಪತ್ರಗಳನ್ನು ವಿಲೇವಾರಿ ಮಾಡತಕ್ಕ ಇಲಾಖೆಗಳಿಗೂ ಬಹಳ ವ್ಯತ್ಯಾಸವಿದೆ. ಈ ಕೈಗಾರಿಕಾ ಸಂಸ್ಥೆಗಳಲ್ಲಿ ಅವರು ಅಲ್ಲಿನ ಕೆಲಸ ಕಾರ್ಯಗಳ ಒಂದು ಅರಿವನ್ನು ಚೆನ್ನಾಗಿ ಪಡೆಯಬೇಕಾಗಿದ್ದರೆ ಎಂಥವರಿಗೂ 3—4 ವರ್ಷಗಳ ಕಾಲಾವಕಾಶ ಬೇಕು. ಹಾಗಿರುವಾಗ ಸರ್ಕಾರದವರು ಆ ಅಧಿಕಾರಿಗಳನ್ನು ಬೇಗ ಬೇಗ ವರ್ಗಾಯಿಸುತ್ತಾ ಹೋದರೆ ಅವುಗಳಿಂದ ಲಾಭನಿರೀಕ್ಷಣೆ ಮಾಡುವುದಕ್ಕಾಗುವುದಿಲ್ಲ. ಇಂಥ ಸಂಸ್ಥೆಗಳಿಗೆ ಹೊರದೇಶಗಳಿಂದ ಚೆನ್ನಾಗಿ ನುರಿತು ಬಂದಂಥ ಅಧಿಕಾರಿಗಳನ್ನೇ ಹಾಕಬೇಕು. ಅವರು ತಮ್ಮ ಕಾಲವನ್ನೆಲ್ಲಾ ಇಂಥ ಸಂಸ್ಥೆಗಳಲ್ಲೇ ಕಳೆಯಬೇಕು. ಆದರೆ ಕೆಲವು ಕೈಗಾರಿಕಾ ಸಂಸ್ಥೆಗಳ ವ್ಯವಹಾರ ಬಹಳ ವಿಚಿತ್ರವಾದ ರೀತಿಯಲ್ಲಿದೆ. ಇಲ್ಲಿ ಸರ್ಕಾರದವರೇ ಪ್ರತಿಯೊಂದು ಇಲಾಖೆಯ ವಿವರಗಳನ್ನೂ ಕೊಟ್ಟಿದ್ದಾರೆ.

ಒಂದು ಉದಾಹರಣೆ ಹೇಳುವುದಾದರೆ, ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿ 28 ಇಂಡಸ್ಟ್ರಿಯಲ್ ಎಸ್ಟೇಟ್ಸನ್ನು ಮಾಡಿದ್ದೀರಿ ಅದನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪೂರೈಸಬೇಕೆಂಬ ಒಂದು ಗುರಿಯನ್ನು ಇಟ್ಟುಕೊಂಡಿದ್ದೀರಿ. ಅದರಲ್ಲಿ 8 ಆಗಿದೆ 10 ಆಗುವುದರಲ್ಲಿ ಇದೆ. ಉಳಿದದ್ದನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ. ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿಯುತ್ತಾ ಬಂದಿದೆ. ಇದು ಮುಗಿಯಬೇಕಾದರೆ ಎಷ್ಟು ವರ್ಷ ಬೇಕಾಗುತ್ತದೆ ಎಂಬುದನ್ನು ತಾವೇ ಯೋಚನೆ ಮಾಡಿ. ಇನ್ನೂ ಕೂಡ ಪ್ಲಾನ್‌ಗಳನ್ನು ಮಾಡುವುದರಲ್ಲೇ ನಿರತರಾಗಿದ್ದೀರಿ, ಆದ್ದರಿಂದ ಇವುಗಳು ಮುಗಿಯುವಂತಹ ಸ್ಥಿತಿಯಲ್ಲಿ ಇಲ್ಲ ಬಹಳ ಹಿಂದೆ ಬಿದ್ದಿದೆ. ಯಾವುದೇ ಒಂದು ಕೆಲಸ ಮಾಡಿದರೂ ಕರಾರುವಾಕ್ಕಾಗಿ, ಒಂದು ಅಂಕಿ ಅಂಶ ಕೊಟ್ಟು ಇಷ್ಟು ಕೆಲಸಗಳನ್ನು ಮಾಡಬೇಕೆಂಬುದನ್ನು ನಿಗದಿ ಮಾಡಿಕೊಳ್ಳುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

3-00 P.M.

ಎಕ್ಸಿಬಿಷನ್, ಇದು ತಮ್ಮ ಬಾಬಿಗೆ ಸೇರಿದ್ದು ಆದರೆ ಇದಕ್ಕೆ ಹೋಮ್ ಮಿನಿಸ್ಟರು ಛೇರ್ಮನ್‌ರು ಆಗಿದ್ದಾರೆ. ಇದು ಒಂದು ವ್ಯಾಪಾರ ಸಂಸ್ಥೆಯಾಗಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಎಕ್ಸಿಬಿಷನ್ ಕಮಿಟಿ ಅಂತ ಹೇಳಿ ಮಾಡಿದ್ದೀರಿ ಅದರ ಮೆಂಬರುಗಳು ಯಾರು ಎಂದರೆ ಗುಲ್ಬರ್ಗಾ, ರಾಯಚೂರು ಕಡೆಗಳಲ್ಲಿರುವವರು ಯಾರೋ ಅಷ್ಟೇ ದೂರದಲ್ಲಿರುವವರು ಅದಕ್ಕೆ ಮೆಂಬರುಗಳಾಗಿರುತ್ತಾರೆ. ಸಿಟಿಯಲ್ಲಿರತಕ್ಕ ಎಂ. ಎಲ್. ಎ. ಆಗಲಿ ಎಂ. ಪಿ. ಆಗಲಿ

ಯಾರಿಗೂ ಕೂಡ ಆ ಸ್ಥಳದಲ್ಲಿ ಅವಕಾಶವಿಲ್ಲ ಎಂದರೆ ಇದು ನಾಚಿಗೇಡಿನ ಸಂಗತಿ. ಜೊತೆಗೆ ಇದು ಒಂದು ವ್ಯಾಪಾರ ಸಂಸ್ಥೆಯಾಗಿದೆ ಎಂಬುದನ್ನು ಮತ್ತೊಮ್ಮೆ ವಿಷಾದದಿಂದ ಹೇಳಬೇಕಾಗಿದೆ.

ಕೈಮಗ್ಗದ ಬಗ್ಗೆ ನಮ್ಮ ಸ್ನೇಹಿತರು ವಿವರಿಸಿ ಹೇಳಿದ್ದಾರೆ. ಸ್ಟೇಟ್ ಅಪೆಕ್ಸ್ ಸೊಸೈಟಿಗೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳಿಂದ ಮೂರು ಕೋಟಿ ರೂಪಾಯಿಗಳವರೆಗೂ ಕೊಟ್ಟಿದ್ದೇವೆ. ಅಲ್ಲಿ ದುರ್ ವ್ಯವಹಾರ ನಡೆಯುವುದನ್ನು ಬಹುಶಃ ನಾವು, ನೀವು ಯಾರೂ ಕೂಡ ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಷ್ಟು ದೊಡ್ಡ ಅನ್ಯಾಯವಾಗುತ್ತಾ ಇದೆ. ನಮ್ಮ ಸಂಸ್ಥಾನದಲ್ಲಿ ಕೈಮಗ್ಗಕ್ಕೆ ಸುಮಾರು 50-60 ಸಾವಿರ ಇದ್ದದ್ದು 30-40 ಸಾವಿರಕ್ಕೆ ಇಳಿದಿದೆ. ಕೈ ಮಗ್ಗಕ್ಕೆ ಪ್ರೋತ್ಸಾಹ ಕೊಡಬೇಕೆಂದು ಬೇಕಾದಷ್ಟು ಹೇಳುತ್ತೀರಿ, ಪವರ್ ಲೂಮ್ಸ್‌ಗೆ 56 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ ಇದುವರೆಗೂ ಖರ್ಚಾಗಿರುವುದು ಎಷ್ಟು ಎಂದರೆ ಅಷ್ಟೂ ಹಣ ಖರ್ಚಾಗಿದೆ ಮತ್ತು ಗ್ರಾಂಟು 5 ಲಕ್ಷ ರೂಪಾಯಿ ಖರ್ಚಾಗಿದೆ, ಆದರೆ ಅದಕ್ಕೆ ಬಂದಿರತಕ್ಕ ಪ್ರತಿಫಲ ಎಷ್ಟು ಎಂಬುದನ್ನು ನೋಡಿದ್ದೇ ಆದರೆ, 2,000 ಪವರ್ ಲೂಂಸ್ ಇನ್‌ಸ್ಟಾಲ್ ಆಗಬೇಕಾಗಿದ್ದ ಕಡೆ 1,200 ಮಾತ್ರ ಇನ್‌ಸ್ಟಾಲ್ ಆಗಿದೆ ಎಂದು ತಾವೇ ತಮ್ಮ ಅಂಕಿ ಅಂಶದ ಪ್ರಕಾರ ಹೇಳುತ್ತಾ ಇದ್ದೀರಿ. ಕೈಮಗ್ಗದ ಸೊಸೈಟಿಗಳ ಬಗ್ಗೆ ದೂರುಗಳು ಈಗಾಗಲೇ ಬಂದಿವೇ, ವಿಚಾರಣೆಗಾಗಿ ಅವುಗಳನ್ನು ಕಳುಹಿಸಿದ್ದೀರಿ. ಅವು ಎಷ್ಟು ಮಟ್ಟಿಗೆ ಫಲಕಾರಿಯಾಗಿ ಕೆಲಸ ಮಾಡುತ್ತಾ ಇವೆ, ಎಷ್ಟು ಮಟ್ಟಿಗೆ ಯಶಸ್ವಿಯಾಗುತ್ತವೆ ಎಂಬ ವಿಷಯದಲ್ಲಿ ಈ ಸಭೆಗೆ ವಿವರಣೆ ಕೊಡಬೇಕೆಂದು ಹೇಳಿ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಸಂಸ್ಥಾನದ ಮತ್ತು ಕೇಂದ್ರ ಸರ್ಕಾರದ ಕೈಗಾರಿಕೆಗಳಲ್ಲಿ ಮೈಸೂರಿನವರಿಗೆ ಇರತಕ್ಕ ಪ್ರಾತಿನಿಧ್ಯ ಎಷ್ಟಿದೆ ಎಂಬುದನ್ನು ನೋಡಿದರೆ ಕೆಲವು ಸಂದರ್ಭಗಳಲ್ಲಿ ವರ್ಷೇ ವರ್ಷೇ ಸರ್ಸೆಂಟೇಜ್‌ನ್ನು ಮಾತ್ರ ಹೆಚ್ಚಾಗಿ ಹೇಳುತ್ತಾ ಇದ್ದೀರಿ. ಯಾವ ರೀತಿ ಅವರು ಅಲ್ಲಿ ಸೇರಿದ್ದಾರೆ ಎಂದರೆ ಯಾರಾದರೂ ಪಂಚಾಯ್ತಿ ಮೆಂಬರು ಅಥವಾ ಪಂಚಾಯ್ತಿ ಚೆರ್ಮನ್‌ರಿಂದ ಅವರು ಯಾವುದೋ ಒಂದು ಹಳ್ಳಿಯಲ್ಲಿ ಇದ್ದರು ಎಂದು ಹೇಳಿ ಸರ್ಟಿಫಿಕೇಟನ್ನು ತರುತ್ತಾರೆ, ಅವರನ್ನು ಮೈಸೂರಿನವರು ಎಂದು ತಿಳಿದುಕೊಂಡು ಅವರಿಗೆ ಕೆಲಸ ಕೊಡುತ್ತಾ ಇದ್ದಾರೆ. ಮೈಸೂರಿನವರಿಗೇ ಹೆಚ್ಚಾಗಿ ಅಲ್ಲಿ ಕೆಲಸ ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು ಸುಳ್ಳು ಸರ್ಟಿಫಿಕೇಟುಗಳನ್ನು ತೆಗೆದುಕೊಂಡು ಸೇರಿರುವ ವ್ಯವಸ್ಥೆ ಹೋಗಬೇಕು.

ಇನ್ನು ಏಜೆನ್ಸಿ ಕೊಡುವ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕೆಂದು ಇದ್ದೇನೆ. ಲಕ್ಷಾಂತರ ರೂಪಾಯಿಗಳನ್ನು ಹಾಕಿ ನಮ್ಮ ಸರ್ಕಾರದವರು ಕೈಗಾರಿಕೆಗಳನ್ನು ನಡಿಸುತ್ತಾ ಇದ್ದೀರಿ, ಸೋಪು ಮತ್ತು ಇನ್ನೂ ಕೆಲವು ಪದಾರ್ಥಗಳಿಗೆ ಏಜೆನ್ಸಿಯನ್ನು ಕೊಡುವಾಗ ಇಡೀ ಸ್ಟೇಟ್‌ಗೆ ಒಬ್ಬಬ್ಬರಿಗೆ ಏಜೆನ್ಸಿ ಕೊಡುತ್ತೀರಿ, ಅವರು ಮನಾಪಲ ಮಾಡಿಕೊಂಡು ಕೆಲವು ಕಂಪೆನಿಗಳವರು ಇದರಲ್ಲಿ ರಾಜಕೀಯವನ್ನೂ ಸಹ ಬೆಳೆಸುತ್ತಾ ಇದ್ದಾರೆ. ಆ ದೃಷ್ಟಿಯಿಂದ ಹೇಳುತ್ತಾ ಇದ್ದೇನೆ. ದೇಶ ಅಭಿವೃದ್ಧಿಯಾಗಬೇಕಾದರೆ ಮತ್ತು ನಮ್ಮ ಕೈಗಾರಿಕೆ ಚೆನ್ನಾಗಿ ಬೆಳೆಯಬೇಕಾದರೆ ಈ ಏಜೆನ್ಸಿಗಳನ್ನು ಕಡೆಯ ಪಕ್ಷ ಡಿಸ್ಟ್ರಿಕ್ಟ್‌ವಾರು ಅಥವಾ ತಾಲ್ಲೂಕುವಾರಾಗಿ ಕೊಟ್ಟರೆ ಒಳ್ಳೆಯದು ಇಲ್ಲದೇ ಇದ್ದರೆ ನಿಮಗೂ ಅದರಿಂದ ವರಮಾನ ಬರುವುದಿಲ್ಲ ಮತ್ತು ಅವರು ಒಬ್ಬಿಬ್ಬರು ಏಜೆನ್ಸಿ ಪಡೆದುಕೊಂಡು ಪಾಳೇಗಾರರಂತೆ ಇರುವ ಪರಿಸ್ಥಿತಿ ಬರುತ್ತದೆ. ಇದು ಬಹಳ ಅನ್ಯಾಯ ಎಂದು ಹೇಳುತ್ತೇನೆ.

ಇನ್ನು ಕೆಲವು ರಿಬೇಟ್ ಕೊಡುವ ಬಾಬುಗಳು ಇವೆ. ಎಣ್ಣೆ, ಕೊಟ್ಟಣದ ಅಕ್ಕಿ, ಇಂತಹ ಪದಾರ್ಥಗಳಿಗೆ ರಿಬೇಟ್ ಕೊಡುತ್ತಾ ಇದ್ದೀರಿ. ಅದನ್ನು ಸುಮ್ಮನೆ ಲೆಕ್ಕ ತೋರಿಸಿ ಖರ್ಚು ಹಾಕುತ್ತಾ ಇದ್ದಾರೆ ಇದರಿಂದ ಯಾರಿಗೂ ಅನುಕೂಲವಾಗುತ್ತಾ ಇಲ್ಲ ಎಂದು ಹೇಳುತ್ತೇನೆ. ತಿಪಟೂರಿನಲ್ಲಿ ಒಂದು ರಬ್ಬರ್ ಮತ್ತು ಕಾಯರ್ ಇಂಡಸ್ಟ್ರೀ ಸ್ಥಾಪನೆ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಕೆಲವು ದಿವಸಗಳ ಹಿಂದೆ ಹೇಳಿದ್ದರು. ಈಗ ನೋಡಿದರೆ ಅಲ್ಲಿ ಒಂದು ಸಣ್ಣ ನಾರಿನ ಫ್ಯಾಕ್ಟರಿ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ, ಆದರಿಂದ ಪ್ರಯೋಜನ ಇಲ್ಲ. ತಿಪಟೂರು ತಾಲ್ಲೂಕಿನಲ್ಲಿ ತೆಂಗಿನ ನಾರು ವಿಶೇಷವಾಗಿ ಸಿಕ್ಕುತ್ತದೆ. ಆದ್ದರಿಂದ ಅಲ್ಲಿ ಒಂದು ದೊಡ್ಡ ಫ್ಯಾಕ್ಟರಿ ಮಾಡಬೇಕೆಂದು ಹೇಳುತ್ತೇನೆ. ಇನ್ನೂ ಹೆಚ್ಚು ವಿಷಯ ಹೇಳಬೇಕೆಂದರೆ ನೀವು ಟೂರ್ ಮಾಡಿಲ್ಲ ಎಂದು ಹೇಳುತ್ತಾರೆ. ಸರ್ಕಾರದಿಂದ ಟಿ. ಎ. ಡಿ. ಎ. ಸಿಕ್ಕುವುದಾದರೆ ಟೂರ್ ಮಾಡಿ......... ....

ಅಧ್ಯಕ್ಷರು.—ಈಗ ತತ್ಕಾಲಕ್ಕೆ ನಿಲ್ಲಿಸಿ, ಟೂರ್ ಮಾಡಿ ಮುಗಿಸಿದ ನಂತರ ಹೇಳಬೇಕಾದ್ದನ್ನು ಹೇಳಿ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಸರ್ಕಾರದವರು ಅದಕ್ಕೆ ವ್ಯವಸ್ಥೆ ಮಾಡಿಕೊಟ್ಟರೆ ಅದೇ ರೀತಿ ಮಾಡುತ್ತೇನೆ ಎಂದು ಹೇಳಿ ನನಗೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಶರಣಪ್ಪ (ದೇವದುರ್ಗ).—ಮಾನ್ಯ ಅಧ್ಯಕ್ಷರೇ, ಕೈಗಾರಿಕೆ ಬೇಡಿಕೆಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಕೆಲವೊಂದು ವಿಷಯದ ಮೇಲೆ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ನಾನು ಈ ಬೇಡಿಕೆಗಳಿಗೆ ಬೆಂಬಲ ಕೊಡುತ್ತಾ ನಮ್ಮ ಮೈಸೂರು ರಾಜ್ಯದ ಅನೇಕ ಭಾಗಗಳಲ್ಲಿ ಯಾವ ಯಾವ ಕೈಗಾರಿಕೆಗಳು ಇವೆ ಮತ್ತು ಅವು ಬೆಳೆಯುವುದಕ್ಕೆ ಯಾವ ರೀತಿಯಲ್ಲಿ ಪ್ರಯತ್ನ ಮಾಡಬೇಕು ಎಂಬ ಬಗ್ಗೆ ಒಂದೆರಡು ಮಾತುಗಳನ್ನು ಮಾತ್ರ ತಮ್ಮ ಮುಂದೆ ಇಡುತ್ತಾ ಇದ್ದೇನೆ. ಈಗ ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರಾ ಅಣೆಕಟ್ಟಿನಿಂದ ಸುಮಾರು ಐದೂವರೆ ಲಕ್ಷ ಎಕರೆ ಅಚ್ಚುಕಟ್ಟಿಗೆ ನೀರಾವರಿ ಯಾಗುತ್ತಾ ಇದೆ. ಅದರಲ್ಲಿ ಅರ್ಧಕ್ಕಿಂತ ಮೇಲ್ಪಟ್ಟು ಭೂಮಿಯಲ್ಲಿ ಬತ್ತ ಮತ್ತು ಕಬ್ಬು ಬೆಳೆಯುತ್ತಾ ಇದೆ. ಇಂತಹ ಪ್ರದೇಶವಾದ ರಾಯಚೂರು ಜಿಲ್ಲೆಗೆ ಒಂದು ಸಕ್ಕರೆ ಕಾರ್ಖಾನೆಯ ಅವಶ್ಯಕತೆ ಇದೆ, ಅದನ್ನು ಕೋ-ಆಪರೇಟೀವ್ ಬೇಸಿಸ್ ಮೇಲೆ ಆಗಲಿ ಅಥವಾ ಪ್ರೈವೇಟ್ ಸೆಕ್ಟರ್‌ನಲ್ಲಾಗಲಿ ಅಥವಾ ಅಲ್ಲಿಯ ಸ್ಥಳೀಯ ಜನರು ಮುಂದೆ ಬಂದದ್ದೇ ಆದರೆ ಜಾಯಿಂಟ್ ಸ್ಟಾಕ್ ಕಂಪೆನಿ ಬೇಸಿಸ್ ಮೇಲಾಗಲಿ ತೆಗೆಯುವುದಕ್ಕೆ ಸರ್ಕಾರದವರು ಆದಷ್ಟು ಹೆಚ್ಚಿನ ಗಮನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಇದಕ್ಕೆ ಮೊದಲು

[SRI B. V. MAGAVI in the Chair]

ಕೆಲವು ದಿನಗಳ ಹಿಂದೆ ಶ್ರೀಯುತರುಗಳಾದ ಜತ್ತಿಯವರು, ಮುಖ್ಯಮಂತ್ರಿಗಳು ಮತ್ತು ಮಲ್ಲಪ್ಪನವರ ಮುಂದೆ ರಾಯಚೂರು ಜಿಲ್ಲೆ ಬಹಳ ಹಿಂದುಳಿದ ಜಿಲ್ಲೆಯಾಗಿದೆ ಲೀಸ್ ಮೇಲೆ ನೂರಾರು ಎಕರೆ ಕೊಡಲು ಜನರೇ ಮುಂದೆ ಬಂದಿದ್ದಾರೆ ಎಂದು ಹೇಳಿದ್ದೆ, ಸರಕಾರವೂ ಅನೇಕ ದೃಷ್ಟಿಯಿಂದ ವಿಚಾರಮಾಡಿ ರಾಯಚೂರು ಜಿಲ್ಲೆಯಲ್ಲಿ ಒಂದಾದರೂ ಸಕ್ಕರೆ ಕಾರ್ಖಾನೆಯನ್ನು ಆದಷ್ಟು ಬೇಗ ಸ್ಥಾಪನೆ ಮಾಡುವ ಬಗ್ಗೆ ಸರಕಾರದವರು ಶ್ರದ್ಧೆಯಿಂದ ಯೋಚನೆ ಮಾಡಬಹುದೆಂದು ನಂಬಿದ್ದೇನೆ.

ಎರಡನೆಯದಾಗಿ ಕಬ್ಬು ಬೆಳೆಯುವ ಪ್ರದೇಶವಿರುವ ಹಾಗೆ ಹತ್ತಿ ಬೆಳೆಯುವ ಪ್ರದೇಶವೂ ಕೂಡ ರಾಯಚೂರು ಮತ್ತು ಕಲ್ಬುರ್ಗಿ ಪ್ರದೇಶದಲ್ಲಿದೆ. ಬಿಜಾಪುರದ ಬಹು ಭಾಗ ಕೂಡ ರಾಯಚೂರಿಗೆ ಸಮೀಪವಾಗಿದೆ. ಹಾಗಿರುವಾಗ ಲಕ್ಷವಿಟ್ಟು ಸ್ಪಿನ್ನಿಂಗ್ ಮಿಲ್ ಅಲ್ಲಿ ಒಂದೂ ಇಲ್ಲದಿರುವುದರಿಂದ ಹೆಚ್ಚು ಹತ್ತಿ ಅಲ್ಲಿ ಬೆಳೆಯುವುದನ್ನು ಗಮನಿಸಿ ನೂಲಿನ ಗಿರಣಿ ಸ್ಥಾಪಿಸುವುದನ್ನು ವಿಚಾರ ಮಾಡಬೇಕು. ಅಲ್ಲಿನ ಜನರು ಸಹಕಾರಿ ಬೇಸಿಸ್‌ಮೇಲೆ ಒಂದು ಹತ್ತಿಗಿರಣಿಯನ್ನು ಸ್ಥಾಪನೆಮಾಡಲು ಅದಕ್ಕೆ ಸುಮಾರು 7—8 ಲಕ್ಷ ರೂಪಾಯಿಗಳನ್ನು ಕೂಡ ಇದುವರೆಗೆ ಸಂಗ್ರಹಿಸಿದ್ದೇವೆ. ಅದಕ್ಕೆ ಸರಕಾರ 10 ಲಕ್ಷ ಸೇರಿಸಿದರೆ ನಾವೂ 10 ಲಕ್ಷ ಸಹಾಯಧನ ಕೊಡುತ್ತೇವೆ. ಅದಕ್ಕೆ ಕಡಮೆಯಾದರೆ ಸಹಾಯಮಾಡುವುದಿಲ್ಲ ಎಂಬ ನೀತಿಯನ್ನಿಟ್ಟುಕೊಂಡು ಇದುವರೆಗೆ ಸರಕಾರ ಸಹಾಯಮಾಡಿಲ್ಲ. ಆ ಕಂಡೀಷನ್ ಸ್ವಲ್ಪ ರಿಲ್ಯಾಕ್ಸ್‌ಮಾಡಿ ಇದುವರೆಗೆ ಜನರಲ್ಲಿ ಹಣದ ಅಭಾವವಿದ್ದುದರಿಂದ 10 ಲಕ್ಷ ಸಿಕ್ಕಿಲ್ಲ, ಈ ವರ್ಷ ಸಂಗ್ರಹಮಾಡುತ್ತೇವೆ ಎಂಬ ಭರವಸೆಯನ್ನು ಅನೇಕಸಲ ಕೊಟ್ಟಿದ್ದೇವೆ. ಆ ದೃಷ್ಟಿಯಿಂದ ಸರಕಾರ ತಮ್ಮ ಪಾಲಿನ ಹಣ ಕೊಟ್ಟು ಸ್ಪಿನ್ನಿಂಗ್ ಮಿಲ್ ಮುಂದುವರೆಸುವರೆಂದು ನಂಬಿದ್ದೇನೆ. ಹಾಗೆ ಮಾಡಿದರೆ ಜನರಲ್ಲಿ ಒಂದು ನಂಬಿಕೆ ಮತ್ತು ಉತ್ಸಾಹವುಂಟಾಗುತ್ತದೆ ಎಂದು ಸರಕಾರದ ಗಮನಕ್ಕೆ ತರುತ್ತಿದ್ದೇನೆ.

ಇನ್ನೊಂದು ವಿಷಯ. ಸಣ್ಣಸಣ್ಣ ಉದ್ಯಮಿಗಳಿಗೆ, ವಾಹನಗಳಿಗೆ ಅಥವ ಒಕ್ಕಲತನದ ಉದ್ಯಮಗಳಿಗೆ ಬೇಕಾದ ಸಲಕರಣೆಗೆ ನಾವು ಬಹಳ ದೂರದ ಸ್ಥಳಗಳಿಗೆ ಹೋಗಿ ಖರೀದಿಮಾಡಬೇಕಾಗುತ್ತದೆ. ಇದನ್ನು ನಿವಾರಣೆಮಾಡಲು ಈ ಕಷ್ಟ ತಪ್ಪಿಸಲು ತುಂಗಭದ್ರಾ ಜಲಾಶಯದ ಸಮೀಪದಲ್ಲಿ ವಿದ್ಯುಚ್ಛಕ್ತಿ ದೊರೆಯುವುದರಿಂದ ಸಣ್ಣ ಟ್ರ್ಯಾಕ್ಟರುಗಳನ್ನು ತಯಾರಿಸಲು ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡಿ ಒಕ್ಕಲಗರಿಗೆ ಒದಗಿಸಿದರೆ ಆ ಭಾಗದ ಜನರಿಗೆ ಅನೇಕ ದೃಷ್ಟಿಯಿಂದ, ಒಕ್ಕಲತನದ ದೃಷ್ಟಿಯಿಂದಮತ್ತು ಔದ್ಯೋಗಿಕ ದೃಷ್ಟಿಯಿಂದ ಒಳ್ಳೆಯ ಉಪಕಾರವಾಗಬಹುದು. ಆದುದರಿಂದ ಅಂಥ ಒಂದು ಕಾರ್ಖಾನೆಯನ್ನು ಅಲ್ಲಿ ಸ್ಥಾಪಿಸಬೇಕೆಂದು ಸರಕಾರದ ಗಮನಕ್ಕೆ ತರುತ್ತೇನೆ.

ಈಗ ಇಂಡಸ್ಟ್ರಿಯಲ್ ಎಸ್ಟೇಟನ್ನು ಒಂದು ಜಿಲ್ಲೆಗೆ ಒಂದನ್ನು ಕೊಡಬೇಕೆಂದು ಗೊತ್ತುಮಾಡಿದ್ದೀರಿ. ಆದರೆ ಇದುವರೆಗೂ ರಾಯಚೂರು ಜಿಲ್ಲೆಗೆ ಒಂದನ್ನು ಕೊಟ್ಟಿರುವುದಿಲ್ಲ. ಅಲ್ಲಿ ಕೆಲವು ಜನರು ಭೂಮಿ ಕೊಡುವುದಿಲ್ಲ, ಯೋಗ್ಯವಾದ ಸ್ಥಳ ಅಲ್ಲಿಲ್ಲ ಎಂದು ಕೆಲವು ಕಾರಣ ನಮೂದುಮಾಡುತ್ತಾರೆ. ಹೀಗಾಗಿ ಈ ದೃಷ್ಟಿಯಿಂದ ಅಲ್ಲಿ ಇಂಡಸ್ಟ್ರಿಯಲ್ ಎಸ್ಟೇಟು ಸ್ಥಾಪನೆಯಾಗಿರುವುದಿಲ್ಲ. ಈಗ ಅಲ್ಲಿ ಪವರ್ ಬಂದಿದೆ. ಆದಷ್ಟು ತ್ವರಿತವಾಗಿ ಅದನ್ನು ಅಲ್ಲಿ ಸ್ಥಾಪಿಸಬೇಕು. ಸ್ಥಳದ ವಿಷಯಕ್ಕಾಗಿ ಅನೇಕ ವರ್ಷ ಸಿಧಾನ ಮಾಡಿದರೆ ಬಹಳ ತೊಂದರೆಯಾಗುತ್ತದೆ.

ಕೊನೆಯದಾಗಿ, ವೀವರ್ಸ್ ಬಗ್ಗೆ ಯೋಚನೆ ಮಾಡುವ ಒಂದು ವಿಚಾರವಿದೆ. ನಮ್ಮ ಭಾಗದಲ್ಲಿ ಸಾಕಾದಷ್ಟು ಜನಸಂಖ್ಯೆ ಇದೆ. ಅನೇಕರು ಕೆಲಸವಿಲ್ಲದೆ ಹೊಟ್ಟೆಯ ಪಾಡಿಗಾಗಿ ಒದ್ದಾಡುತ್ತಿದ್ದಾರೆ. ನೂಲುವುದಕ್ಕೆ ಅವಕಾಶವಮಾಡಿಕೊಟ್ಟು ಅದಕ್ಕಾಗಿ ಸೊಸೈಟಿಗೆ ಸಹಾಯಮಾಡಿ ದುಡಿಮೆಗೆ ಅವಕಾಶ ಮಾಡಿ ನೇಕಾರರಿಗೆ ಸಂಭಾವನೆ ದೊರೆಯಲು ಅವಕಾಶವಮಾಡಿಕೊಡಬೇಕು. ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ಹೇಳಿದ ಮಹತ್ವದ ವಿಷಯಗಳ ಕಡೆ ಹೆಚ್ಚು ಗಮನ ಕೊಡಬೇಕೆಂದು ವಿನಂತಿಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸಭಾಪತಿಯವರೇ, ಈಗ ನನಗೆ ಸಿಕ್ಕಿರುವ ಕೇವಲ 3—4 ನಿಮಿಷಗಳ ಅವಧಿಯಲ್ಲಿ ಒಂದೇ ಒಂದು ವಿಷಯ ತಿಳಿಸುತ್ತೇನೆ. ಈ ಸಭೆಗೆ ನಾನು ಬಂದಾಗ ಪ್ರಪ್ರಥಮವಾಗಿ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಮೈಸೂರು ಸಂಸ್ಥಾನದ ಕಾಟನ್ ಕೋ-ಆಪರೇಟಿವ್ ಅಪೆಕ್ಸ್ ಸೊಸೈಟಿ ಸರಿಯಾಗಿ ಕೆಲಸಮಾಡುತ್ತಿಲ್ಲ ಎಂಬುದನ್ನು ಸರಕಾರ ಒಪ್ಪಿಕೊಂಡು ಅದನ್ನು ಪರಿಶೀಲಿಸಿ ಮಾನ್ಯ ಸಭೆಗೆ ಕ್ರಮ ತೆಗೆದುಕೊಂಡಿರುವುದನ್ನು ತಿಳಿಸುವುದಾಗಿ ಆಶ್ವಾಸನೆ ಕೊಟ್ಟರು. ಸುಮಾರು ಎರಡೂವರೆ ವರ್ಷಗಳಾದರೂ ಕೊಟ್ಟ ಆ ಆಶ್ವಾಸನೆ ಸಫಲವಾಗಿಲ್ಲ, ವಿಫಲವಾಗಿದೆ ಎಂದು ಬಹಳ ವಿಷಾದದಿಂದ ಉಗ್ರವಾಗಿ ಹೇಳಬೇಕಾದ ಸನ್ನಿವೇಶವಿದೆ. ಏಕೆಂದರೆ ಸುಮಾರು 15 ಲಕ್ಷ ರೂಪಾಯಿಗಳವರೆಗೆ ದುರುಪಯೋಗವಾಗಿದೆ, ಅನೇಕ ಹಂತಗಳಲ್ಲಿ ಹೀಗಾಗಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 250 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಈ ಅಪೆಕ್ಸ್ ಸೊಸೈಟಿಯಲ್ಲಿ ಈ ರೀತಿ ಅನ್ಯಾಯವಾಗಿದ್ದರೂ ಅದನ್ನು ನೋಡಿ ಸೂಕ್ತ ಕ್ರಮ ಕೈಕೊಳ್ಳುವ ದಿಟ್ಟ ಮನೋಭಾವವಿಲ್ಲದಿದ್ದರೆ ಇದಕ್ಕಾಗಿ ಇನ್ನಾವ ಭಾಷೆ ಉಪಯೋಗಿಸಬೇಕೋ ನನಗಂತೂ ಅರ್ಥವಾಗುವುದಿಲ್ಲ. ಮಾನ್ಯ ಮಂತ್ರಿಗಳ ವಿಷಯ ವೈಯಕ್ತಿಕವಾಗಿ ಹೇಳುವುದಾದರೆ ಅವರು ತಮ್ಮ ಉತ್ಸಾಹವನ್ನು ತೋರಿಸಿ ತಪ್ಪನ್ನು ಒಪ್ಪಿಕೊಂಡು ವಿಚಾರಣೆ ಮಾಡುತ್ತೇವೆಂದು ಅವರು ಹೇಳಿದರು. ಆದರೆ ಈಚೆಗೆ ಅದು ಯಾವ ಹಂತದಲ್ಲಿದೆಯೆಂಬುದು ತಿಳಿಯದೆ ಅದರ ವಿಷಯದಲ್ಲೇ ಅನುಮಾನಕ್ಕೆ ಕಾರಣವಾಗಿದೆ. ಆದುದರಿಂದ ಆದಷ್ಟು ಜಾಗ್ರತೆ ಇದಕ್ಕೆ ಗಮನ ಕೊಡಬೇಕು. ಮಂತ್ರಿಗಳಲ್ಲದಿದ್ದರೂ ಇದರಲ್ಲಿ ಡೀಲ್ ಮಾಡುವವರೇನು ಮಾಡುತ್ತಾರೋ ಎಂಬ ಅನುಮಾನವಿರುವುದರಿಂದ ಆದಷ್ಟು ಜಾಗ್ರತೆ ಕೊಟ್ಟಿರುವ ಆಶ್ವಾಸನೆಯನ್ನು ಈಡೇರಿಸುವುದಕ್ಕೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ತಿಳಿಸುತ್ತೇನೆ.

ಸರ್ಕಾರದವರೇ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಹಾಸನ ಜಿಲ್ಲೆ ಕೈಗಾರಿಕೆಗಳಲ್ಲಿ ಬಹಳ ಹಿಂದುಳಿದಿದೆ. ಈಗಿನ ಮಂತ್ರಿಗಳು ಸದೈವದಿಂದ ಕೈಗಾರಿಕಾ ಮಂತ್ರಿಗಳಾಗಿ ಬಂದಿದ್ದಾರೆ. ಅವರು ಬುದ್ಧಿವಂತರು, ಮತ್ತು ದಕ್ಷರು. ಅವರು ಹಾಸನ ಜಿಲ್ಲೆಗೆ ಹೆಚ್ಚಿನ ನೆರವನ್ನು ಕೊಡುವುದಾಗಿ ಈ ಸಭೆಯಲ್ಲಿ ಅನೇಕ ಸಲ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಸ್ವಲ್ಪ ವಿಳಂಬವಾಗಿದೆ. ಮಾನ್ಯ ಮಂತ್ರಿಗಳು ಆದಷ್ಟು ಜಾಗ್ರತೆ ತಮ್ಮ ಆಶ್ವಾಸನೆಯನು ಈಡೇರಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಂಬಿದ್ದೇನೆ.

ಹಾಸನದ ಅನೇಕ ಮುಖಂಡರು ಮತ್ತು ಮಾನ್ಯ ಸಭೆಯ ಸದಸ್ಯರೂ ಹಾಸನಕ್ಕೆ ಒಂದು ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಹಾಕಬೇಕು ಎಂದು ಹೇಳಿದ್ದಾರೆ. ಅಲ್ಲಿ ಆಲೂಗಡ್ಡೆ ಹೆಚ್ಚಾಗಿ ಬೆಳೆಯುತ್ತದೆ. ಅಲ್ಲಿಗೆ ಒಂದು ಡೀಹೈಡ್ರೇಟ್ ಪ್ಲಾಂಟ್ ಸಹ ಹಾಕಬೇಕೆಂದು ತಿಳಿಸಿದ್ದಾರೆ. ಅದರ ಬಗ್ಗೆ ಆಶ್ವಾಸನೆ ಕೊಟ್ಟಿರತಕ್ಕದ್ದು ಯಾವ ಹಂತದಲ್ಲಿದೆ ಎನ್ನುವುದನ್ನು ತಿಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಸಹಕಾರ ತತ್ವದ ಆಧಾರದ ಮೇಲೆ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ಷೇರು ಮೊಬಲಗನ್ನು ವಸೂಲಿ ಮಾಡಿ ಒಂದು ಕಾರ್ಖಾನೆ ಅಲ್ಲಿಗೆ ಸಿಕ್ಕುತ್ತದೆ ಎನ್ನುವ ಧಾಟಿಯಲ್ಲಿ ಹಾಸನ ಜಿಲ್ಲಾ ಮುಖಂಡರು ಮುಂದುವರೆದಿದ್ದಾರೆ. ಇದಕ್ಕೆ ಕೂಡ ಸರ್ಕಾರ ತನ್ನ ಸಹಾನುಭೂತಿಯ ನೆರವನ್ನು ಕೊಡಬೇಕೆಂದು ತಿಳಿಸುತ್ತೇನೆ.

ಹೊಳೆನರಸೀಪುರದಲ್ಲಿ ಒಂದು ಸಿಮೆಂಟ್ ಆಸ್ಬೆಸ್ಟಾಸ್ ಕಾರ್ಖಾನೆ ತೆಗೆಯುವ ವಿಚಾರ ಸರ್ಕಾರದ ಮುಂದೆ ದೊಡ್ಡ ಸಮಸ್ಯೆಯಾಗಿದೆ. ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಮಾನ್ಯ ಮಂತ್ರಿಗಳೂ ವಹಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿಕೊಂಡು ಸ್ಥಳದ ಪರಿಶೀಲನೆ ಮಾಡಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದನ್ನು ನಡೆಸಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಬಾಗೇಶಪುರದಲ್ಲಿ ಒಂದು ಕಾರ್ಖಾನೆಯನ್ನು ಹಾಕುವುದಕ್ಕೆ ಸಾಧ್ಯವಿದೆ. ಅದು ಹಿಂದುಳಿದ ಪ್ರದೇಶ. ಅಲ್ಲಿಗೆ ಒಂದು ಕಾರ್ಖಾನೆಯನ್ನು ಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

Sri K. MALLAPPA.—Sir, some Hon'ble Members expressed that the industrial development of the State is not satisfactory. Although this is not correct, I should like to say that the progress was somewhat halted due to the fact that there was power shortage in the country. If power shortage was not there, there would not have been the halting and the progress of industries would have been as we all expected. Now that the Sharavathi power project has been commissioned the pace for rapid industrial growth has been set and it would be the highest endevaour of the State to see that this is achieved with all speed. With this object in view, the Government has drawn up a comprehensive programme. I will now review briefly the programme the Government has set before it and also the means and methods by which Government intends in fulfilling it.

Sir, Government has decided to give immediate attention to expand and diversify the production of the existing Government industries. That will be the first and the immediate attention that the Government has decided to give. I will now briefly give the various industries which the Government intends to expand and diversify.

Sir, in the Mysore Iron and Steel, Bhadravathi, the expansion and conversion of mild steel into special steel has been taken up at a cost of 18 crores and the work has been going on. There was however some delay initially. The delay was beyond the control of Government. Nevertheless, progress has been kept up and it is hoped that by the end of 1965-66 the factory will be able to produce about 77,000 tons of special steel. Proposals are also under consideration to raise the production of special steel to 1,30,000 tons in the Fourth Five-Year Plan period and advance action is going to be taken during the next year. To meet the needs of the expansion of the steel production, the pig iron production during the Fourth Plan will be raised to the extent of about 200 thousand tons.

The next is the Government Porcelain Factory. This factory is now to be modernised and arrangement has been made to secure the collaboration and also equity participation by the famous Electro-Porcelain Manufacturing company of Japan *i.e.* N.G.K. Arrangements will be made immediately to raise the production from 2,500 tons to 5,000 tons not only of the sort of porcelain we have been producing at present but also higher ranges *i.e.*, high tension insulators. Similarly, the Government Electric Factory is going to be modernised and its production capacity would be raised.

Government Soap Factory has been producing at present about 1,500 tons of soap. It is now intended to raise its production to 6,000 tons and the machinery costing about 33.70 lakhs has been already ordered and it is being manufactured in Italy. It is an automatic type of machinery and by June we are expecting to have the machinery here and when that is installed, the production of the factory will not only increase but the quality of the soap will also be improved.

The Implements Factory at Hassan will be reaching its target production of 30 lakhs this year. Some Hon'ble Member said that it should be improved to produce agricultural implements required by agriculturists. At present, the factory has been producing agricultural implements required by agriculturists and to its maximum capacity. Arrangements will be made to raise the production to 60 lakhs next year and the investment required in this respect will be about 30 lakhs. It is producing pick-axes, crow bars, etc. I may tell my Hon'ble Friend that there is such a large demand for pick axes and mumties that we are not in a position to meet the demand and that is why production is going to be doubled. In about a year production will be raised to Rs. 60 lakhs and arrangements have been made to install additional machinery costing about Rs. 30 lakhs.

3-30 P.M.

There is a very heavy demand for electrical goods in the country. Sharavathy has gone into production. We have to build up transmission lines. Rural parts have to be electrified. There is a very large demand for motors, switchgears and transformers and to meet this increased demand the New Electric Factory is going to be expanded. The cost of this factory was estimated to begin with at about Rs. 5 or 6 crores, but now it is proposed to be raised to Rs. 8 crores and it will be expanded to produce not only lower range transformers but also higher range of transformers.

Having done this, we also intend to devote our attention for the establishment of basic and heavy industries. Hon'ble Members may be aware of the efforts made by this State to have the fifth integrated steel plant at Hospet. The Government of India appointed an expert committee namely the Dastur Committee and this committee has already submitted feasibility report to the Government of India. Our Government also constituted a committee of experts and experienced persons. They have collected all the facts and figures and the data so collected has been incorporated in a brochure which has been made available to all the Hon'ble Members. It will be seen from that brochure that from all points of view, from the availability of raw materials, from the suitability of site, communications, etc., Hospet is eminently suited for the fifth major steel plant. Quite recently, the Anglo-American Consortium which has undertaken to build a major steel plant in India visited Hospet, examined the ore available there and other facilities which can be had there. The data collected by the committee appointed by the State Government has been made available to the consortium team which visited Hospet and I am glad to say that the team is very much impressed about the suitability of the site and I am confident that the team will recommend Hospet as one of the most suitable sites to the Government of India. It is the firm belief of this Government that the Government of India is going to decide in favour of Hospet as the site of the fifth steel plant as that site has got every facility that is required for a major steel plant.

